# ಜಕ್ಕಣ ಮತ್ತು ಇತರ ಏಕಾಂಕ ನಾಟಕಗಳು

## ಮುನ್ನುಡಿ

ನಾನು ಆಗಾಗ ಬರೆದ ಐದು ಸಣ್ಣ ನಾಟಕಗಳನ್ನು ಅಥವಾ ಏಕಾಂಕಗಳನ್ನು ಇಲ್ಲಿ ಒಟ್ಟಾಗಿ ಸೇರಿಸಿಕೊಡುತ್ತಿದ್ದೇನೆ. ಇವೆಲ್ಲ ಈ ಹಿಂದೆ ಪತ್ರಿಕೆಗಳಲ್ಲಿ ಬಂದಿರುವಂಥವೇ. 'ಹಳವಂಡಗಳು', 'ಜಕ್ಕಣ', 'ಭಾರತಾಂಬೆ'- ಇವು ಪ್ರಜಾವಾಣಿಯ ದೀಪಾವಳಿ ವಿಶೇಷಾಂಕಗಳಲ್ಲೂ, 'ಖರೋಖರ' ಉದಯವಾಣಿಯ ದೀಪಾವಳಿ ವಿಶೇಷಾಂಕದಲ್ಲೂ, 'ನಾರ್ಸಿಸಸ್' ಸಂಕ್ರಮಣದಲ್ಲೂ ಅಚ್ಚಾಗಿದ್ದವು. 'ಜಕ್ಕಣ' ೨೦೦೮ರ ಪ್ರಜಾವಾಣಿಯ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಯಿತು. 'ಬೆಂಬತ್ತಿದ ಕಣ್ಣು' ನನ್ನ ಮೊಟ್ಟಮೊದಲನೆಯ ನಾಟಕವಾದ್ದರಿಂದ ಇಲ್ಲಿದೆ. 'ಭಾರತಾಂಬೆ' ಈ ಹಿಂದೆ ಮತಾಂತರ ಎಂಬ ಹೆಸರಿನಲ್ಲಿತ್ತು ಈ ನಾಟಕಕ್ಕೆ ಜೀನ್ ಪಾಲ್ ಸಾರ್ತ್ರೆ ಅವರ ಫ್ರೆಂಚ್ ನಾಟಕದ ಇಂಗ್ಲಿಷ್ ಅನುವಾದ The Respectful Prostituteದ ಪ್ರೇರಣೆ ಉದ್ದಕ್ಕೂ ಇದೆ. ಅಥವಾ ಇದರಲ್ಲೇನಾದರೂ ಗುಣ ಇದ್ದರೆ ಅದು ಮೂಲ ನಾಟಕಕ್ಕೆ ಸೇರಬೇಕೆಂದು ಹೇಳ ಬಯಸುತ್ತೇನೆ. ಜಕ್ಕಣ ಹೊರತುಪಡಿಸಿ ಉಳಿದ ನಾಟಕಗಳು ೧೯೮೯ರಲ್ಲಿ ಸಂಕಲನವಾಗಿ ಹೊರಬಂದಿದ್ದವು.

ಈ ನಾಟಕಗಳನ್ನು ತಮ್ಮ ಪತ್ರಿಕೆಗಳಲ್ಲಿ ಅಚ್ಚು ಮಾಡಿದ ಸಂಪಾದಕರಿಗೆ,

ಆಡಿದ ನೋಡಿದ ಮಹಾಶಯರಿಗೆ,

ಪ್ರಕಟಿಸಿದ ಅಂಕಿತ ಪುಸ್ತಕದ ಶ್ರೀ ಪ್ರಕಾಶ್ ಕಂಬತ್ತಳ್ಳಿ ಅವರಿಗೆ,

ವಂದನೆಗಳು.

**ಚಂದ್ರಶೇಖರ ಕಂಬಾರ**
೨೦೧೧

## ಖರೋಖರ

*(ಧಾರವಾಡದ ಅಶೋಕ ಪಾರ್ಕ್. ರಾತ್ರಿ ಹತ್ತು ಘಂಟೆ ಸಮಯ. ರಂಗದ ಹಿಂಭಾಗದಲ್ಲಿ ದಟ್ಟವಾದ ಮಳೆ. ಅಲ್ಲೊಂದು ಬೆಂಚು. ರಂಗದ ಮುಂಭಾಗದಲ್ಲಿ ಬೆಳಕಿದೆ. ಬೆಳಕಿರುವಲ್ಲಿ ಎಡಭಾಗಕ್ಕೊಂದು ಬೆಂಚು. ತೆರೆ ಸರಿದಾಗ ಪೋಲೀಸ್ ಹೆಡ್‌ಕಾನ್ಸ್‌ಟೇಬಲ್ ಹದಿನೆಂಟು, ಬೀಡಿ ಸೇದುತ್ತ ಬರುತ್ತಾನೆ. ವಯಸ್ಸು ೫೦ ರ ಮೇಲೆ. ಸ್ವಲ್ಪ ಸಮಯವಾದ ಮೇಲೆ ದೂರದಿಂದ ಪೋಲೀಸ್ ಸೀಟಿ ಕೇಳಿಸುತ್ತದೆ. ಅದಕ್ಕುತ್ತರವಾಗಿ ಇವನೂ ಸೀಟಿ ಊದುತ್ತಾನೆ. ಮತ್ತೆ ಬೀಡಿ ಸೇದುತ್ತ ಪ್ರೇಕ್ಷಕರನ್ನು ಕುರಿತು ಮಾತಾಡತೊಡಗುತ್ತಾನೆ)*

ಹದಿನೆಂಟು : ನಾನು ಪೋಲೀಸ್ ಹೆಡ್‌ಕಾನ್ಸ್‌ಟೇಬಲ್ ಚಿಕ್ಕೀರ ಅಂತ. ನಾನಂತೂ ಸಿವಿಲ್ ಡ್ರೆಸ್ ಹೊಲಿಸಿಲ್ಲ. ಅಟೆಂಡೆನ್ಸ್ ರಿಜಿಸ್ಟರದಾಗ ಚಿಕ್ಕೀರ ಅಂತ ಬರದೈತಿ ಖರೆ, ಹಾಗಂತ ನನ್ನ ಯಾರೂ ಕರ್ಯಾಣೆಲ್ಲ. ಕರದರ ನಾ ಓ ಅನ್ನಾಣೆಲ್ಲ. ಮ್ಯಾಲಿನವರೆಲ್ಲಾ ನನ್ನ 'ಹದಿನೆಂಟು' ಅಂತಾರ, ಯಾಕಂದರ ನನ್ನ ನಂಬರ ಹದಿನೆಂಟ ಐತಿ. ಹದಿನೆಂಟು ಅಂದರ ಹದಿನೆಂಟ ಸುಳ್ಳ ಹೇಳಾವಂತ್ಲೂ ಐತಿ. ಬಹುಶಃ ಹದಿನೆಂಟ ಸುಳ್ಳಿಗೂ ನನ್ನ ನಂಬರಿಗೂ ಅರ್ಥಾತ್ ಸಂಬಂಧ ಇರಲಿಕ್ಕಿಲ್ಲ. ನಿಮ್ಮ ಕಣ್ಣಿಗೆ ನಾ ಎಲ್ಲಾ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ಹ್ಹಾಂಗ ಕಾಣತಿರಬಹುದು. ಆದರ ಜಾತ್ಯಾ ಪೋಲೀಸರಿಗೂ ನನಗೂ ಭಾಳ ಫರಕ ಐತಿ. ಹೇಳಿದರ ಕೈ ಬಡದ

ನಕ್ಕೀರೆಪಾ- ನಾ ಪೋಲೀಸಾದ್ದು ಲಂಚಾ ತಿನ್ನಾಕಲ್ಲ. ನಾ ಸಣ್ಣಂದಿರತ- ಹತ್ತ, ಹನ್ನಾಡ ವಯಸ್ಸಿರಬೇಕು, ನಮ್ಮೂರಾಗೊಮ್ಮಿ ಕಳವಾಯ್ತು. ಒಬ್ಬ ಪೋಲೀಸ ಬಂದಿದ್ದ. ಏನ ಡ್ರೆಸ್ಸದು! ದೇವರ ಕಿರೀಟದಂಥಾ ಟೋಪಿಗಿ. ಇಕ್ಕs ಈಗ ಇಸ್ತ್ರಿ ಮಾಡಿಥಾಂಗ ಚಣ್ಣ, ಅಂಗಿ; ಅದನೇನ ಮಾಡ್ತೀರಿ ನಡೀಗಿ ಅಂಗ್ಯೆಯಗಲ ಬೆಲ್ಟು. ಎಡಗೈಯಾಗೊಂದು ಗುಂಡ ಬಡಗಿ. ಬಲಗೈಯಾಗೊಂದು ಬೀಡಿ- ಅಲಲಲಲ! ಸ್ವಥಾ ನಮ್ಮ ತಿರುಪತಿ ತಿಮ್ಮಪ್ಪನs ಅಡ್ಡಾಡಕೋತ ಬೀಡಿ ಸೇದಿಥಾಂಗ! ದೇವರ ಸಮಾ ನಿಮ್ಮ ಮುಂದ ಹೇಳ್ತೀನ್ರಿ- ಅವ ಬಂದ ಮೂರ ಬೀಡಿ ಸೇದೋದರೊಳಗ ಮುಚ್ಚಿಟ್ಟ ಖರೆ ಕೊಸರಿಕೊಂಡ ಹೊರಗ ಬಂತ! ಕಳವಾದ ಮಾಲ ಬಂದ ಚಾವಡ್ಯಾಗ ಬಿತ್ತು! ಏನ ಮಹಿಮಾ! ಏನ ಪವಾಡ! ಅಂದs ಅಂದಕೊಂಡಬಿಟ್ಟೆ: ಆದರ ನಾ ಪೋಲೀಸs ಆಗಬೇಕಂತ. ಆಮ್ಯಾಲ ಪೋಲೀಸೂ ಆದೆ, ಅಂದಂತೂ ಏನ ಸಡಗರ ಮಾಡಿದೆ! ರಾತ್ರಿ ಡ್ರೆಸ್ ಕಳೀಲೇ ಇಲ್ಲ. ಹಾಂಗs ಮಲಗಿದೆ. ಕನಸಿನಾಗ ತಿರುಪತಿ ತಿಮ್ಮಪ್ಪ ಬಂದ. ನೋಡತೀನಿ: ದೇವರs ಪೋಲೀಸರ್ಹಾಂಗ ಡ್ರೆಸ್ ಹಾಕಿದ್ದ! "ಎಪ್ಪಾs" ಅಂದೆ. "ಮಗನ" ಅಂದ. ಬಲಗೈಯಾಗ ಬೀಡಿ ಇತ್ತು; ಹಾಂಗs ಆಶೀರ್ವಾದ ಮಾಡಿ, ಕೇಳಿದ: "ಮಗನs ಈ ಜಗತ್ತಿನ ಮಂದಿಗೆಲ್ಲಾ ಒಂದ ಐತಿ; ಒಂದ ಇಲ್ಲಾ; ಏನ ಹೇಳು."

"ಗೊತ್ತಿಲ್ಲೆಪಾ"

"ಇಷ್ಟೂ ತಿಳಿಯಾಣಿಲ್ಲೇನೋ- ದುಃಖ ಐತಿ; ಸುಖ ಇಲ್ಲಾ" ಅಲಲಲ! ಏನ ಶಾಣ್ಯಾ ನಮ್ಮ ದೇವರು! ಮತ್ತ ಅಂದ.

"ನೋಡೋ ಈ ಮಂದಿಗಿ ಸುಖಾ ಇಲ್ಲ ಅಂದ್ನೆಲ್ಲಾ- ಯಾಕಿಲ್ಲಾ ಗೊತ್ತೈತೇನು?"

"ಎಷ್ಟು ಗೊತ್ತಿಲ್ಲರೀ".

"ಯಾಕಂದರ ಮಂದಿ ಜಗಳಾಡತಾರೋ! ಯಾಕ ಜಗಳಾಡತಾರ?"

"ಸುಳ್ಳ ಸುಳ್ಳ ಜಗಳಾಡತಾರರೀ,"

"ಸುಳ್ಳ ಸುಳ್ಳ ಅಲ್ಲೋ ಮಗನs ಖರೆ ಖರೆ ಜಗಳಾಡತಾರ!"

"ಹಂಗಾದರ ಖರೆ ಎಲ್ಲಿರತೈತಿ ಎಪಾ!"

"ನಿನ್ನಲ್ಲಿ ಐತಿ ಅಂತ ನೀ ಅಂತಿ, ಮಂದಿ, ಅದಕ್ಕ ಸುಳ್ಳಂತಾರ.

ಮಂದೀ ಖರೆ ನಿನಗ ಸುಳ್ಳ ಕಾಣಸ್ತೈತಿ."

"ಹಂಗಾದರ ಖರೇನs ಇಲ್ಲಂತೀಯಪಾ?"

"ಐತೋ ಇಲ್ಲೋ! ಅದರ ಉಸಾಬರಿ ನನಗ ನಿನಗ ಯಾಕೋ?"

ಒಬ್ಬೊಬ್ಬಗ ಒಂದೊಂದ ಖರೆ ಇರತೈತಿ! ನಿಂದ ಬಿಟ್ಟ ಇನ್ನೊಬ್ಬರ ಖರೆ ನುಂಗಬ್ಯಾಡ. ಮಂದೀ ಖರೆ ನುಂಗೋದಂದರ ಕುಡಗೋಲ ನುಂಗಿಥಾಂಗೇ ನಪಾ. ಕುಡಗೋಲ ನುಂಗಿದರ ಏನಾಗತೈತಿ?

"ಬುಡ ಹರೀತೈತಿ!"

"ಬುಡ ಹರದರ ಮೋತಿ ನೋಡಾಕ ಆಗತೈತೇನೊ ಮಗನ?"

“ಆಗತೈತಿ, ಅದರ ಕಣ್ಣೀರ ಬರತಾವೆಪ್ಪ.”

ಅದಕ್ಕ ಹೇಳ್ತೀನಪ್ಪಾ, ಅವರವರು ಅವರವರ ಖರೇನs ನುಂಗಬೇಕು. ಅಂದರ ಅದು ಒಳಗ ಹೋಗಿ ಕೂಸಾಗಿ ಹೊರಗ ಬರತೈತಿ. ಇಲ್ಲದಿದ್ದರ ಐತೆಲ್ಲ –” “ಆದರ ಎಪ್ಪ, ಮಂದೀ ಖರೆ ನುಂಗಿದವರು ಮಕ್ಕಳಾ ಹಡದಿಲ್ಲಂದಿರಿ?”

“ಎಷ್ಟ ಧಡ್ಡದೀಯೋ ಮಗನs! ಮನಿಶಾನ ಮನಸ ನಮಗ ತಿಳಿದೈತಿ? ತಿಳಿದಿದ್ದರ ನಾ ದೇವರ್ಯಾಕ ಆಗತ್ತಿದ್ದೆ? ನೀ ಸರಕಾರ ಯಾಕ ಆಗತಿದ್ದಿ? ನಾವಿಬ್ಬರೂ ನಿಶ್ಚಿಂತಿ  ಇರಬೇಕಂದರ ನೀ ಮಂದಿಗಿ ತಿಳಿಸಿ ಹೇಳಬೇಕು, ಏನ ಹೇಳು.”

“ತಿಳೀತೆಪ್ಪ ತಿಳೀತು. ಅಪಾ ಕುಡಗೋಲು ನುಂಗಬ್ಯಾಡ್ರೋ”

“ತಥಾಸ್ತು”

ಅಂದ ಮಾಯವಾದ! ಗಪ್ಪನ ಎಚ್ಚರಾಗಿ ಕಣ್ಣ ತೆರೆದ ನೋಡತೇನು: ಪುಟ್ಟ ಪೂರಾ ಬೆಳಗಾಗೇತಿ. ಅಂದಿನಿಂದ ನೋಡ್ರೆಪಾ ದೇವರಾಣಿ ಖರೇ ಹೇಳತೇನು. ಈ ಡ್ರೆಸ್ ಹಾಕಿದಾಗ- ಸುಳ್ಳಾಡಾಣಿಲ್ಲ, ಲಂಚ ತಿನ್ನಾಣಿಲ್ಲ; ಪಾರ್ಕಿಗೆ ಬಂದ ಮಂದಿಗೆಲ್ಲಾ ಹೇಳತಿರತೇನು; ಅಪಾ ಕುಡಗೋಲು ನುಂಗಬ್ಯಾಡ್ರೋ- ಅಂತ
*(ಅಷ್ಟರಲ್ಲಿ ‘ಟ್ವೆಂಟಿ ಇನ್ನೊಬ್ಬ ಪೋಲೀಸ-೨೦ ರ ಒಗರು ಬರುವನು)* ನನ್ನ ಮಾತು ಯಾರು ಕೇಳೋದs ಇಲ್ಲ.

ಟ್ವೆಂಟಿ : *(ಸೆಲ್ಯೂಟ್ ಹೊಡೆದು)*

ಎಸ್ಸರ್.

ಹದಿನೆಂಟು : ಏ ಟ್ರೆಂಟೀ ಎಲ್ಲಿ ಹೋಗಿದ್ಯೋ ಸರಗ್ಯಾಡಕ? ಪಾರ್ಕಿನ ತುಂಬ ಒಂದ ರೌಂಡ ಹೊಡದ ಬಂದೇನ?

ಟ್ವೆಂಟಿ : ಬಂದೆ ಸರ್.

ಹದಿನೆಂಟು : ಎಷ್ಟು ಹೊತ್ತು?

ಟ್ವೆಂಟಿ : ಹಾಪ್ ಅವರ್ ಸರ್.

ಹದಿನೆಂಟು : ಯಾಕಲೆ ಎದುರುತ್ತರ ಕೊಡತಿ? ಬೇಕೇನ ಬೆನ್ನ ಮ್ಯಾಗೆರಡು?

ಟ್ವೆಂಟಿ : *(ಸುಮ್ಮನಿರುವನು)*

ಹದಿನೆಂಟು : ಎಲ್ಲಾರೂ ಪಾರ್ಕ್ ಬಿಟ್ಟ ಹೋದರೇನು?

ಟ್ವೆಂಟಿ : ಹೋದ್ರು ಸರ್. ಎಲ್ಲರಿಗೂ ಹೇಳ್ದೆ ಸರ್.

ಹದಿನೆಂಟು : ಏನು ಹೇಳಿದೆ?

ಟ್ವೆಂಟಿ : ಕುಡಗೋಲ ನುಂಗಬ್ಯಾಡ್ರಿ ಅಂತ ಹೇಳಿದೆ.

ಹದಿನೆಂಟು : *(ಖುಷಿಯಾಗಿ)*

ಬಂದೋಬಸ್ತಂದರ ಹಾಂಗಿರಬೇಕು. ನಿನಗ ತಿಳಿಯಾಣಿಲ್ಲಪಾ ಪೋಲೀಸಂದರ ಹಾಂಗs ಇರಬೇಕು. ಯಾಕಂದರ….

ಟ್ವೆಂಟಿ : ಗೊತ್ತು ಸರ್. ನಿಮ್ಮ ಕನಸಿನಾಗ ತಿರುಪತಿ ತಿಮ್ಮಪ್ಪ….

ಹದಿನೆಂಟು : ಹೆದರಬ್ಯಾಡ, ಅದನೇನೂ ನಿನ್ನ ಮುಂದ ರಿಪೀಟ ಮಾಡಾಣಿಲ್ಲ. ಹಾಂಗ ಗಿಡ, ಕಂಟಿ, ನೆರಳು ಕತ್ತಲ ಮರೆ ಇದ್ದದ್ದೆಲ್ಲಾ ಇನ್ನೊಮ್ಮಿನೋಡೋಣ ಬಾ. ಈ ಕಾಲೇಜ ಹುಡುಗರೋ…. ನೀ ಈ ಕಡಿಂದ ಹೋಗು, ನಾ ಆ ಕಡಿಂದ ಬರತೀನಿ.

ಟ್ವೆಂಟಿ : ಎಸ್ಸರ್.

*(ಇಬ್ಬರೂ ಒಂದೊಂದು ದಿಕ್ಕಿಗೆ ಹೋಗುವರು. ಒಂದು ಹೆಂಗಸು ಹೆದರಿ ಹೆದರಿ ಒಂದು ಬುಟ್ಟಿ ತಂದು ರಂಗದ ಹಿಂಭಾಗದ ಮಳೆಯ ಮರೆಯಲ್ಲಿ ಅವಸರವಾಗಿಟ್ಟು ಹೊರಬರುವಳು. ಅತ್ತಿತ್ತ ನೋಡಿ ಓಡಬೇಕೆಂದು ಸಿದ್ಧಳಾಗುವಷ್ಟರಲ್ಲಿ ಪೋಲೀಸ್ ಸೀಟಿ ಕೇಳಿಸುವುದು. ಹೋದವರಿಬ್ಬರೂ ಬರುತ್ತಿರುವುದನ್ನು ಗಮನಿಸಿ ಧೈರ್ಯ ತಂದುಕೊಳ್ಳುವಳು. ಇಬ್ಬರೂ ಪೋಲೀಸರು ತಂತಮ್ಮ ದಿಕ್ಕಿನಿಂದ ಪ್ರತ್ಯಕ್ಷರಾಗುವರು. ಟ್ವೆಂಟಿ ಬಳಿ ಸಾರುವನು. ಹದಿನೆಂಟು ದೂರ ನಿಂತು ಗಮನಿಸುತ್ತಿರುವನು.)*

ಟ್ವೆಂಟಿ : ಯಾರಬೇ ನೀನು?

ಹೆಂಗಸು : ಕಾಣಸಾಣಿಲ್ಲಾ? ಮನಶೇರು.

ಟ್ವೆಂಟಿ : ತಿಳದ ಬಂತು. ತಾಯಿ ಇಲ್ಲಿಗ್ಯಾಕ ಬಂದಿ?

ಹೆಂಗಸು : ಮಂದೆಲ್ಲಾ ಯಾಕ ಬರತಾರ?

ಟ್ವೆಂಟಿ : ಎಲೀ ಇದರ! ತಾಯೀ, ಹಸೀಖಾರ ತಿಂದ ಬಂದೀಯಂತ ನನಗಾದರು ತಿಳೀತು; ಮ್ಯಾಲ ನಮ್ಮ ಸಾಹೇಬರಿಗಾದರು ತಿಳೀತು. ಇಲ್ಲೇನ ತಿನ್ನಾಕ ಬಂದಿ?

ಹೆಂಗಸು : ಗಾಳಿ ಹವಾ ತಿನ್ನಾಕ.

ಟ್ವೆಂಟಿ : ಭಲೆ ಭಲೆ! ತಿಂದೇನ?

ಹೆಂಗಸು : ಅದನೇನ ಧರಿಕಿ ಹೊಡದ ತೋರಸಬೇಕ?

ಟ್ವೆಂಟಿ : ಬ್ಯಾಡ ಎವ್ವಾ! ನೀ ಗಾಳಿ ಹವಾ ತಿಂಧಾಂಗಾಯ್ತು. ತಿಂದ ಹವಾ ನೆತ್ತಿಗೆ ಹತ್ತಿಧಾಂಗಾಯ್ತು. ಇನ್ನ ನಡೀತಿರೀ?

ಹೆಂಗಸು : ಗೇಟ ಬಾಗಲ ಎಲ್ಲಿ ಐತಿ?

ಟ್ವೆಂಟಿ : ಬರೋವಾಗ ಹೆಂಗ ಗ್ವಾಡೀ ಜಿಗದ ಬಂದ್ರಿ?

ಹೆಂಗಸು : ಇಲ್ಲಾ ಪಕ್ಕಬಿಚ್ಚಿ ಹಾರಕೋತ ಬಂದೆ!

ಟ್ವೆಂಟಿ : ಇದ್ದಿರಬೇಕು. ಗೇಟ ಬಾಗಲಾ ತೋರಸಲಿ?

ಹದಿನೆಂಟು : ಏ ಟ್ವೆಂಟೀ. ನಾ ಸೀನಿಯರ್ ಇರೋವಾಗ ನನ್ನ ಕೇಳದ‌ಽ ಗೇಟ ಬಾಗಲಾ ತೋರಸ್ತಿಯೇನೋ ರಾಸ್ಕಲ್?

ಟ್ವೆಂಟಿ : ಎಸ್ಸರ್, ಸರ್. ಈಕಿಗಿ ಗೇಟ ಬಾಗಲಾ ತೋರಿಸಲಿ!

ಹದಿನೆಂಟು : ಆಲ್‌ರೈಟ್, ತೋರಿಸು.

ಟ್ವೆಂಟಿ : ಹಿಂಗ ಹೋಗವಾ‌ಽ

ಹದಿನೆಂಟು : ಏ ಟ್ವೆಂಟೀ,

ಟ್ವೆಂಟಿ : ಎಸ್ಸರ್, ಹಾಂಗೆಲ್ಲಾ ಕುಡಗೋಲ ನುಂಗಬಾರದವಾ!

ಹೆಂಗಸು : *(ತಿರುಗಿ ನಿಂತು)*

ಕುಡಗೋಲ? ಯಾಕಲಾ ಭಾಡಕೌ? ಮಾನವಂತ ಹೆಣಮಗಳಿಗಿ ಹಿಂಗೆಲ್ಲಾ ಮಾತಾಡ್ತಿ? ಏಟುದ್ದ ಐತ್ಯೋ ನಿನ್ನ ಕುಡಗೋಲು? ನಾಕಾಣಿ ಖಾಕೀ ಚಣ್ಣ ಹಾಕೀಯಂತ ನನ್ನ ಮುಂದ ಧಿಮಾಕ ತೋರಸ್ತಿಯೇನೋ?
*(ಜಗಳವಾಡಲು ಸಿದ್ಧಳಾಗಿ ಸರ‍್ರನೆ ಸೆರಗು ಬಿಗಿಯುವಳು. ಟ್ವೆಂಟಿ ಹೆದರಿ 'ಸರ್ ಸರ್' ಎಂದು ಹದಿನೆಂಟನ ಬಳಿಗೆ ಓಡುವನು. ಹೆಂಗಸು ಸುಮ್ಮನಾಗಿ ಸೆರಗು ಸರಿಪಡಿಸಿಕೊಳ್ಳುತ್ತ ಹೋಗುವಳು)*

ಟ್ವೆಂಟಿ : ಸರ್, ಇದು ಕುಡಗೋಲ ನುಂಗಿಸೋ ಜಾತಿ!
*(ಹದಿನೆಂಟು ನಗುತ್ತ ಒಂದು ಸಲ ಸೀಟಿ ಊದಿ ಟ್ವೆಂಟಿಗೆ ಸನ್ನೆ ಮಾಡುವನು. ಇಬ್ಬರೂ ಮತ್ತೆ ತಮ್ಮ ದಿಕ್ಕಿನಲ್ಲಿ ಮಾಯವಾಗುವರು. ಕೆಲ ಹೊತ್ತು ನೀರವ. ಶೋಭಾ ಸೂಟ್‌ಕೇಸಿನೊಂದಿಗೆ ಬರುವಳು. ತುಂಬ ಗಾಬರಿ ಅವಸರದಲ್ಲಿದ್ದಾಳೆ. ಸೂಟ್‌ಕೇಸನ್ನು ಮಳೆಯ ಮರೆಗೆ ಬುಟ್ಟಿಯ ಹತ್ತಿರ ಇಟ್ಟು ರೆಸ್ಟ್‌ಲೆಸ್ ಆಗಿ ವಾಚು ನೋಡುತ್ತ ಯಾರಾದರೂ ಕಂಡಾರೆಂದು ಮಳೆಯ ಮರೆಯಲ್ಲಿ ಹುದುಗುವಳು. ಸ್ವಲ್ಪ ಹೊತ್ತಾದ ಮೇಲೆ ರವಿ ಸೂಟ್‌ಕೇಸಿನೊಂದಿಗೆ ಓಡಿ ಬರುವನು. ಸ್ಥಳ ಗುರುತಿಸಿ ಸೂಟ್‌ಕೇಸಿಟ್ಟು ಬೆವರೊರಿಸಿಕೊಳ್ಳುವನು. ಶೋಭಾ 'ರವೀ' ಎಂದು ಕರೆಯುತ್ತಾ ಹೊರಬರುವಳು/ ಇಬ್ಬರೂ ವಾಚು ನೋಡಿಕೊಳ್ಳುವರು.)*

ರವಿ : ಬಂದ ಭಾಳ ಹೊತ್ತಾಯ್ತೇನ?

ಶೋಭಾ : ಈಗಷ್ಟೆ ಬಂದೆ.

ರವಿ : ಯಾರಾದರೂ ನೋಡಿದರೇನ?

ಶೋಭಾ : ಯಾರೂ ಇದ್ಧಾಂಗಿರಲಿಲ್ಲ. ನನ್ನ ಪತ್ರ ಮನ್ಯಾಗ ಬಿಟ್ಟಿಲ್ಲ ಹೌದಲ್ಲ?

ರವಿ : ಏನ ಮಾಡಿದ್ನೋ! ಇನ್ನ ಮ್ಯಾಲ ಸಿಕ್ಕರ ಸಿಗಲಿ ಬಿಡು. ಸ್ಟೇಶನ್ನಿಗೆ ಹೊರಡೋಣೇನು?

ಶೋಭಾ : ಟ್ರೇನ್ ಬರೋದಿನ್ನೂ ಒಂದು ತಾಸು. ಅಷ್ಟರಾಗ ನಮ್ಮಪ್ಪ ಸ್ಟೇಷನ್ನಿಗೇ ಬಂದರ?

ರವಿ : ಬೆನ್ನ ಹತ್ತಿರಬೇಕಂದಿ?

ಶೋಭಾ : ನಮ್ಮವ್ವಗs ಸಂಶೆ ಬಂದಿತ್ತು. ಆಕೀ ಕಣ್ಣ ತಪ್ಪಿಸಿ ಬರಬೇಕಾದರs ಸಾಕ ಬೇಕಾತು.

ರವಿ : ಟಿಕೆಟ್ ತಗಸೋದs ಬ್ಯಾಡ. ಆಚೀ ಕಡಿಂದ ಟ್ರೇನ್ ಬಂದ ಹುರುಪಲೆ ಓಡಿಹೋಗಿ ಹತ್ತಿ ಬಿಡೋಣು.

ಶೋಭಾ : ಅದೂ ಖರೆ. ಸ್ಟೇಶನ್ನದಾಗ ಮತ್ತ ಯಾರು ಗುರುತಿನವರಿರತಾರೊ! ನಿಮ್ಮ ಮನ್ಯಾಗೇನ ಹೇಳಬಂದಿ?

ರವಿ : ಏನೂ ಹೇಳೇ ಲ್ಲ ಮೆತ್ತಗ ರೊಕ್ಕಾ ತಗೊಂಡ ದಾಟಿ ಬಂದೆ. ನಮ್ಮವ್ವನ ಕಣ್ಣಾಗ ಸಂಶೇ ಇದ್ದಾಂಗಿತ್ತು. ಏನು ಮಾಡತಾಳೊ!

ಶೋಭಾ : ಯಾವೂರಿಗಿಳಿಯೋಣು?

ರವಿ : ಊರಂತೂ ಬಿಡೋಣ. ಮುಂದಿಂದ ಮುಂದ. ಆದರೂ ನನಗ ಅನ್ನಸ್ತೈತಿ, ಪರೀಕ್ಷೆ ಆಗೋತನಕ ಕಾದರ ಹೆಂಗ? ಅಂತ.

ಶೋಭಾ : ಕಾದರೂ ಬಿಟ್ಟರೂ ಎಲ್ಲಾ ಒಂದs ಇದಕೆಲ್ಲಾ, ಅವರ ಎದಿ ಹೆಂಗ ಕರಗೀತ ಹೇಳು.

ರವಿ : ಮಾಡೋ ಖಟಪಟಿ ಮಾಡೋಣು.

ಶೋಭಾ : ಅಧೆಂಗಾದೀತು? ಖಟಪಟಿ ಮಾಡಿದಷ್ಟೂ ನಮ್ಮವ್ವಗ ನನ್ನ ಮ್ಯಾಲ ಸಂಶೇ ಬರಾಕ ಸುರುವಾತು. ಎಲ್ಲಿ ಬಸರಾಗ್ಯಾಳೇನೋ! ಅದಕ್ಕs ಇಷ್ಟ ಅವಸರ ಮಾಡ್ತಾಳಂತ ಹೇಳೇಬಿಟ್ಲು ಅದೂ ಕೂಡಿದ ಮಂದ್ಯಾಗ. ಈಗ ನಾ ಬರೆದ ಪತ್ರ ಸಿಕ್ಕಿದ್ದರಂತೂ ಕತಿ ಮುಗೀತು. ಜಾತಿ ಒಂದಾಗಿದ್ದರ ಇಂದಿಲ್ಲ ನಾಳಿ ಬಂದಾರ ಹಾದಿಗಂತ ಹಲಬಿಕೊಂಡಿರಬೌದಿತ್ತು.

ರವಿ : ಮದಿವ್ಯಾದ ಮ್ಯಾಲ ಹಾದಿಗಿ ಬಂದಾರೊ ಏನೊ

ಶೋಭಾ : ಮದಿವ್ಯಾದ ಮ್ಯಾಲಲ್ಲ. ಮೊಮ್ಮಗನ ಕಂಡಮ್ಯಾಲ!

ರವಿ : ಅಡ್ಡೀಯಿಲ್ಲ. ಇಂಥಾ ಹೊತ್ತಿನಾಗೂ ಚಾಷ್ಟೀ ಮಾಡತೀಯಲ್ಲ! ಎಲಾ ಹೆಣ್ಣ!

ಶೋಭಾ : ನಾ ಒಂದಿಷ್ಟು ತಂದೀನಿ: ನೀ ಅಷ್ಟ ದುಡ್ಡ ತಂದೀಯೇನು?

ರವಿ : ಅದರ ಕಾಳಜಿ ಬಿಡು. ಆದರೂ ನಮ್ಮವ್ವಾ ಅಪ್ಪಾ, ಮುಂದ ನಿಂತ ಮದಿವಿ ಮಾಡಿದ್ದರ ಅದರ ಹೌಸನ ಬ್ಯಾರಿ!

ಶೋಭಾ : ನಶೀಬs ಖೊಟ್ಟಿದ್ದರ ಏನ ಮಾಡೋದು?

ರವಿ : ಯಾರೋ ಆ ಕಡಿ ಅಡ್ಡಾಡತಿದ್ದಾಂಗ ಕಾಣತೈತಲ್ಲ? ಪೋಲೀಸರೇನೋ? ಹೌಂದು. ಶೋಭಾ ಲಗು ಅಡಿಗಿಕೊ.

ಶೋಭಾ : ಅಡಗಿದರೆಲ್ಲಿ ಬಿಡತಾರ? ಸೂಟಕೇಸ ಮುಚ್ಚಿಟ್ಟ ನಾವೂ ಅಡ್ಡಾಡಾಕ ಬಂಧಾಗಿದ್ದರಾಯ್ತು. ಅಕಾ ನಿನ್ನ ಸೂಟಕೇಸ ಅಲ್ಲಿಟ್ಟಬಿಡು. *(ರವಿ ತನ್ನ ಸೂಟಕೇಸನ್ನು ಅವಳ ಸೂಟ್‌ಕೇಸಿನ ಹತ್ತಿರ ಇಡುವನು. ಇಬ್ಬರೂ ಸಹಜವಾಗಿ ಅಡ್ಡಾಡ ಬಂದವರಂತೆ ಅಭಿನಯಿಸತೊಡಗುವರು. ಹದಿನೆಂಟು, ಟ್ವೆಂಟಿ ಇಬ್ಬರೂ ಸಂದೇಹದಿಂದ ಬಂದು ಗಮನಿಸುತ್ತ ನಿಲ್ಲುವರು.)*

ರವಿ : ರೂಮಿನೊಳಗೆ ಏನ ಶಕೆ ಅಂತೀನಿ! ಮಿಸ್ ರತ್ನಾ, ಪರೀಕ್ಷೆ ತಯಾರಿ ಹೆಂಗ ನಡಿಸೀರಿ?

ಶೋಭಾ : ನನಗೂ ಭಾಳ ಶಕೆ ಆಗಿ ಅಡ್ಡಾಡಿಕೊಂಡ ಬರೋಣಂತ ಬಂದೇರಿ. ಓದಿ ಓದಿ ತಲೀ ಚಿಟ್ಟ ಹಿಡೀತು. ಅಂಥಾಂಗ ನಿಮ್ಮ ಪೋರ್ಶನ್ ಮುಗದೈತಿ ಹೌಂದಲ್ಲರಿ?

ರವಿ : ಮುಗದದ್ದೇನೊ ಖರೆ. ಆದರ ಒಂದ ಸಲಾನೂ ನಾ ಪೂರ್ತಿ ಓದಿಲ್ಲರಿ. ಈ ಸಲ ಪರೀಕ್ಷೇಕ್ಕೂರೋದs ಬ್ಯಾಡೇನೋ ಅಂತಿದೀನಿ

ಶೋಭಾ : ಅದ್ಯಾಕರೀ ಹಾಂಗಂತೀರಿ? ಹರದಷ್ಟ ಮೊಳ ಕಿರಿದಾಯ್ತು. ಕೂತ ಎಷ್ಟ ಸಬ್ಜೆಕ್ಟ ದಾಟಿದರ ಅಷ್ಟ ಅನಕೂ. ನಾನಂತೂ ಕೂರತೀನ್ರಪಾ. ಒಂದು ಸಲಕ್ಕ ಪಾರಾಗೋದಂತೂ ಆಗೋಣಿಲ್ಲ. ನೋವೂ ನನ್ಹಾಂಗs ಅಂದರ ನೀವು ಮನಸಿಗಿ ಹಚ್ಚಿಕೊಳ್ಳೋಣಿಲ್ಲ ಹೌಂದಲ್ಲರಿ?

ಟ್ವೆಂಟಿ : *(ಹದಿನೆಂಟಿನ ಕಿವಿಯಲ್ಲಿ)*

ಸರ್, ಈ ಕೋಳಿ ತತ್ತಿಗಿ ಬಂದಾಳಂತ ಅನ್ನಿಸಾಣಿಲ್ಲರಿ?

*(ಇವರು ಹೀಗೆ ಮಾತಾಡುತ್ತಿರುವುದನ್ನು ಮಾತು ನಿಲ್ಲಿಸಿ ರವಿ ಶೋಭಾ ಇಬ್ಬರೂ ಗಮನಿಸಿ ಸುಮ್ಮನಾಗುವರು, ಹದಿನೆಂಟು ಸಮಯ ಸ್ಫೂರ್ತಿಯ ಜೋರಿನಿಂದ)*

ಹದಿನೆಂಟು : ಛೇ ಛೆ ಆ ತಳಿ ಬ್ಯಾರೇನಪಾ ಅದು. ಪಾಪ ಇವರು ಕಾಲೇಜು ಹುಡುಗರು,ಯಾರ್ರೀ ಅವರು?

ರವಿ : ಪೋಲೀಸ್ ಸಾಹೇಬರೇನು? ನಾನು ರಾಜೀವ ಅಂತ. ಇಲ್ಲೆ ಕರ್ನಾಟಕ ಕಾಲೇಜಿನಾಗ ಬಿ.ಎ. ಕಲೀತೀನಿ. ಇವರು ಮಿಸ್ ರತ್ನ ಅಂತ.

ಟ್ವೆಂಟಿ : ಹಾ ನನಗೀಗ ಬರೋಬರಿ ಹೊಳೀತ ನೋಡ್ರಿ.
*(ಹದಿನೆಂಟನ ಕಿವಿಯಲ್ಲಿ)*

ಸರ್ ಸರ್. ನಾನು ಹೇಳಿದ್ದ ಖರೆ ನೋಡ್ರಿ.

ಹದಿನೆಂಟು : ಯಾಕ?

ಟ್ವೆಂಟಿ : ಮೊನ್ನಿ ಕರ್ನಾಟಕ ಕಾಲೇಜ ಪಾಯಖಾನೇಕ ಹೋಗಿದ್ದೆ. ಅಲ್ಲಿ ಗ್ವಾಡೀ ಮ್ಯಾಲ ಈಕೀ ಹೆಸರ ಬರೆದಿತ್ತರೀ.

ಹದಿನೆಂಟು : ಹಾಕಿದ ಹೌಂದಲ್ಲ ಹರದ ಬೂಟಿನಂಥಾ ನಿನ್ನ ಮೂಗ?
*(ರವಿಗೆ)*

ಅದ ಖರೆ. ಈ ವ್ಯಾಳ್ಯಾದಾಗ ಪಾರ್ಕಿಗಿ ಬಂದಿರಲ್ಲಾ....

ರವಿ : ಅದು ರೂಮಿನೊಳಗ....

ಟ್ವೆಂಟಿ : ಶಕೆ ಭಾಳಂತ ಅಡ್ಯಾಡಕ ಬಂದಿರೇನೊ.....

ರವಿ : ಹೌಂದ್ಹೌದು. ಐ ಮೀನ್…. ನೋಡ್ರೆಲ್ಲಾ ಓದಿ ಓದಿ….

ಟ್ವೆಂಟಿ : ತಲೀ ಚಿಟ್ಟ ಹಿಡಿದಿರಬೇಕು….

ರವಿ : ಆಫ್‌ಕೋರ್ಸ್… ಎಸ್ಸೆಸ್…. ಸಾಹೇಬರು ಸಿಗರೇಟು ಸೇದ್ತಿರೇನು?

ಟ್ವೆಂಟಿ : ಕೊಡ್ರೆಲ್ಲ.
*(ಓಡಿ ಹೋಗಿ ರವಿ ಕೊಟ್ಟ ಸಿಗರೇಟು, ಕಡ್ಡೀಪೆಟ್ಟಿಗೆ ಇಸಿದು ತಂದು ಹದಿನೆಂಟನ ಎದುರಿಗೆ ಹಿಡಿಯುವನು. ಅವನು ತನ್ನ ಗಣೇಶ ಬೀಡಿ ಹೊತ್ತಿಸುವನು. ಟ್ವೆಂಟಿ ಸಿಗರೇಟು ಹೊತ್ತಿಸುವನು. ಇಬ್ಬರೂ ಅವರಿಗೆ ಇನ್ನಷ್ಟು ಸಮೀಪ ಹೋಗುವರು.)*

ಹದಿನೆಂಟು : ಸಾಹೇಬರು ಯಾವೂರವರು?

ರವಿ : ಸವದತ್ತಿ.

ಹದಿನೆಂಟು : ಹಾಸ್ಟಲದಾಗಿದೀರೇನೊ.

ರವಿ : ಹೌಂದು, ಇಲ್ಲೇ ಸಮೀಪ ಐತಿ.

ಟ್ವೆಂಟಿ : ಈ ಹೆಣಮಗಳೂ ನೀವು ಕ್ಲಾಸಮೆಂಟ ಏನ್ರಿ?

ಶೋಭಾ : ಹೌಂದು.

ಟ್ವೆಂಟಿ : *(ಶೋಭಾಗೆ)*

ನೀವ್ಯಾರ ಪೈಕೀರಿ?

ಶೋಭಾ : ನಾನು…. ಸಪ್ತಾಪುರ - ರೇಡಿಯೋ ಸ್ಟೇಶನ್ ದಾಟಿದ ಮ್ಯಾಲ ಸಿಗತೈತಲ್ಲ - ಅಲ್ಲೆ ಸಕ್ಕರಿ ಶಂಕರಪ್ಪನವರು ಅಂತ; ಅವರ ಮಗಳು… ಮಿಸ್ ರತ್ನ ಅಂತ. ಬಿ.ಎ. ಕ್ಲಾಸಿನಾಗದೀನಿ, ಪರೀಕ್ಷೆ ಬಂತಲ್ಲ….

ಟ್ವೆಂಟಿ : ಸಕ್ಕರಿ ಶಂಕರಪ್ಪ? ಗೊತ್ತs ಇಲ್ಲ ಬಿಡಿರಿ.
*(ರವಿಗೆ)*

ಸಾಹೇಬರs ಸಿಗರೇಟ ಒಳೆ ಖಡಕ ಐತ್ರೆ. ಹೆಂಗೊಂದ ಪಾಕೀಟರಿ ಇದು?

ರವಿ : ಐದು ರೂಪಾಯಿ.

ಟ್ವೆಂಟಿ : ಅಲಲಲ! ಇಡೀ ಹಿಂದೂಸ್ತಾನದಾಗ ಇಂಥಾ ಸಿಗೇರಟ ಯಾರೂ ಸೇದಾಕ ಶಕ್ಯ ಇಲ್ಲ ಬಿಡರಿ. ಗಣೇಶ ಬೀಡಿ ಇದರ ಮುಂದ ಏನೇನೂ ಅಲ್ಲ.

*(ಹದಿನೆಂಟು ಟ್ವೆಂಟಿಯನ್ನು ನೋಡವರು)*

ಅಲ್ಲಲ್ಲ ಗಣೇಶ ಬೀಡಿಹಾಂಗ ಇದಲ್ಲ ತಗೀರಿ.

ಹದಿನೆಂಟ : ಏ ಟ್ವೆಂಟೀ ಬಾಯ್ಮುಚ್ಚೋ.
*(ರವಿಗೆ)*

ಅಲ್ರೆಪಾ ಮಿಸ್ಟರ್ ನಿಮ್ಮ ಹೆಸರೇನಂದರಿ?

ರವಿ : ಶಿವರಾಮಂತ.

ಹದಿನೆಂಟು : ಮಿಸ್ಟರ್ ಶಿವರಾಂ; ಏನೋ ಬಂದೀರಿ, ನಿಂತೀರಿ.... ಪಾಪ ನೀವೇನೂ ಅಂಥವರಲ್ಲಾ; ಅದು ಬ್ಯಾರಿ. ಆದರ ಇಷ್ಟ ಹೊತ್ತಿನಾಗ ಪಾರ್ಕಿನಾಗ ಅಡ್ಡಾಡಾಕ ಬಿಡಾಣಿಲ್ಲಂತ ಗೊತ್ತಿಲ್ರೆ ನಿಮಗ?

ರವಿ : ಆಫ್ ಕೋರ್ಸ್ ಹ....ಹ.... ನಾವೇನೂ ಅಂಥ ಹಲ್ಕಟ್ಟ ದಂಧೆ ಮಾಡಾಕ ಬಂದಿಲ್ವಲ್ಲ!

ಟ್ವೆಂಟಿ : ತಾವು ಹಲ್ಕಟ್ಟ ದಂಧೆ ಮಾಡಾವರು ಅಂತ ಯಾರೂ ಹೇಳಿಕೊಳ್ಳೋದಿಲ್ಲರಿ. ಹೋಗಲಿ ದಂಧೆ ಮಾಡಾವರಲ್ಲ ಅಂತೀರಿ. ಇಂಥಾ ಅಪರಾತ್ರ್ಯಾಗ ಬಂದೀರಿ. ಮಿಸ್ಟರ, ಮಿಸ್ಸಾ, ಕ್ಲಾಸಮೇಟಾ.... ಹಗಲಿ ಮಂದಿ ಇದ್ದಾಗ ನೀವs ಬಂದಿದ್ದರ ನಾ ಹಿಂಗನ್ನಾಕ ಬರತ್ತಿತ್ತ? ನೀವು ತಿಳಿದವರು, ಕಲಿತವರು, ನಾನ್ಹಾಂಗ ಧಡ್ಡರs? ನೀವs ಹೇಳ್ರಲ್ಲ – ಇಲ್ಲೊಂದ ಎಳೀ ಕುದರಿ ಮೇಯತಿತ್ತಂತ ತಿಳೀರಿ, ಆದರ ಬೆನ್ನ ಮ್ಯಾಗ ಆರೀದ ಹುಡಗೊಬ್ಬ ಕೈಯಾಡಸ್ತಿದ್ದರ....

ಶೋಭಾ : ಏ ಮಿಸ್ಟರ್, ನಾಲಿಗಿ ಬಿಗಿಹಿಡಿದ ಮಾತಾಡರಿ. ಅಡ್ಡಾಡಿಕೊಂಡ ಹೋಗಬೇಕಂತ ಬಂದಿವಿ. ಅದಕ್ಕ ಇಲ್ಲದ್ದೆಲ್ಲಾ ಹೊಂದಿಸಿದರ ಸಿಟ್ಟ ಬರತೈತಿ ನಮಗೂ. ನಿಮಗ್ಯಾರೂ ಅಕ್ಕ ತಂಗೇರಿಲ್ಲೇನ್ರಿ?

ಟ್ವೆಂಟಿ : ನನ್ನ ಅಕ್ಕತಂಗೇರ ಇಂಥಾ ಅಪವ್ಯಾಳಾದಾಗ ಹೀಂಗ ಒಬ್ಬ ಹುಡುಗನ ಜೋಡಿ ಬಂದಿದ್ದರ – ನೋಡವಾ ಹೆಣಮಗಳ – ಇಷ್ಟೊತ್ತ ಹಿಂತಾ ಮಾತ ಕೇಳಾಕ ಆಕಿ ಜೀವಂತ ಇರತಿರಲಿಲ್ಲ.

ಶೋಭಾ : ಅಂದರೇನು? ನಾನು ಇಲ್ಲಿ ಇವರ ಜೋಡಿ ಹಲ್ಕಟ್ಟಗಿರಿ ಮಾಡಾಕ ಬಂದೀನಿ ಅಂತೇನು?

ರವಿ : ಶೋಭಾ ಸುಮ್ಮನಿರತೀಯೋ ಇಲ್ಲೋ?

ಶೋಭಾ : ಮತ್ತ ಯಾಕಿವರು ಹಿಂಗೆಲ್ಲಾ ಮಾತಾಡಬೇಕರಿ?

ರವಿ : *(ಟ್ವೆಂಟಿಯನ್ನು ಸಮಾಧಾನ ಮಾಡುತ್ತ)* ಮಿಸ್ಟರ್ ನೋಡ್ರಿ....

ಟ್ವೆಂಟಿ : ನಿಮ್ಮನ್ನೇನ ನೋಡತಾರರೀ?

ರವಿ : *(ಹದಿನೆಂಟನಿಗೆ)*

ಸಾಹೇಬ್ರ ಕೇಳ್ರಿಲ್ಲೆ... ನನ್ನ ಮಾತು.
*(ಹದಿನೆಂಟ ಸುಮ್ಮನೆ ಬೀಡಿ ಸೇದುತ್ತ ನಿಂತಿದ್ದಾನೆ)*

ಟ್ವೆಂಟಿ : ಮತ್ತೇನ ಕೇಳತಾರರಿ? ಬಾಯಿಗಿ ಬಂದಿದ್ದ ಹಿಂದ ತಿರಗಸಾಕ ತಯಾರಿಲ್ಲ ಈ ಹೆಣ್ಣುಮಗಳು. ನಾ ಏನ್ರಿ ಅನ್ನಬಾರದ್ದ ಅಂದೆ? ಹೇಳ್ರಿ; ರಾತ್ರಿ ಹತ್ತ ಹೊಡೀತು. ಪಾರ್ಕಿನಾಗ ಒಂದ ಹುಳಾ ಇಲ್ಲ. ನಮ್ಮನ್ನ ಬಿಟ್ಟರ - ಕಾಲೇಜ ಹುಡಗಾ ಹುಡುಗಿ ಇಲ್ಲಿ ನಿಂತೀರಿ. ಯಾಕ ನಿಂತೀರಿ ಅಂದರ ಕೇಳಬಾರದ ಮಾತs ಇದು? ನಾಳೆ ಇಲ್ಲಿ ಏನಾದರೂ ಹೆಚ್ಚು ಕಮ್ಮಿ ಆದರ ಯಾರ ಜವಾಬ್ದಾರಿ? ಹಿಂತಾ ಬೇಜವಾಬ್ದಾರೀ ಕೆಲಸ ಆಗಬಾರದಂತs ನಮ್ಮನಿಲ್ಲಿ ಇಟ್ಟಾರರೀ.

ಶೋಭಾ : ಹೌಂದ್ದೌಂದು - ಈ ಜಗತ್ತೆಲ್ಲಾ ಬರೋಬರಿ ನೋಡಿಕೊಳ್ಳಪಾ ಅಂತ ದೇವರs ನಿಮ್ಮನ್ನ ನೇಮಸ್ಯಾನ.

ಟ್ವೆಂಟಿ : ಸ್ವಾರೀ ಮೇಡಂ ದೇವರಲ್ಲ, ಸರ್ಕಾರ ನೇಮಸ್ಯಾರ.

ರವಿ : ಶೋಭಾ, ಮಾತಿಗೆ ಮಾತ ಪೋಣಿಸಿ ಎಲ್ಲಿಗೆ ಮುಟ್ಟಬೇಕಂತಿ?
*(ಹದಿನೆಂಟನ ಹತ್ತಿರ ಬಂದು)*

ಸಾಹೇಬರ ನೀವಾದರೂ ತಿಳಿಸಿ ಹೇಳ್ರಿ; ಉಪ್ಪಲ್ಲ ಹುಳೀ ಅಲ್ಲ ಬರೀ ಬಾಯಿ ಮಾಡಿದರ ಎದಕ್ಕ ಬಂತು? ನೀವು ಕೇಳಿದ್ದ ತಪ್ಪಲ್ಲ. ಕೇಳಿದ್ದಕ ಜವಾಬ ಕೊಡಾಕ ನಾ ಇದ್ದೀನಿಲ್ಲೆ. ಮನೆತನಸ್ಥ ಹೆಣ್ಣುಮಗಳು, ಪೋಲೀಸರ ಮಾತ ಕೇಳಿ ಖಾರ ಆಗಿರಬೇಕು. ನೀವು ತಿಳಿದವರು, ಲೋಕಾ ಬಲ್ಲವರು. ನಿಮಗೂ ಗೊತ್ತೈತಿ; ನಾವು ಹಲಕಟ್ಟ ಮಂದಿ ಅಲ್ಲಂತ.

ಹದಿನೆಂಟು : ಏ ಟ್ವೆಂಟೀ

ಟ್ವೆಂಟಿ : ನಾನೂ ಅದನ್ನ ಹೇಳ್ತೀನ್ರಿ ಕುಡುಗೋಲ ನುಂಗಬ್ಯಾಡ್ರಂತ.

ಹದಿನೆಂಟ: ಅಲ್ಲರಿ ಮಿಸ್ಟರ್, ನಾವು ಹೌದಂದರ ಅಲ್ಲಂತೀರಿ. ಅಲ್ಲಂದರ ಹೌದಂತೀರಿ. ಎಲ್ಲಾರೂ ಹೀಂಗ ಇರತಾರಂತಲ್ಲ. ಆದರ ದರವೊಂದ ಜಾತಿ ಒಳಗೂ ಹಾದರಕ್ಕ ಹುಟ್ಟಿದವರು ಇದ್ದs ಇರತಾರ. ಅಂಥವರ್ನ ಹಿಡೀಬೇಕಾದರ ನಾವಿಂಥಾ ಮಾತ ಕೇಳೇಬೇಕಾಗತ್ಯೆತಿ. ಖರೆ ಅಂತೀರೋ, ಸುಳ್ಳಂತೀರೊ?

ರವಿ : ನನ್ನ ಮಾತ ನಂಬರಿ. ನಾವೇನೂ ನಿಮ್ಮ ಕಣ್ಣಾಗ ಮಣ್ಣ ತೂರಿಲ್ಲಾ....

ಹದಿನೆಂಟು : ನೀವಿಬ್ಬರೂ ಗಂಡಾ ಹೆಂತೀ ಏನು?

ರವಿ : ಅಲ್ಲ.

ಹದಿನೆಂಟು : ಹಂಗಾದರ ನೀವs ಹೇಳ್ರೆಪಾ: ಮನೆತನಸ್ತ ಹೆಣ್ಣು ಮಗಳಿಗೆ ಪಾರ್ಕಿನಾಗ, ರಾತ್ರಿವ್ಯಾಳ್ಯಾ, ಕಾಲೇಜು ಹುಡುಗನ ಜೋಡಿ, ಯಾರೂ ಇಲ್ಲದಲ್ಲಿ ಏನ ಕೆಲಸ? ಶಕೆ ಆಯ್ತು ಅನ್ನಬ್ಯಾಡ್ರಿ: ಇಡೀ ಊರಾಗ ನಿಮ್ಮಬ್ಬರಿಗೇ ಶಕೆ ಆಗಬೇಕ? ಸಪ್ತಾಪುರದಾಗ ಶಕೆ ಇತ್ತು ಅನ್ನಬ್ಯಾಡ್ರಿ: ಅಲ್ಲಿ ಇಲ್ಲಿಗೀಂತ ತಂಪೈತಿ ಅಂತ ಕೇಳೀನಿ. ನಾವಿಬ್ಬರೂ ಅಣ್ಣ ಬಸವಣ್ಣ, ಅಕ್ಕಮಹಾದೇವಿ ಅನ್ನಬ್ಯಾಡ್ರಿ: ಆಗಲೇ ನಿಮ್ಮ ಹೆಸರ ಹೇಳಿಕೊಂಡೀರಿ. ನಿಮ್ಮ ಹೆಸರು ಒಮ್ಮಿ ರಾಜೀವಂತೀರಿ ಇನ್ನೊಮ್ಮಿ ಶಿವರಾಮಂತೀರಿ. ಆ ಹೆಣಮಗಳೊಮ್ಮಿ ಮಿಸ್ ರತ್ನಾ ಇನ್ನೊಮ್ಮಿ ಬರೇ ಶೋಭಾ - ಹಿಂಗ್ಯಾಕ ಗಳಿಗ್ಗೊಮ್ಮಿ ಹೆಸರ ಬದಲಾಗತಾವ ಹೇಳ್ರಿ -

ಟ್ವೆಂಟಿ : ನಾ ಹೇಳ್ತೀನ್ರಿ: ಯಾಕಂದರ ಪಗಡೀ ಆಟದಾಗ ಯಾವ ಕಾಯಿ ಬಿಡತೀರಿ ಅದರ್ಹಾಂಗ ಮಸಡಿ ಮಾಡಿರಬೇಕಂತ ನೇಮ ಐತಿ.

ರವಿ : ನೋಡ್ರಿ ನಾವು ಎರಡೆರಡ ಹೆಸರ ಹೇಳಿದಿವಿ. ತಪ್ಪಾಯ್ತು. ಅದರಿಂದs ನಿಮಗ ತಿಳಿದರಬೇಕುಃ ನಾವು ಅಂಥಾ ದಂಧೆಯವರಲ್ಲಂತ.

ಟ್ವೆಂಟಿ : ಇದೆಲ್ಲಿ ಲೆಕ್ಕಾಚಾರಪಾ! ಇವರು ಸುಳ್ಳ ಸುಳ್ಳ ಹೆಸರ ಹೇಳತಾರಂತ, ನಾವು ಇವರಿಗೆ ಹರಿಶ್ಚಂದ್ರಾs ಅನ್ನಬೇಕಂತ!

ರವಿ : ಛೇ, ಛೇ, ಎಲ್ಲೀದೆಲ್ಲಿಗೆ ಒಯ್ತೀರಿ?

ಟ್ವೆಂಟಿ : ನಿಮ್ಮ ಮಾತು ಬಿಟ್ಟ ಒಂದು ಹೆಜ್ಜೀನಾದರೂ ಹಿಂದ ಮುಂದ ಹೋಗೇನೇನು?

ರವಿ : ನಿಮಗ ಹೆಂಗ ತಿಳಿಸಿ ಹೇಳ್ಲಿ?

ಟ್ವೆಂಟಿ : ಅದನ್ನs ಕೇಳ್ತೀನ್ರಿ:- ತಿಳಸಬಾರದಂಥಾ ಗದ್ದಲ ಏನೈತಿ? ಬಿಚ್ಚರಿ ಗಂಟು.

ರವಿ : *(ತಕ್ಷಣ ಯೋಚನೆ ಮಾಡಿ ಕಿಸೆಯಿಂದ ದುಡ್ಡು ತೆಗೆದು)*

ಸಾಹೇಬರs ಈ ಹತ್ತ ರೂಪಾಯಿ ತಗೊಂಡ ನಮ್ಮ ಉಸಾಬಾರಿ ಬಿಟ್ಟುಬಿಡರಿ.
*(ಕೊಡ ಹೋಗುವನು)*

ಹದಿನೆಂಟು : ಲಂಚಾ ಕೊಡಾಕ ಬಂದೀರೇನ್ರಿ?

ಟ್ವೆಂಟಿ : ನಮ್ಮ ಸಾಹೇಬರ ಕಡೆ ಬೆರಳಮಾಡಿ ತೋರಸೋ ಮಗ ಇಡೀ ಜಿಲ್ಲಾದಾಗ ಇನ್ನs ಹುಟ್ಟಿಲ್ಲ. ಅವರಗಿ ಲಂಚಾ ಕೊಡಾಕ ಬಂದಿರೇನ್ರಿ?

ರವಿ : ಲಂಚ ಅಲ್ಲರಿ ಇದು.

ಟ್ವೆಂಟಿ : ಅದರಪ್ಪ!

## ಖರೋಖರ (೧)

ಹದಿನೆಂಟು : ಅಲ್ಲರೀ. ಹಲ್ಕಟ್ಟ ದಂಧೇವರಲ್ಲಾ ಅಂತೀರಿ. ಆ ಮಾತು ನಮ್ಮ ಕಿವಿ ಮುಟ್ಟೋದರೊಳಗs ಲಂಚಾ ಕೊಡಾಕ ಬಂದಿರಿ. ನೀವ ಸುದ್ದುಳ್ಳವರಾಗಿದ್ದರ ಲಂಚಾ ಯಾಕ ಕೊಡಬೇಕು? ನಾವೇನಾದರೂ ಕೇಳಿದವ? ಏಕ ಕಾಲಕ್ಕ ಎರಡೆರಡ ಆಟ ಆಡತೀರಲ್ಲರಿ?

ರವಿ : ಆಯ್ತುರಪಾ ತಪ್ಪಾಯ್ತು.

ಹದಿನೆಂಟು : ತಪ್ಪಾ ಒಪ್ಪಾ ಹೇಳಾಕ ನಮ್ಮದೆಷ್ಟರೀ ಕಿಮ್ಮತ್ತು?

ಟ್ವೆಂಟಿ : ಹತ್ತು ರೂಪಾಯಿ.

ರವಿ : ನಾವಿಲ್ಲಿ ಬಂದಿದ್ದs ತಪ್ಪು. ಯಾರಿಗ್ಗೊತ್ತ ಹಿಂಗಾದೀತಂತ.

ಹದಿನೆಂಟು : ನಾವೇನ ಮಾಡಬಾರದ್ದ ಮಾಡಿದ್ದೀವಿರಿ?

ರವಿ : ನಿಮಗಲ್ಲರಿ ನಮ್ಮ ನಶೀಬ ಬೈಕೋತೀವಿ. ಇಲ್ಲಿ ಬರಬೇಕಂದರೇನು? ನಿಮ್ಮ ಕೈಗೆ ಸಿಗಬೇಕಂದರೇನು?

ಟ್ವೆಂಟಿ : ನಮ್ಮ ಕೈಯಾಗ ಸಿಕ್ಕು ನಿಮಗೇನ್ರಿ ಆಯ್ತು? ಏನೋ ಕರದಿವಿ; ಕುಡಗೋಲ ನುಂಗಬ್ಯಾಡ್ರಪಾ ಅಂತ ಬುದ್ಧಿ ಹೇಳಿದಿವಿ, ತಪ್ಪ?

ರವಿ : ಕುಂಟಿಗಿ ಕೊಡ್ಡಾ ಹಚ್ಚಿಧಾಂಗ ಮಾತಿಗೀ ಮಾತ ಹೇಳತೀರಿ. ಇನ್ನೇನ ಮಾಡಲಿ? ಹೋಗಲಿ, ಏನ ಮಾಡಿದರ ನಮ್ಮನ್ನ ಸುಮ್ಮನ ಬಿಡತೀರಿ?

ಟ್ವೆಂಟಿ : ಬಿಡಾಕ ನಿಮ್ಮನ್ನ ಹಿಡಕೊಂಡೇವೇನ್ರಿ? ಯಾಕ ಬಂದಿರಿ – ಅಂತ ಕೇಳಿದರ ಜವಾಬ ಕೊಡೋದ ಬಿಡತೀರಿ. ಹತ್ತ ರೂಪಾಯಿ ತಗೀತೀರಿ. ಸಂಶೆ ಯಾಕ ಬರಬಾರದ ಹೇಳ್ರಿ?

ಶೋಭಾ : *(ರವಿಗೆ ಸಿಡುಕಿನಿಂದ)*

ತಗದ ಇನ್ನ ಹತ್ತ ಎಸೀಬಾರದ?

ಹದಿನೆಂಟು : ಏ ಟ್ವೆಂಟಿ, ಇದು ಇಲ್ಲಿ ಎತ್ತಿಹಾಕೋ ತಿಪ್ಪಿ ಅಲ್ಲ.
*(ರವಿಗೆ)*

ಮಿಸ್ಟರ್, ನಡೀರಿ ಪೋಲೀಸ್ ಸ್ಟೇಶನ್ನಿಗೆ ಹೋಗೋಣು.

ಟ್ವೆಂಟಿ : ನಮ್ಮ ಸಾಹೇಬರು ದಯಾಮಯಾ ಇದ್ದವರು; ಸುಮ್ಮನ ಇದ್ದದ್ದ ತೋಡಿಕೊಂಡ ಕೈ ಮುಗೀರಿ – ಬಿಡತಾರ.

ರವಿ : ಸಾಹೇಬರ, ನೀವು ದೊಡ್ಡವರು. ದೊಡ್ಡಮನಸ್ಸು ಮಾಡಿ ನಮ್ಮನ್ನ ಬಿಡಿರಿ. ಟ್ರೇನ್ ಬರೋ ಟೈಮಾಯ್ತು. ನಾವಿನ್ನು ಸ್ಟೇಶನ್ನಿಗಿ ಹೋಗಬೇಕು.

ಹದಿನೆಂಟು : ಟ್ರೇನ?

ರವಿ : *(ಕಿಸೆಯಿಂದ ೧೦೦ ರೂ. ನೋಟು ತೆಗೆದು)*

ಈ ಭಕ್ಷಿಸ ತಗೋಳ್ರಿ. ನಮ್ಮನ್ನು ಬಿಡಿರಿ.

ಹದಿನೆಂಟು : (ಕಾಳಜಿಯಿಂದ)

ಏನೋ ಖರೆ ಬಿಡಿಸಬೇಕು, ಬಿಡಬೇಕು ಅಂತಿದ್ದೆ. ಈಗ ನೋಡಿದರ ನನ್ನ ತಾಕತ್ತ ಮೀರಿ ಬೆಳೀತಿದು. ನಡೀರಿ ಪೋಲೀಸ ಸ್ಟೇಶನ್ನಿಗೆ ಹೋಗೋಣು. ನಿಮ್ಮ ನಿಮ್ಮ ಹಿರೇರ್ನ ಕರಸ್ತೀವಿ; ಅವರs ಬಂದ ನಿಮ್ಮನ್ನ ಬಿಡಿಸಿಕೊಂಡ ಹೋಗತಾರ. ಏ ಟ್ವೆಂಟೀ, ಅಡ್ರೆಸ್ ಕೇಳಿಕೊ, ಜೀಪ ತಗೊಂಡಹೋಗಿ ಕರಕೊಂಬಾ.

ಶೋಭಾ : ಅಂದರ ನಮ್ಮ ಮಾತಿನಾಗ ನಿಮಗ ನಂಬಿಕಿಲ್ಲ.

ಟ್ವೆಂಟಿ : ನಂಬಿಕೆ ಹುಟ್ಟೋವಂಥಾದ್ದ ಹೇಳವೊಲ್ಲಿರಿ.

ರವಿ : ಏನ ಹೇಳಿದರ ನಂಬತೀರಿ?

ಹದಿನೆಂಟು : ಖರೆ ಹೇಳಿದರ.

ಟ್ವೆಂಟಿ : ಛೇ ಛೇ, ಅಲ್ಲರೆಪಾ, ಇಲ್ಲಿ ಬರ್ರಿಲ್ಲೆ.
*(ದುಡ್ಡಿನ ಆಸೆಯಿಂದ ರವಿಯ ರಟ್ಟೆ ಹಿಡಿದು ಬೇರೆ ಕಡೆ ಕರೆದುಕೊಂಡು ಹೊರಡುವನು)*

ಹದಿನೆಂಟು : ಏ ಟ್ವೆಂಟಿ, ಯಾಕೊ ಆ ಕಡೆ ಕರಕೊಂಡ ಹೊಂಟಿ?

ಟ್ವೆಂಟಿ : ಕುಡಗೋಲ ನುಂಗಬ್ಯಾಡಂತ ಹೇಳ್ತೀನ್ರಿ.

ಹದಿನೆಂಟು : ನನ್ನ ಮುಂದ ಹೇಳಾಕಾಗಾಣಿಲ್ಲವೇನು?

ಟ್ವೆಂಟಿ : ಎಸ್ಸರ್, ಮಿಸ್ಟರ್, ನಿಮ್ಮ ಖರೇ ಹೆಸರು ರಾಮಚಂದ್ರ ಹೌಂದ?

ರವಿ : ಅಲ್ಲ; ರವಿ.

ಟ್ವೆಂಟಿ : ಸುಳ್ಳ ಹೇಳಬ್ಯಾಡ್ರಿ. ಇದು ಕೋರ್ಟಲ್ಲ.

ರವಿ : ಖರೇ ಹೇಳಿದರ ಸುಳ್ಳಂತೀರಿ.

ಟ್ವೆಂಟಿ : ಮೊದಲಽ ಖರೆ ಹೇಳಿದ್ದರ ಇದೆಲ್ಲಾ ಯಾಕಾಗತಿತ್ತು?

ರವಿ : ತೋರಸ್ತೀನಿ ತಡೀರಿ.
*(ಮೆಳೆಯ ಹತ್ತಿರ ಹೋಗುವನು. ಟ್ವೆಂಟಿ ಬೆನ್ನು ಹತ್ತುವನು. ರವಿ ತನ್ನ ಸೂಟ್‌ಕೇಸು ತರುವನು. ಟ್ವೆಂಟಿ ಇನ್ನೊಂದು ಸೂಟ್‌ಕೇಸು ಬುಟ್ಟಿ ತರುವನು)*

ಬೇಕೆಂದರ ಸೂಟಿಕೇಸ ಮ್ಯಾಲ ನನ್ನ ಹೆಸರೈತಿ ನೋಡ್ರಿ. ಆಗೂ ಬರದಿದ್ದರ ತೆರದ ನೋಡ್ರಿ.

ಟ್ವೆಂಟಿ : ಈಗ ಬುಟ್ಯಾಗ ಅಗಾವ ಮಾಲಿ ತಗೊಂಡ ನಡದೀರೇನು?

ಹದಿನೆಂಟು : ಈಗ ಖರೆ ಹೇಳ್ತೀರಿ ಅನ್ನೋಣು. ಸೂಟಕೇಸ ತಗೊಂಡ ಎಲ್ಲಿಗೆ ಹೊಂಟಿದ್ದಿರಿ? ಮನ್ಯಾಗ ಹೇಳದಽ, ಕೇಳದಽ ಓಡಿ ಹೊಂಟೀರಿ ಹೌಂದಲ್ಲ?

ಶೋಭಾ : ಓಡಿ ಹೊಂಟದ್ದ ಖರೆ. ನಾನೂ ರವಿ ಇಬ್ಬರೂ ಪ್ರೀತಿ ಮಾಡತೀವಿ. ಮದಿವಿ ಮಾಡಿಕೋಬೇಕಂದವಿ, ರವಿ ಅಪ್ಪ ಒಪ್ಪಲಿಲ್ಲ. ದೂರ ಹೋಗಿ ಮದಿವಿ ಮಾಡಿಕೊಂಡ ಬರತೀವಿ.

ಹದಿನೆಂಟು : ಪರೀಕ್ಷೇಕ್ಕೂರಲಿಲ್ಲ.

ಶೋಭಾ : ಇಲ್ಲ.

ಹದಿನೆಂಟು : ಪರೀಕ್ಷೆ ಆದಮ್ಯಾಲ ಹೋಗಬೇಕಿತ್ತು.

ಶೋಭಾ : ಈಗ ಹೋದರೇನ ತಪ್ಪು?

ಹದಿನೆಂಟು : ತಪ್ಪಿಲ್ಲವಾ, ಆಮ್ಯಾಲ ಹೋಗಿದ್ದರೇನ ತಪ್ಪಾಗತಿತ್ತು?

ರವಿ : ನಮ್ಮಪ್ಪ ಒತ್ತಾಯ ಮಾಡಿ ಬ್ಯಾರೇ ಮದವಿ ಮಾಡಬೇಕಂತಾನ.

ಹದಿನೆಂಟು : ಪರೀಕ್ಷೆ ಆಗೋದರೊಳಗs?

ಶೋಭಾ : ಆದರ ನಮ್ಮಪ್ಪ ಈಗs ಮದಿವಿ ಮಾಡಬೇಕಂತಾನ.

ಹದಿನೆಂಟು : ಅಂದರ ಈ ಪ್ಲಾನ ನಿಂದs ಅಂಥಾಂಗಾಯ್ತು.

ಶೋಭಾ : ನಂದs ಇರಭೌದು ತಪ್ಪೇನು?

ಹದಿನೆಂಟು : ತಪ್ಪಿಲ್ಲ; ಆದರ ಹುಡುಗೀನs ಹುಡುಗನನ್ನ ಓಡಿಸಿಕೊಂಡ ಹೋಗತಾನಂದರ ಅದರಾಗೇನೋ ತಪಿದ್ಧಾಂಗ ಆಗಲಿಲ್ಲಾ?

ಶೋಭಾ : ಅಂದರ ನಾ ಏನೋ ಕಾರಭಾರ ಮಾಡಿಕೊಂಡೀನಂತ, ಹೌಂದಲ್ಲ?

ಹದಿನೆಂಟು : ಅದನ್ನ ನೀವs ಹೇಳಬೇಕು.

ಶೋಭಾ : ಬಾಯ್ಬಿಟ್ಟು ಹೇಳ್ರಿ- ನಾ ಹಾದರಗಿತ್ತೆಂತ.

ಹದಿನೆಂಟು : ನೋಡವಾ ಹೆಣಮಗಳ, ನನಗಾಗಲೇ ರಾಷ್ಟ್ರಪತಿ ಆಗೋವಷ್ಟ ವಯಸ್ಸಾಯ್ತು. ನಿನ್ನ ಎರಡ ಪಟ್ಟ ಕಂಡೇನಿ, ಉಂಡೇನಿ. ನಿಮ್ಮಂಥಾ ಎಳಕರ ಜೀವಾ ಪಣಕಿಟ್ಟು ನಾ ಎಂದೂ ಇಸ್ಪೀಟ ಆಡಿದವನಲ್ಲ. ಅಷ್ಟs, ಇಲ್ಲೀತನಕ ಒಂದಕ್ಕೂ ತಕರಾರ ತಗದವನಲ್ಲ. ನನ್ನ ಹರೇದಾಗ ಈಗಿರೋದಕ್ಕಿಂತ ಕಡಮೆ ಹೂ ಇದ್ದುವು. ಈಗ ನೋಡು - ಈಟ ಬಳ್ಳಿಗಿ ಸಾವಿರ ಹೂ ಸುರೀತಾವ. ಬಹುಶಃ ನಿನಗ ನನಗಿಂತ ಹೆಚ್ಚ ತಿಳಿವಳಿಕೆ ಐತ್ಯೋ ಏನೊ ಅಥವಾ ನೀ ದೊಡ್ಡ ತಪ್ಪ ಮಾಡಿರಭೌದು.

ಶೋಭಾ : ನಿಮ್ಮ ಮಾತ ತಿಳೀವೊಲ್ದು ಏನ ಹೇಳಿದಿರಿ?

ಹದಿನೆಂಟು : ಇದು; ಪರೀಕ್ಷೆ ಆದಮ್ಯಾಲ ಓಡಿ ಹೋಗಿದ್ದರ ಮುಗಲ ಹರದ ಬೀಳತಿತ್ತs ಹೆಂಗ?

ಶೋಭಾ : ಹೌಂದು ಹರದ ಬೀಳತಿತ್ತು.

ಹದಿನೆಂಟು : ಅದ್ಹೆಂಗs

ಶೋಭಾ : ಅದನೆಲ್ಲಾ ನಿಮ್ಮ ಮುಂದ ಹೇಳಾಕ ಬೇಕೇನ್ರಿ?

ಟ್ವೆಂಟಿ : ಬಂದ ಹುದಲಾ ಬಿದ್ದೀರಂದಮ್ಯಾಲ ಹೇಳಬೇಕು.

ಶೋಭಾ : ಹೇಳದಿದ್ದರ?

ಹದಿನೆಂಟು : ನಡೀರಿ ಪೋಲೀಸ ಸ್ಟೇಷನ್ನಿಗೆ ಹೋಗೋಣು.

ಶೋಭಾ : ಬರೋದಿಲ್ಲ. ರವಿ, ಸೂಟಕೇಸ ತಗೊ. ಅದೇನ ಮಾಡತಾರ ಮಾಡಲಿ, ನಡೀ ಹೋಗೋಣು.

ಹದಿನೆಂಟು : ನಾ ನಿನ್ನ ವೈರಿ ಅಲ್ಲವಾ. ಕೇಳ್ರಿಲ್ಲೆ; ಹುಚ್ಚ ಹರೇದಾಗ ಬೇಕಾದ್ದ ಬ್ಯಾಡಾದ್ದೆಲ್ಲಾ ಅರಗಿಸಿಕೊಳ್ತೀವಂತ ಕುಡುಗೋಲ ನುಂಗಾಕ ಹೋಗಬಾರದು, ಹೆಣಮಗಳś, ಸೂಟಕೇಸ ಕೆಳಗಿಡು.

ರವಿ : ಶೋಭಾ, ಕೆಳಗಿಡು ನಾ ಮಾತಡತೀನಿ.
*(ಹದಿನೆಂಟನ ಬಳಿಗೆ ಹೋಗಿ)*

ಸಾಹೇಬರś, ನೀವś ನಮ್ಮ ಹಿರೇರಂತ ತಿಳೀರಿ. ನಾವೇನೂ ಸಣ್ಣವರಲ್ಲ, ನಮ್ಮ ಜವಾಬ್ದಾರಿ ನಮಗ ತಿಳದೈತಿ. ನಾವಿಬ್ಬರೂ ಪ್ರೀತಿ ಮಾಡಿದಿವಿ. ಮದಿವಿ ಮಾಡಿಕೊಬೇಕಂದಿವಿ. ನಮ್ಮ ಹಿರೇರ ಒಪ್ಪಲಿಲ್ಲ. ಅವರನ್ನ ಬಿಟ್ಟ ದೂರ ಹೋಗಬೇಕಂತ ಹೊಂಟೇವಿ. ನಾವೇನೂ ಸಾಯೋದಕ್ಕ ಹೊಂಟಿಲ್ಲ. ನೀವು ನಮಗ ಆಶೀರ್ವಾದ ಮಾಡಿ ಕಳಿಸಿರಿ.

ಟ್ವೆಂಟಿ : ಯಾವುದೋ ಕಾದಂಬರ್ಯಾಗ ಒಬ್ಬಾವ ಹಿಂಗś ಮಾತಾಡೋದಿಲ್ಲರೆ?

ರವಿ : ಇದಕ್ಕೂ ನಿಮ್ಮ ಕರಳ ಕರಗದಿದ್ದರ ನಮ್ಮ ನಶೀಬś ಖೊಟ್ಟಿ ಇರಬೇಕು. ಏನಂತೀರಿ ಸಾಹೇಬರ? ನೀವು ಅಪ್ಪಣೆ ಕೊಟ್ಟರ ಓಡಿಹೋಗಿ ಟ್ರೇನ್ ಹಿಡೀತೀವಿ, ಇಲ್ಲದಿದ್ದರ ಹಿರೇರ ಕೈಗಿ ಸಿಗತೀವಿ; ಮುಂದಿಂದ ನಿಮಗ ಗೊತ್ತś ಐತಿ,

ಹದಿನೆಂಟು : ನಾನś ನಿಮ್ಮ ಹಿಯ್ರ್ಯಾ ಅಂದ್ರೆಲ್ಲ- ಅದಕ್ಕ ಹೇಳ್ತೀನಿ; ನಿಮ್ಮ ಮದಿವೀ ಮಾಡಸೋದು ನನ್ನ ಜವಾಬ್ದಾರಿ- ನನ್ನ ಮ್ಯಾಲ ನಿಮಗಷ್ಟು ಭರೋಸ ಇದ್ದರ. ಪರೀಕ್ಷೆ ಮುಗಸರಿ. ಆಮ್ಯಾಲ ನಿಮ್ಮ ಹಿರೇರ ನನ್ನ ಮಾತ ಕೇಳಿದರು- ಬರೋಬರಿ. ಇಲ್ಲದಿದ್ದರ ನಾನś ಸ್ವಥಾ ನಿಮ್ಮನ್ನ ಪಾರ ಮಾಡತೀನಿ. ಇದ್ಹೆಂಗ?

ಶೋಭಾ : ಹೆಂಗಂದರ; ನನ್ನ ಹುಚ್ಚುತನ ನೀ ತಗೊ. ನಿಂದ ನನಗ ಕೊಡು ಅಂಥಾಂಗ.

ಟ್ವೆಂಟಿ : ಈ ಹೆಣಮಗಳಿಗೆ ಅಷ್ಟೇನ ತರಾತುರೀನೊ?

ಶೋಭಾ : ಮನಶೇರಾಗಿದ್ದರ ತಿಳೀತಿತ್ತು. ನಿಮ್ಮ ಮಗಳಿಗಿ ಹಿಂಗಾಗಿದ್ದರ ಏನ ಮಾಡತಿದ್ದಿರಿ?

ಹದಿನೆಂಟು : ನನ್ನ ಮಗಳಾಗಿದ್ದರ ನನ್ನ ಮಾತು ಕೇಳುತ್ತಿದ್ದಳು.

ಶೋಭಾ : ನಾನು ಕೇಳುತ್ತಿದ್ದೆ. ಆದರ ನಾ ನಿಮ್ಮ ಮಗಳಲ್ಲ.

ಹದಿನೆಂಟು : ಹರೇಕ ಹಾದಿ ಕಾಣ್ಸಾಣಿಲ್ಲವಾ, ಕರುಳಂದ್ರೆಲ್ಲ ಅದಕ್ಕ ಇಷ್ಟೆಲ್ಲ ಹೇಳಿದೆ. ಬಹುಶಃ ಈ ಜಾಗದಾಗ ನಿಮ್ಮಪ್ಪ ಇದ್ದಿದ್ದರ ಅವನೂ ಹಿಂಗś ಹೇಳತಿದ್ದ. ಆಗಲಿ, ಮುಂದ ಯಾವಾಗದರೂ ತಿಳದಾವು. ಇದನ್ನ ಮೀರಿ ನೀನುಂಟು, ನಿನ್ನ ನಶೀಬುಂಟು.

ಶೋಭಾ : ರವಿ, ನಡಿ ಹೋಗೋಣು.

ರವಿ : ಸಾಹೇಬರ ಹೋಗಿ ಬರ್ರೀವರಿ.

ಟ್ವೆಂಟಿ : ಛೇ ಛೇ.....

ಹದಿನೆಂಟು : ಟ್ವೆಂಟೀ, ಹೋಗಲಿ ಬಿಡು.
*(ರವಿ, ಶೋಭಾ ಇಬ್ಬರೂ ಸೂಟ್‌ಕೇಸ್ ತಗೊಂಡು ಹೊರಡುವರು)*

ಟ್ವೆಂಟಿ : ಹಂಗೆಲ್ಲಾ ಪೋಲೀಸರಿಗೆ ಲಂಚಾ ಕೊಡಬಾರದ್ರೆಪಾ. ಇಲ್ಲಿ ಬರ್ರಿಲ್ಲೆ...

ಹದಿನೆಂಟು : ಟ್ವೆಂಟೀ.

ಟ್ವೆಂಟಿ : ಎಸ್ಸರ್.

ಹದಿನೆಂಟು : ಆ ಬುಟ್ಟಿ ಕೊಡು.

ಟ್ವೆಂಟಿ : ನಿಮ್ಮ ಬುಟ್ಟಿ ಒಯ್ಯಿರಿ.
*(ಎಂದು ಓಡಿಹೋಗಿ ಬುಟ್ಟಿ ಎಳೆಯುವನು. ಅಷ್ಟರಲ್ಲಿ ಅದರಲ್ಲಿಂದ ಒಂದು ಕೂಸು ಕೆಳಗೆ ಬಿದ್ದು ಕಿಟ್ಟನೆ ಕುರುಚುವುದು. ಎಲ್ಲರೂ ಕಕ್ಕಾಬಿಕ್ಕಿಯಾಗುವರು. ಕೂಸು ಅಳುತ್ತಲೆ ಇರುವುದು.)*

ಶೋಭಾ : ಈ ಬುಟ್ಟಿ ನಮ್ಮದಲ್ಲ.
*(ಎಲ್ಲರೂ ಸುಮ್ಮನಿರುವರು)*

ಹಂಗ್ಯಾಕ ನನ್ನ ನೋಡತೀರಿ? ಈ ಬುಟ್ಟಿ ನಂದಲ್ಲ ಅಂದೆ.
*(ಈಗಲೂ ಎಲ್ಲರೂ ಸುಮ್ಮನಿರುವರು)*

ರವಿ ಹೋಗೋನ್ನಡಿ-
*(ಹೊರಡುವಳು)*

ಹದಿನೆಂಟು : ಮಿಸ್ ಶೋಭಾ, ತಗೊಂಡ ಹೋಗ್ರಿ ಅದನ್ನ,

ಶೋಭಾ : *(ಗಾಬರಿಯಾಗಿ)*

ಏನ್ರಿ ನೀವು ಹೇಳೋದು?

ಹದಿನೆಂಟು : ತಗೊಂಡು ಹೋಗವಾ ಅದನ್ನ.

ಶೋಭಾ : ರವಿ, ನಮ್ಮದಲ್ಲಂತ ಯಾಕ ಹೇಳವೊಲ್ಲಿ?

ಹದಿನೆಂಟು : ವಾದ ಮಾಡಿದಷ್ಟೂ ಜೇಲಿಗೆ ಸಮೀಪ ಆಗತೀರಿ.

ಟ್ವೆಂಟಿ : ಈಕಿ ತರಾತುರಿ ನನಗೀಗ ತಿಳೀತ ನೋಡ್ರಿ.

ಶೋಭಾ : *(ಒದರುತ್ತಾ)*

ನಂದಲ್ಲಾ ಅಂದೆ

ಟ್ವೆಂಟಿ : ಇನ್ಯಾರದು, ನಂದ?

ಶೋಭಾ : ನನಗೇನು ಗೊತ್ತು?

ಟ್ವೆಂಟಿ : ಹೆಣಮಗಳ, ದೇವರಾಣಿ ಗಂಡಸರು ಹಡೆಯೋದಿಲ್ಲವಾ. ಮತ್ತೆ ಹಳೇ ಹೂಡಿ ನಮ್ಮ ಸಾಹೇಬರ ತಲಿ ಕೆಡಸಬ್ಯಾಡ.
*(ಈಗ ಮಗು ಸುಮ್ಮನಿದೆ. ಶೋಭಾ ಅಳತೊಡಗುವಳು)*

ಶೋಭಾ : ಇದು ನಂದಲ್ಲಾ ಅಂತ ಹೆಂಗ ಹೇಳಲಿ? ಯಾಕಾದರೂ ಇಲ್ಲಿಗಿ ಬಂದಿನೋ?
*(ಶಿವರಾಯಪ್ಪ, ವಯಸ್ಸು ೫೦ ರ ಮೇಲೆ ಇಬ್ಬರು ಹುಡುಗರೊಂದಿಗೆ ಓಡಿ ಬರುವನು. ರವಿಯನ್ನು ನೋಡಿ ವೀರಾವೇಶ ಹೊಂದುವನು)*

ಶಿವರಾಯಪ್ಪ : ಇಲ್ಲಿದ್ದೀಯೇನೋ ಮಗನ? ಏ ರಾಮ್ಯಾ, ಇವರಣ್ಣ ಸ್ಟೇಷನ್ನಿಗಿ ಹೋಗ್ಯಾನ. ರವಿ ಇಲ್ಲಿ ಸಿಕ್ಕಾನಂತ ಹೇಳಿ ಕರತಾ ಹೋಗು.
*(ಒಬ್ಬ ಹುಡುಗ ಓಡುವನು)*

ಭಾಳ ಉಪಕಾರಾಯ್ತಿರೀ ಸಾಹೇಬರs

ಟ್ವೆಂಟಿ : ಇವರು ತಮ್ಮ ಮಗ ಏನ್ರಿ?

ಶಿವರಾಯಪ್ಪ : ಮಗ ಅಲ್ಲ, ವೈರಿ ಸೂಳೇಮಗ.

ಟ್ವೆಂಟಿ : ಹೇಳಿ ಕಳಿಸಿಧಾಂಗ ಒಳ್ಳೇ ಯಾಳೇಕ ಬಂದ್ರಿ. ಹೆಂಗ ಗೊತ್ತಾಯ್ತರಿ?

ಶಿವರಾಯಪ್ಪ : ಈಕಿ ಪತ್ರ ಬರೆದಿದ್ದಳಲ್ಲ- ಪ್ರಿಯಕರಾs ಅಂತ. ಈ ಕರಾ ಇಲ್ಲೇs ಇರಬೇಕಂತ ಬಂದರ ಸಾಕ್ಷಾತ್ಕಾರ ಅದ್ನಲ್ಲಾ ರಂಭಾ ಸಮೇತ. ನಮ್ಮ ಜಾತೀದಲ್ಲ, ಆ ಹುಡುಗಿ ಗೆಳೆತನ ಬಿಡೊ ಅಂದೆ. ಬಿಟ್ಟೆ ಅಂದ. ಥೇಟ್ ಹಾದಿಗಿ ಬಂದವರ್ಹಾಂಗ  ನಾಟಕ ಮಾಡಿದ. ಮರತ ಅಂತ ನಾವು ಮೈಮರತರ ಮತ್ತ ಓಡಿ ಹೊಂಟಾನಲ್ಲ- ರೊಕ್ಕಾ ಬಳಕೊಂಡು. ಏನ ಹುಟ್ಟಬಾರದ ಹುಟ್ಟಿದ್ಯೊ ಮಗನs ನನ್ನ ಹೊಟ್ಯಾಗ!

ಹದಿನೆಂಟು : ಯಜಮಾನರ, ತಿಳೀದs ಏನೇನು ಮಾತಾಡಬ್ಯಾಡ್ರಿ. ಅಷ್ಟ ಸರಳ ವ್ಯವಹಾರ ಅಲ್ಲಿದು, ಹುಡುಗೋರಿಗಿ ತಿಳಿಸಿ ಹೇಳೋಣು.

ಶಿವರಾಯಪ್ಪ : ಹೆಂಗ ತಿಳಿಸಿ ಹೇಳಲಿ?

ಹದಿನೆಂಟು : ನೀವ ಹಿಂಗ ಕುದರಿ ಹತ್ತಿ ನಿಂತರ ನಾ ಏನೂ ಹೇಳಾಣಿಲ್ಲ. ನೀವುಂಟು, ನಿಮ್ಮ ಕೂಸುಂಟು.

ಶಿವರಾಯಪ್ಪ : ಕೂಸು?
*(ಬಟ್ಟೆಯ ಬಳಿಯ ಕೂಸನ್ನು ಸುತ್ತುವರಿದು ನೋಡಿ ಬರುವನು)*

ಶೋಭಾ : ರವಿ.....

ಶಿವರಾಯಪ್ಪ : ತಿಳೀತು.

ಹದಿನೆಂಟು : ನಿಮಗ ತಿಳಿದಿಲ್ಲಾ....

ಶಿವರಾಯಪ್ಪ : ತಿಳೀದೇನ್ರಿ? ಇದ ನನ್ನ ಮೊಮ್ಮಗನೋ ಮೊಮ್ಮಗಳೋ. ಹೌಂದಲ್ಲ?
*(ಕೋಪದಿಂದ ಬುಸುಗುಡುತ್ತಿದ್ದಾನೆ)*

ರವಿ.

ಶೋಭಾ : *(ಓಡಿ ಹೋಗಿ ಹದಿನೆಂಟನ ಕಾಲು ಹಿಡಿದು)*

ಈ ಕೂಸು ಖರೇನ ಬಂದಲ್ಲರೋ ಎಪ್ಪಾ.

ರವಿ : ಅಪ್ಪಾ, ಶೋಭಾ ಹೇಳೋದ ಖರೇ ಐತಿ.

ಶಿವರಾಯಪ್ಪ : ಖರೆ? ಖರೆ ಹೇಳಿದ್ದರ ನಿನಗ ಪೆದ್ದ ಅಂತಿದ್ಲು. ಅಂದಳೇನು? ಅಂದಿಲ್ಲ. ಹಾಂಗಿದ್ರ ಆಕೆಂಥಾ ಖರೆ ಹೇಳ್ಯಾಳೋ! ನಡೀ ಮೊದಲು. ಬಾಯಿ ಬಿಟ್ಟರ ಹಲ್ಲ ಮುರೀತೇನೀಗ.

ರವಿ : ಆದರ ಶೋಭಾ....

ಶಿವರಾಯಪ್ಪ : ಊರ ಹಂದೆಲ್ಲಾ ಆ ಕೆರ್ಯಾಗ ಹೊಳ್ಯಾಡ್ಯವ. ಮತ್ತ ಅದs ಬೇಕಂತೀಯೇನೋ?

ಟ್ವೆಂಟಿ : ನೋಡ್ರಿ ಯಜಮಾನರ. ಒಬ್ಬನ ತಲ್ಯಾಗ ಹೇನಾಗಿದ್ದರ ಸಾಬನ ಹಚ್ಚಿ ತೊಳೀಬೌದು, ಆದರ ಹೇನ ತಗಧಾಂಗ ಅವನ ತಲ್ಯಾಗಿನ ಕೆಟ್ಟ ವಿಚಾರ ತಗ್ಯಾಕ ಆಗಾಣಿಲ್ಲರಿ.

ಶಿವರಾಯಪ್ಪ : ನೀವು ಬಾಯ್ಮುಚ್ಚತೀರಿ?

ಹದಿನೆಂಟು : ಏ ಟ್ವೆಂಟೀ.

ಶಿವರಾಯಪ್ಪ: ರವಿ, ನಡಿ ಹೋಗೋಣು.

ಹದಿನೆಂಟು : ಕೇಳ್ರಿಲ್ಲೆ.....

ಶಿವರಾಯಪ್ಪ : ಬಾಯ್ಮುಚ್ಚರಿ.

ಹದಿನೆಂಟು : ಯಾಕ? ಜೈಲಿಗೆ ಹೋಗಬೇಕಂತೀರೇನ? ಏನೋ ಕಿಮ್ಮತ್ತು ಕೊಟ್ಟ ಮಾತಾಡಿಸಿದರ ಬಾಯ್ಮುಚ್ಚಂತೀರೇನ್ರಿ? ಸೊಸೀನ್ನ, ಮೊಮ್ಮಗನ್ನ ಕರಕೊಂಡ ಮನೀಗಿ ಹೋಗ್ರಿ, ಇಲ್ಲದಿದ್ದರ ಪೋಲೀಸ್ಟೇಷನ್ನಿಗಿ ನಡೀರಿ.

ಶಿವರಾಯಪ್ಪ : *(ರವಿಯನ್ನು ಒದೆದು)*

ಬದ್ಮಾಸ್ ಸೂಳೇಮಗನ, ಏನೋ ನಿನ್ನ ವ್ಯವಹಾರ? ಬೊಗಳೊ, ನಿಂದೇನೊ ಆ ಕೂಸು?

ರವಿ : ನಂದಲ್ಲ ಆದರ….?

ಶಿವರಾಯಪ್ಪ : *(ಮತ್ತೆ ಒದ್ದು)*

ಮತ್ತೇನ ಆದರ….?

ರವಿ : ಶೋಭಾಂದೂ ಅಲ್ಲ.

ಶಿವರಾಯಪ್ಪ :  ಅದನ್ಯಾರ ಕೇಳಿದರು ನಿನ್ನ? ಕೇಳದ ಯಾಕs ಬಾಯಿ ಬಿಟ್ಟೆ?

ಹದಿನೆಂಟು : ಶೋಭಾ, ಯಾರದದು? ನೀ ಹೇಳಬೇಕು.

ಶಿವರಾಯಪ್ಪ : ರವಿದೇನು?

ಶೋಭಾ : ನಮ್ಮಿಬರದೂ ಅಲ್ಲ.

ಶಿವರಾಯಪ್ಪ : ರವೀದಲ್ಲಂಧಂಗಾಯ್ತು, ಸಾಹೇಬರ ಇನ್ನ ಹೋಗೋಣ್ರೆ ನಾವು?

ಹದಿನೆಂಟು : ಹೋಗೀರೆಂತ ತಡೀರಿ. ಹೆಣಮಗಳ ಜವಾಬ ಬರಲಿ, ಏನವಾ?

ಶೋಭಾ : *(ಅಳುತ್ತ)*

ಹೆಂಗ ಹೇಳಲಿ? ಹೆಣಕ್ಕ ಹುಳಾ ಮುತ್ತಿಧಾಂಗ ಎಲ್ಲರು ನನ್ನ ನೋಡತೀರಿ. ಖರೋಖರ ಹೇಳತೀನಿ- ಇದು ನಂದಲ್ಲ. ನಾ ಹೆಂಗಸ ಖರೆ. ಹಾಗಂದರ ನಾ ಇದರ ತಾಯಿ ಹೆಂಗಾದೇನು?

ಹದಿನೆಂಟು : ಮಿಸ್ ಶೋಭಾ, ಇದ್ದದ್ದ ಇದ್ಧಾಂಗ ಹೇಳಿದರ ನಿನಗೇನೂ ಧೋಕ ಆಗಧಾಂಗ ನೋಡಿಕೊಳ್ತೀನಿ. ಇವರು ಶ್ರೀಮಂತರಾಗಿರಬಹುದು. ಆದರೂ ನಾ ಇರೋತನಕ ಹೆದರಬ್ಯಾಡ. ಈ ಕೂಸ ರವೀದಂತ ನೀ ಒಮ್ಮಿ ಹೇಳಿದರ ಸಾಕು. ನಿಮ್ಮಿಬ್ಬರ ಮದಿವಿ ಮಾಡಸೋ ಜವಾಬ್ದಾರಿ ನಂದು, ಕಾರಭಾರ ಬಡವ ಮಾಡಲಿ; ಶ್ರೀಮಂತ ಮಾಡಲಿ, ಕಾರಭಾರನs

ರವಿ : ಅಲ್ಲರೀ ಸಾಹೇಬರs

ಶಿವರಾಯಪ್ಪ : ಒದೀತೀನೀಗ.

ಹದಿನೆಂಟು : ನನಗ ಹುಡುಗನ ಮಾತ ಬೇಕಿಲ್ಲ. ಶೋಭಾ, ನೀ ಹೇಳು. ನಿನಗಿಷ್ಟ ತಿಳಿದಿರಲಿ. ರವೀನ ಉಳಿಸಾಕಂತ ನೀ ಸುಳ್ಳ ಹೇಳಿದರ ಮುಂದಿಂದಕೆಲ್ಲಾ ನೀನs ಜವಾಬ್ದಾರಿ; ನಾವಲ್ಲ. ಆರಿಸಿಕೊ.

ಶೋಭಾ : ಇದು ರವೀದು ಅಲ್ಲ.

ಶಿವರಾಯಪ್ಪ : *(ಬೆವರೊರಸಿಕೊಳ್ಳುತ್ತ)*

ಬದುಕಿಸಿದೆ ಹಡದವ್ವಾ. ಸಾಹೇಬರ, ನಾವು ಹೋಗೋಣೇನ್ರಿ?

ಹದಿನೆಂಟು : ತಡೀರಿ. ಮಿಸ್ ಶೋಭಾ, ಏನ ಮಾತಾಡತಿದ್ದೀ ಗೊತ್ತೇನು?

ಟ್ವೆಂಟಿ : ಬಂಗಾರದ ತತ್ತೀ ಹಾಕೋ ಕೋಳಿ ಕಳಕೊಳ್ತೀಯವಾ.

ಹದಿನೆಂಟು : ಹೇಳು, ಯಾರದ್ದಿದು?

ಶೋಭಾ : *(ಅಳುತ್ತ)*

ನಮ್ಮದಲ್ಲ.

ಹದಿನೆಂಟು : ಇದು ಇಲ್ಲಿಗೆ ಹೆಂಗ ಬಂತು?

ಟ್ವೆಂಟಿ : ಆಕಾಶದಿಂದ ಉದರಿತ?

ಶೋಭಾ : ನನಗೇನ ಗೊತ್ತು?

ಹದಿನೆಂಟು : ಮಿಸ್ಟರ್ ರವಿ....

ರವಿ : ನನಗೂ ಗೊತ್ತಿಲ್ಲರಿ.

ಹದಿನೆಂಟು : ಈ ಹೆಣಮಗಳು, ಇಲ್ಲಿಗೆ ನಿನಗಿಂತ ಮೊದಲು ಬಂದಳು ಹೌಂದ?

ರವಿ : ಹೌಂದು.

ಹದಿನೆಂಟು : ಮಿಸ್ ಶೋಭಾ ಹೌಂದೇನ್ರಿ?

ಶೋಭಾ : *(ಹೌದೆಂದು ಕತ್ತು ಹಾಕುವಳು)*

ಹದಿನೆಂಟು : ಮಿಸ್ ಶೋಭಾ, ತಗೊಂಡಹೋಗ್ರಿ ಅದನ್ನ.

ಶಿವರಾಯಪ್ಪ : ನಮಸ್ಕಾರ ಬರತೀವಿ ಸಾಹೇಬರ.

ಹದಿನೆಂಟು : ಏ ಟ್ವೆಂಟೀ, ಅವರ ಅಡ್ರೆಸ್ ಬರಕೊ.
*(ಟ್ವೆಂಟಿ ಕೂಡಲೆ ವಿಳಾಸ ಬರೆದುಕೊಳ್ಳಲು ಸಿದ್ಧನಾಗುವನು)*

ಶಿವರಾಯಪ್ಪ : ಶಿವರಾಯಪ್ಪ ಅಂಡ್ ಸನ್ಸ್, ಅಡತಿ ಅಂಗಡಿ, ಸ್ಟೇಷನ್ ರೋಡ್ ಹುಬ್ಬಳ್ಳಿ, ನಡಿಯೋ.

ರವಿ : ಅಪ್ಪಾ.

*(ಶಿವರಾಯಪ್ಪ ಚಪ್ಪನೆ ಮಗನ ಕೆನ್ನೆಗೊಂಡು ಬಾರಿಸಿ ಎಳೆದುಕೊಂಡು ಹೋಗುವನು. ಹುಡುಗ ಅವನ ಸೂಟಿಕೇಸಿನೊಂದಿಗೆ ಬೆನ್ನು ಹತ್ತುವನು)*

ಹದಿನೆಂಟು : ಟ್ವೆಂಟಿ. ಹೆಣಮಗಳ್ನ ಸ್ಟೇಷನ್ನಿಗಿ ಕರಕೊಂಡ ನಡಿ ಅಥವಾ ಬ್ಯಾಡ ಹೋಗಿ ಮನೀಗಿ ಮುಟ್ಟಿಸಿ ಬಾ. ಸಪ್ತಾಪುರದಾಗ್ಯೆತಿ ಅಂದಳಲ್ಲ ಹೋಗು.

*(ಶೋಭಾ ಓಡಿ ಬಂದು ಮತ್ತೆ ಕಾಲು ಹಿಡಿದುಕೊಂಡು ಅಳುವಳು)*

ದಿನಬೆಳಗಾದರ ಇಂಥಾ ಕೇಸಿನಾಗ ಮುಳಿಗೇಳತೀವಿ. ನಮಗೆಲ್ಲಾ ತಿಳೀತ್ಯೆತಿ. ತಮ್ಮ ಖರೆ ಒಪ್ಪಿಕೊಳ್ಳಾಕ ಈ ಮಂದಿಗಿ ಎಂದ ಧೈರ್ಯ ಬರತ್ಯೆತೋ!

ಶೋಭಾ : ಯಾವ ಮುಖ ಹೊತ್ತ ಮನೀಗಿ ಹೋಗ್ಲಿ? ಬೇಕಾದರ ಡಾಕ್ಟರಿಂದ ಪರೀಕ್ಷೆ ಮಾಡಸರಿ, ಇದು ನಂದಲ್ಲ.

ಹದಿನೆಂಟು : ಅದು ಆ ಮೇಲಿನ ಮಾತು., ಸದ್ಯಕ್ಕಂತೂ ಕೂಸು ನಿಂದs.

*(ಶೋಭಾ ನಿಧಾನವಾಗಿ ಕಾಲು ಬಿಡುವಳು, ಕೂಸಿನ ಕಡೆ ಹೋಗುವಳು. ಮುಂದಿನ ಮಾತು ಮುಗಿಯುವ ಹೊತ್ತಿಗೆ ಕೂಸನ್ನು ಮೆಲ್ಲನೆತ್ತಿ ಹೊರಡುವಳು. ಟ್ವೆಂಟಿ ಸೂಟಕೇಸನ್ನೆತ್ತಿ ಬೆನ್ನಹತ್ತುವನು)*

ನಮ್ಮ ಮುಖ ನಾವs ಹೊತ್ತಾಗ ಹೆಂಗ ಇರತ್ಯೆತೊ! ಬರೀ ಮಂದೀದs ಹೊತ್ತ ಹೊತ್ತ ಲೋಕಾ ಅಣಗಿಸೋದಕ್ಕಿಂತ ನಮ್ಮದ ನಾವs ಹೊತ್ತ ನಮಗ ಅಣಕಿಸಿಕೊಳ್ಳೋದ ಚಲೋ ಅಲ್ಲ? ಕನಸಿನಾಗ ಒಮ್ಮಿ ತಿರುಪತಿ ತಿಮ್ಮಪ್ಪ ಹೇಳ್ತಿದ್ದ: ಮಗನs ಮನಿಶ್ಯಾನ ಖರೆ ನೋಡಬೇಕಾದರ ಕಣ್ಣಾಗ ಕಣ್ಣಿಟ್ಟು ನೋಡಬಾರದು. ನಿನ್ನ ಮೂಗಿನ ತುದಿ ನೋಡಿಕೋಬೇಕು ಅಂತ. ಹಾಂಗ ನೋಡಿದರ ಎದುರಿಗಿದ್ದಾವ ಡಬಲ್ ಕಾಣಿಸ್ತಾನ. ಬಹುಶಃ ಅದs ಖರೇನೋ ಏನೋ! ಅದಕ್ಕ ಮನಿಶ್ಯಾ ಏಕಕಾಲಕ್ಕ ಎರಡೆರಡ ಹಾದ್ಯಾಗ ಕಾಲಿಟ್ಟ ನಡೀತಾನ. ಕುಡಗೋಲ ನುಂಗವನೂ ಅವನ, ನುಂಗಸೋವನೂ ಅವನ! ಇದನ್ನs ಹೇಳತೀನಿ; ನನ್ನ ಮಾತ ಯಾರೂ ನಂಬಾಣಿಲ್ಲ.

ತೆರೆ.

# ಭಾರತಾಂಬೆ

*(ಕೂಲಿ ಮಾಡಿ ಬದುಕುವಂಥವರ ಒಂದು ಮನೆ. ಒಳಗೊಂದು ಅಡಿಗೆ ಮನೆ. ಹೊರಗೊಂದು ಪಡಸಾಲೆ. ರಂಗದ ಎಡಬದಿಗೆ ಒಂದು ಬಾಗಿಲು. ಬಲ ಬದಿಗೊಂದು. ಎಡಬಾಗಿಲಿನಿಂದ ಊರರಸ್ತೆಗೂ, ಬಲ ಬಾಗಿಲನಿಂದ ಹಿತ್ತಲಕ್ಕೂ ಹೋಗಬಹುದು. ತೆರೆ ಎದ್ದಾಗ ಅಡಿಗೆ ಮನೆಯ ಬಾಗಿಲಲ್ಲಿ ಬಂಗಾರಿ ಅಳುತ್ತ ನಿಂತಿದ್ದಾಳೆ. ರಾಮಕ್ಕ ಮುದುಕಿ ಅತ್ತಿತ್ತ ಚಲಿಸುತ್ತ ದುಃಖದಿಂದ ಯಾರನ್ನೋ ಬೈಯುತ್ತಿದ್ದಾಳೆ.)*

ರಾಮಕ್ಕ : ಮಂತ್ರಿ ಅಂತ ಮಂತ್ರೀ. ಅಪ್ಪ ಮಂತ್ರೀ ಆದರ ಮಗನ್ನ ಹಿಂಗ ಜೋಕುಮಾರ ಮಾಡೂದ್ಯೆತಿ? ನಾವು ಹೋಟ ಬರೀಬೇಕು. ಇವರ ಮಲ ಹೊರಬೇಕು. ಇವರು ಮಂತ್ರಿ ಆಗಿ ಮೆಣಸ ಅರ್ಯಾಕ ಬಂದರ ನಮ್ಮ ತಲಿ ಕೊಟ್ಟ ಸುಮ್ಮನs ಕುಂತಿರಬೇಕು. ಯಾಕಂದರ ನಾವು ಕೀಳು ಕುಲದವರು ನೋಡು,
ಅವರು ಲೇ ಅನ್ನಬೇಕು. ನಾವು ಧಣೇರs ಅನ್ನಬೇಕು. ಅವರು ಕಾಲಿನಿಂದ ತೋರಿಸಿದ್ದನ್ನ ನಾವು ನೆತ್ಯಾಗ ಹೊತ್ತ ಮಾಡಬೇಕು. ಹೆಚ್ಚೂ ಕಮ್ಮಿ ಆದರ ಕೂಲಿ ತಪ್ಪಸ್ತಾರ, ಊರ ಬಿಡಸ್ತಾರ. ಅದಕ್ಕ ಅವರ ನಾಯೀ ಹಾಂಗ ಇರಬೇಕು. ಯಾಕಂದರ ನಾವು

ಕಡಿಮಿಯವರು ನೋಡು.

ಇವರ ಹೆಂಗಸರಾದರ ಬುರುಕಾ ಹಾಕ್ಕೊಂಡ ಬೇಕಾದ್ದ ಬ್ಯಾಡಾದ್ದ ತಿಂದ ಬಿಳಿ ಹಂದೀ ಹಾಂಗೀರಬೇಕು. ನಾವು ಪಡಿಕಿ ಉಟಗೊಂಡ ಹರಕಿನಾಗ ಮೈ ತೋರಿಸಿಕೋತ, ಇವರು ನೋಡಿದಾಗೆಲ್ಲ ನಕ್ಕೋತ ಇರಬೇಕು. ನಕ್ಕಾಗೊಮ್ಮೆ ಈ ಊಚ ಭಾಡೇರ ಕೈ ಮಾಡಿ ಕರೀತಾರ. ಕರದಾಗೊಮ್ಮೆ ಇವರಿಗಿ ಸೀರಿ ಸೆರಗ ಹಾಸಬೇಕು. ಯಾಕಂದರ ನಾವ ಹೊಲೇರ ನೋಡು. ಯಾಕಳತೀ ಸುಮ್ಮನಿರಬಾರದ? ಆ ಊಚ ಭಾಡ್ಯಾ ನಿನ್ನ ಮಾನಾ ತಗದರ ಸುಮ್ಮನ ನಗತಿರಬೇಕು. ಅವನ ಸುಖ ದೊಡ್ಡದೊ? ನಿನ್ನ ಮಾನ ದೊಡ್ಡದೊ? ನಿನಗ ಸಿಟ್ಟ ಇರಬಾರದು, ಮಾನ ಮರ್ಯಾದಿ ಇರಬಾರದು, ಅವರು ಹೇಳಿಧಾಂಗ ಕುಣ್ಯಾಕ ಒಂದ ಮೈ ಇರಬೇಕಷ್ಟs. ಯಾಕಂದರ ನೀ ಹೊಲತಿ

ನೋಡು. *(ಅವಳು ಹೀಗೆ ಮಾತಾಡಿಕೊಳ್ಳುತ್ತಿದ್ದಾಗ ಕರಿನಿಂಗ ಓಡಿ ಬಂದು ಬಾಗಿಲಕ್ಕೆ ಅಗಳಿ ಹಾಕವನು. ಇನ್ನೇನು ಕಾದಿದೆಯೋ ಎಂದು ಬಂಗಾರಿ, ರಾಮಕ್ಕ ಇಬ್ಬರಿಗೂ ದಿಗಿಲಾಗುತ್ತದೆ. ಹೊರಗೆ ಜನ ಗದ್ದಲ ಮಾಡುತ್ತಿದ್ದಾರೆ. ಕರಿನಿಂಗ ಬಂದವನೇ ರಾಮಕ್ಕನ ಕಾಲು ಹಿಡಿದುಕೊಳ್ಳುವನು. ಹುಡುಗ ಗಾಬರಿಯಿಂದ ನಡುಗುತ್ತಿದ್ದಾನೆ.)*

ಕರಿನಿಂಗ : ಎವ್ವಾ ಕಾಪಾಡ, ತಾಯೀ……

ರಾಮಕ್ಕ : ಮತ್ತೇನಾತೊs?

ಕರಿನಿಂಗ : ಎಲ್ಲಾರೂ ಬೆನ್ನ ಹತ್ಯಾರಬೇ.

ರಾಮಕ್ಕ : ಎಲ್ಲಾ ಬಿಟ್ಟ ಬೆನ್ನ ಯಾಕ ಹತ್ಯಾರ?

ಕರಿನಿಂಗ : ಫೋಜದಾರನ ಮುಂದ ಸಾಕ್ಷಿ ಹೇಳಿಲ್ಲೇನಬೇ?

ರಾಮಕ್ಕ : ಹೇಳಿದರ….?

ಕರಿನಿಂಗ : ಆ ಕಡಿಂದ ಮುಸಲೇರ ಬೆನ್ನ ಹತ್ಯಾರ. ಈ ಕಡಿಂದ ಹಾರೂರ ಬೆನ್ನ ಹತ್ಯಾರ…. ರಾಮಕ್ಕ ನನ್ನ ಕೊಲ್ಲತಾರಬೇ….

ರಾಮಕ್ಕ : ಖರೇ ಸಾಕ್ಷಿ ಹೇಳೀದಿ ಅಂದಮ್ಯಾಲ ಅಂಜತೀ ಯಾಕೊ? ಬಷೀರ ನನ್ನ ಮಗಳನ್ನ ಕೆಡಿಸಿದ್ದ ಸುಳ್ಳ?

ಕರಿನಿಂಗ : ಸುಳ್ಳಲ್ಲಬೇ, ಆದರ ಅವ ಮಂತ್ರೀ ಮಗ.

ರಾಮಕ್ಕ : ಮಂತ್ರೀ ಮಗ ಆದರ ಅವರಿಗಷ್ಟs ಬ್ಯಾರೆ ಕಾಯ್ದ ಇರತಾವೇನ?

ಕರಿನಿಂಗ : ಹೂನಬೇ, ತಕರಾರ ಬರಕೊಟ್ಟ ಬಂದೀವಲ್ಲ. ಆ ಫೋಜದಾರ ಪೊಲೀಸರೆಲ್ಲ ಈಗ ಮಂತ್ರೀ ಮನೀಗೇ ಬಂದಾರ. ಮಂತ್ರೀನೂ ಊರಿಗೆ ಬಂದಾನಂತ.

ರಾಮಕ್ಕ : ಮಗ ಪುಂಡತನ ಮಾಡ್ಯಾನಂತ ಹಾರಾತುರಾಯಿ ನಡದೈತೇನೊ, ಅದಕ್ಕ, ಗದ್ದಲ ನಡದೈತಿ.

ಕರಿನಿಂಗ : ಗದ್ದಲ ಅದಕ್ಕಲ್ಲಬೇ, ನಾ ಸಾಕ್ಷಿ ನಿಂತೇನಲ್ಲ, ಅದಕ್ಕ ನನ್ನ ಬ್ಯಾಟಿ ಆಡಾಕ ಓಡ್ಯಾಡತಾರ….

ರಾಮಕ್ಕ : ಕಾರಬಾರ ಮಾಡೂದಲ್ಲದ ಸಾಕ್ಷಿಬ್ಯಾರಿ ಒಡಕೊಳ್ಯಾಕ ಹೊಂಟಾರೇನು ಭಾಡೇರು? ಬರಲಿ, ಬರಲಿ, ದೇವರಿಗಾದರೂ ಕಣ್ಣ ಅದಾವೋ ಇಲ್ಲೋ ನಾನೂ ನೋಡೋಬಿಡತೀನಿ.

ಕರಿನಿಂಗ : ದೇವರೆಲ್ಲಾ ಊಚ ಮಂದೀ ಕಡೆ ಇರತಾವಬೇ ನಮ್ಮನ್ನ ಯಾರು ಕೇಳೂದಿಲ್ಲ. ನಾ ಯಾಕಾದರೂ ಸಾಕ್ಷಿ ನಿಂತೆನೋ...

ರಾಮಕ್ಕ : ನನ್ನ ಹಾಟ್ಯಾ ನೀ ಹೆಂಗಸೋ ಗಂಡಸೋ ಅಂತೀನಿ. ನಿನ್ನ ಹೆಂತೀ ಶೀಲಾ ಕೆಡಸ್ಯಾನ, ಸಿಟ್ಟಿಲ್ಲಾ ನಿನಗ? ಹೋಗಲಿ, ಎಲ್ಲಾದರೂ ಎಂಟ ದಿನ ಊರಬಿಟ್ಟ ಹೋಗಬಾರದ?

ಕರಿನಿಂಗ : ಎಲ್ಲಿ ಹೋಗಲಿ? ಸೀಮೀ ಕಾಯಕ ಹತ್ಯಾರ. ನೀನss ಎಲ್ಲಾದರೂ ಅಡಗಿಸಿಡಬೇ....

ರಾಮಕ್ಕ : ಹರೇದ ಹೆಣಮಕ್ಕಳು ಹಾಡಾಹಗಲಿ ಊರಾಗ ಅಡ್ಡಾಡಧಾಂಗ ಆಗೇತಿ. ಅವನ ಕೈಗಿ ಹಾವ ಹರೀಲಿ. ನನ್ನ ಮಗಳ ಮ್ಯಾಲ ಕೈ ಮಾಡಿದ್ದೇನ ಆ ಮುಸಲ? ಅಲ್ಲೆಲ್ಲಿ ಕಲ್ಲಿ ಇರಾಕಿಲ್ಲಾ? ಇಬ್ಬರಿದ್ದಿರಿ. ಜಿಗಿದ ಬೀಳೂ ಹಾಂಗ ಅವನ ನೆತ್ತಿಗೊಂದು ಕಲ್ಲ ಹೇರಬಾರದಿತ್ತ?

*(ಬಾಗಿಲು ಬಡಿದ ಸದ್ದು. ಕರಿನಿಂಗ ನಡುಗತೊಡಗುವನು. ಇಬ್ಬರೂ ತುಸು ಹೊತ್ತು ಸುಮ್ಮನಾಗುವರು. ಬಾಗಿಲ ಬಡಿತ ಜೋರಾಗುವುದು, ರಾಮಕ್ಕ ಬಾಗಿಲು ತೆಗೆಯಲು ಹೊರಡುತ್ತಲೂ ಕರಿನಿಂಗ ಗಟ್ಟಿಯಾಗಿ ಅವಳ ಕಾಲು ಹಿಡಿದುಕೊಳ್ಳುವನು. ತುಸು ಹೊತ್ತಾದ ಮೇಲೆ ಬಾಗಿಲ ಬಡಿತ ನಿಲ್ಲುತ್ತದೆ.)*

ಕರಿನಿಂಗ : ಅತ್ತೀ, ಅತ್ತೀ, ಬಾಗಿಲಾ ತಗೀಬ್ಯಾಡ ಎಪ್ಪಾ ನನ್ನ ಕೊಂದ ಹಾಕತಾರ. ನನ್ನನ್ನ ಕೊಲ್ಲತಾರಬೇ....

ರಾಮಕ್ಕ : ಅಂಜಬ್ಯಾಡೋ ಭಾಡ್ಯಾ. ಶೀಲ ಕಳಕೊಂಡ ಹೇಂತಿ ಶಿವನss ಅಂತ ಕುಂತಾಳ. ಇನ್ನ ನೀ ಅಕಿ ಗಂಡ, ನಡುಗಾಕ ಹತ್ತೀದಿ. ತಕರಾರ ಕೊಟ್ಟಾಕಿ ನಾನು, ನೀ ಅಲ್ಲ.ಗಂಡ್ಸಾಗಿ ಬರೀ ಸಾಕ್ಷಿ ಹೇಳಿದ್ದಕ್ಕ ಇಷ್ಟ ನಡಗತೀಯಲ್ಲೋ?

ಕರಿನಿಂಗ : ನಾವೂ ಕೀಳುಕುಲದವರು, ಏನ ಮಾಡಿದರೂ ತೆಪ್ಪ ಆಗತೈತಿ. 'ಮಂತ್ರೀ ಮಗನ ವಿರುದ್ಧ ಸಹಿ ಮಾಡಿದ್ದೇನೋ ಮಗನss? ನಿನ್ನ ಪೀಸ್ ಪೀಸ್ ಮಾಡತೇವಂತ' ಮುಸಲೇರ ಬೆನ್ನ ಹತ್ಯಾರ. 'ಮಗನss ಬಂದದ್ದ ಬರಲಿ, ಮಾತ ಬದಲೀ ಮಾಡಬ್ಯಾಡಂತ' ಹಿಂದೂ ಮಂದಿ ನಿಂತಾರ. ಎತ್ತಂತ ಸಾಯಲಿ? ನೀನss ಹೇಳಬೇ....

*(ಮತ್ತೆ ಬಾಗಿಲ ಬಡಿತ ಕೇಳಿಸುತ್ತದೆ.)*

ಎಪ್ಪಾ ಬಂದರೋ.... ರಾಮಕ್ಕಾ....

ರಾಮಕ್ಕ : ಮೆತ್ತಗ ಹಿತ್ತಲಾಗ ಹೋಗಿ ಬಿದ್ದಕಾ. ಹಂಗೇನಾರ ಹಿತ್ತಲ ಬಾಗಲ ಸಪ್ಪಳಾದರ ಡೊಗ್ಗಾಲ ಮಂಡಿ ಚೆಲ್ಲಿಕೊಂಡ ಆ ಹಾಳ್ ಗುಡಸಲಿಗಿ ಹೋಗಿ ಬಿದ್ದಕೊ. ಅವರೆಲ್ಲಾ ಹ್ವಾದ ಮ್ಯಾಲ ನಾ ಕರೀತೀನಿ.
*(ನಡುಗುತ್ತ ಹಿತ್ತಲ ಬಾಗಿಲಲ್ಲಿ ಮರೆಯಾಗುವನು. ಆ ಬಾಗಿಲು ಹಾಕಿಕೊಂಡು ಬಂದು ಮುಂಬಾಗಿಲು ತೆರೆಯುವಳು. ಶಾಸ್ತ್ರಿ, ಅವನೊಂದಿಗೊಬ್ಬ ಪತ್ರಕರ್ತ ಹಾಗೂ ಸೀಮೆ ಎಣ್ಣೆ ಡಬ್ಬ ಹಿಡಿದುಕೊಂಡು ಐದಾರು ಜನ ಹುಡುಗರು ಬರುತ್ತಾರೆ. ಒಳಗೆ ಬರುವ ಮುನ್ನ ಶಾಸ್ತ್ರಿ ತನ್ನ ಜನಿವಾರವನ್ನು ಕಿವಿಗೇರಿಸಿಕೊಳ್ಳುತ್ತಾನೆ.)*

ಶಾಸ್ತ್ರಿ : ಹಾ, ಹೆದರಬೇಡ ರಾಮೀ, ನೋಡು ನಿನಗೊಸ್ಕರ ಯಾರ್ಯಾರು ಬಂದಾರss! ಎಷ್ಟು ದೂರದಿಂದ ಬಂದಾರ!
ಬರ್ರೀ ಸಾಹೇಬರss, ಬರ್ರೀ. ಇಕೀನss ನೋಡ್ರಿ ರಾಮಕ್ಕ. ಈಕಿ ಬಂಗಾರಿ.

ರಾಮಕ್ಕ : ಇವ ಯಾರು?

ಶಾಸ್ತ್ರಿ : ಇವ ಅಲ್ಲಬೆ, ಇವರು ಅನ್ನು. ದೊಡ್ಡ ಸಾಹೇಬರು. ಬೆಂಗಳೂರಿನವರು. ವರ್ತಮಾನ ಪೇಪರ ಬರತೈತಲ್ಲ, ಅದರ ಸಂಪಾದಕರು. ಇವರ ಪೇಪರಂದರ, ನಿನ್ನೆ ನಿನ್ನ ಮಗಳು ವಿಷಯ ಬಂತಲ್ಲ, ಅಂಥ ಸಣ್ಣ ಪೇಪರಲ್ಲ ಮತ್ತ.

ರಾಮಕ್ಕ : (ದುಃಖ ತಡೆಯದೆ)

ಹಾದ ಹೋಗವರೆಲ್ಲಾ ಬಂದ ಬಂದ ನೋಡಿ ಹೋಗೋ ಹಾಂಗಾಯ್ತೆಪ್ಪ ನಮ್ಮ ಬಾಳ್ವೆ, ನೀನು ಕಣ್ತುಂಬ ನೋಡಿ ಹೋಗು. ನಮ್ಮ ಮಾನಂದರ ಮಾರ್ಕೆಟದಾಗಿನ ಪಲ್ಲೆ ಆಗೇತಿ. ನಾವತ್ತರೂ ಸತ್ತರೂ ಯಾರ ಕೇಳತಾರ?

ಶಾಸ್ತ್ರಿ : ಹಂಗೇಲ್ಲಾ ಹೇಳಬ್ಯಾಡಬೇ; ನಾವಿಲ್ಲೇನು? ಇದನ್ನ ಇಷ್ಟಕ್ಕs ಬಿಡತೀವಿ ಅಂತ ತಿಳಕೋಬ್ಯಾಡ. ಬಂಗಾರೀ ಮ್ಯಾಲ ಕೈ ಮಾಡೋದು ಒಂದ ಮಾತು ತಿಳಿ. *(ಬಂಗಾರಿಗೆ)* ಬಂಗಾರೀ ಮುಖ ಮುಚ್ಚಿಕೋಬ್ಯಾಡs ಬೇಕಾದರ ಮುಖ ತಗದ ಅಳು. ಸಾಹೇಬರು ಒಂದ ಸಲ ನಿನ್ನ ಮುಖ ನೋಡಲಿ.
*(ಭಾವಾವೇಶದಿಂದೆಂಬಂತೆ ಬಾಗಿಲ ಬಳಿಯಿದ್ದ ಬಂಗಾರಿಯನ್ನು ಮುಟ್ಟಿ ಸಮೀಪ ಕರೆತಂದು, ಮುಖದ ಮೇಲಿನ ಕೈ ತೆಗೆದು ಪತ್ರಕರ್ತ ನಿಗೆ ತೋರಿಸುತ್ತ.)*
ನೋಡ್ರಿ, ಸಾಹೇಬ್ರ, ನಾ ಹೇಳೋ ಮಾತು ಖರೇನೋ ಸುಳ್ಳೋ ನೀವs ನೋಡ್ರಿ.... ಎಂಥಾ ಎಳೀ ವಯಸ್ಸು ಏನ ಕೋಮಲ ಶರೀರ.... ಇಂಥ ಕೂಸಿನ ಮ್ಯಾಲ ಕೈ ಮಾಡಿದನಲ್ಲರೀ ಚಂಡಾಲ!
*(ಬಂಗಾರಿಯನ್ನು ತಿರುಗಿಸಿ ಹರಿದ ಕುಪ್ಪಸ ತೋರಿಸುತ್ತ).*
ನೋಡ್ರಿ, ಇಲ್ಲಿ ನೋಡ್ರಿ ಆ ಲಫಂಗ ಬಲಾತ್ಕಾರ ಮಾಡಿದ್ದಕ್ಕ ಇದಕ್ಕಿಂತ ಸಾಕ್ಷಿ ಬೇಕೇನ್ರಿ? ನಾನಿವತ್ತು ಇಡೀ ಪ್ರಪಂಚಕ್ಕೆ ಒಂದ ಪ್ರಶ್ನಾ ಕೇಳಬೇಕಂತೀನಿ- ಹಿಂದೂ ಸ್ತ್ರೀಯರು ಈ ದೇಶದಲ್ಲಿ ಮಾನವಂತರಾಗಿ ಬದುಕಬೇಕೊ? ಬದುಕಬಾರದೋ? ಹಿಂದೂಧರ್ಮ ಉಳೀಬೇಕೋ? ಬ್ಯಾಡೋ? ಸಾಹೇಬರ, ಇದನ್ನೆಲ್ಲಾ ನೀವು ನಿಮ್ಮ ಪೇಪರದಾಗ ಬರೀಬೇಕ್ರಿ. ಇದು ನಮ್ಮ ದೇಶದ ಅಳಿವು-ಉಳಿವಿನ ಪ್ರಶ್ನೆ. ಈ ಪ್ರಶ್ನೆ ನಾ ಕೇಳಿದೆ ಅಂತ ಬರೀರಿ. ರಾಮೀ, ಸಾಹೇಬರಿಗೆ ನಿನ್ನ ಕತಿ ಹೇಳು. ಸಾಹೇಬರs ಈ ಕತಿ ಕೇಳಿದರ ಕಣ್ಣಾಗ ಕಣ್ಣೀರಲ್ಲರೀ ರಕ್ತ ಬರತದ ರಕ್ತ! ಇದು ಮಹಾಭಾರತ. ನಾವು ನೀವೆಲ್ಲಾ ಇದರ ಪಾತ್ರಧಾರಿಗಳು, ಅವನಿದ್ದಾನಲ್ಲ ಆ ತುರುಕ, ಮ್ಲೇಂಛ ಮಂತ್ರಿ ಮಗನೋ ಭೋಸೆಡಿ ಮಗನೋ ಅವನು ದುಶ್ಯಾಸನೋಪಾದಿಯಲ್ಲಿ ಬಂದು ಬಂಗಾರಿ ಅಲ್ಲ ಭಾರತಾಂಬೆಯ ಸೀರೆ ಸೆಳೀತಿದಾನ.....

ರಾಮಕ್ಕ : ನಿಮ್ಮ ಹೆಂಗಸರಿಗಾದರ ಸೀರೀ ಕೊಡಾಕ ದೇವರಾದರೂ ಮುಂದ ಬರತಾನ, ನಮಗ್ಯಾರದಾರೋ ಎಪ್ಪಾ?

ಪತ್ರಕರ್ತ : ಹಿಯರ, ಹಿಯರ!

ಶಾಸ್ತ್ರಿ : ಅಳಬ್ಯಾಡ ರಾಮೀ, ನಿನ್ನ ಒಂದೊಂದ ಕಣ್ಣೀರ ಹನಿ ಕೂಡಾ ಒಂದೊಂದು ರಕ್ತದ ಹನಿ ಆಗತದ. ನಾವಿನ್ನೂ ಜೀವಂತ ಇದ್ದೀವಿ. ನಮ್ಮ ಎದೆಗುಂಡಿಗೆಯಲ್ಲಿ ಕೊನೇ ಹನಿ ರಕ್ತ ಇರೋತನಕಾ ಹಿಂದೂ ಧರ್ಮಕ್ಕಾಗಿ ಹೋರಾಡತೀವಿ. ಇನ್ನೇನು ನೆತ್ತರಯಜ್ಞ ಸುರುವಾಯ್ತಂತ ತಿಳಿ.

ರಾಮಕ್ಕ : *(ಅದೇ ದಾಟಿಯಲ್ಲಿ ಅಳುತ್ತ)*
ನೀವಾದರೂ ಏನ ಸುದ್ದುಳ್ಳವರಂತ ನಂಬೂಣ್ರಿ? ಹೋದ ತಿಂಗಳು ನೀವೂ ಬಂಗಾರೀ ಮ್ಯಾಲ ಕೈ ಮಾಡಿದಿರಿ. ಕರಿನಿಂಗ ಬಂದಾಂತ ಓಡಿ ಹೋದಿರಿ.

ಶಾಸ್ತ್ರಿ : *(ತಪ್ಪಿ ತಸ್ಥನೆನ್ನಿಸಿ ಅದನ್ನು ಮುಚ್ಚಿಕೊಳ್ಳಲು ದೊಡ್ಡ ದನಿಯಲ್ಲಿ)*
ಛೇ ಛೇ ರಾಮೀ ಬುದ್ದೀ ಎಲ್ಲಿಟ್ಟೇದಿ? ನಂನಮ್ಮ ಜಗಳಾ ಬಯಲಿಗಿಡತಿ? ಬೆಂಗಳೂರಿನ ಸಾಹೇಬರಂದರ ಪೇಪರ್ ಹುಲಿ ಇದ್ದಾಂಗ.

ಒಮ್ಮೆ ಪೇಪರದಾಗ ನಿನ್ನ ಹೆಸರ ತಗೊಂಡ ಗರ್ಜನಾ ಹೊಡೆದರ ದೇಶಕ್ಕೆ ದೇಶ ನಡಗತದ. ಅವರ ಮುಂದ ನಿನ್ನ ಕತಿ ಹೇಳು. ನಮ್ಮೆದ ಇದ್ದs ಇರತದ.

ಪತ್ರಕರ್ತ : ರಾಮವ್ವಾ, ನೀವು ಹರಿಜನರೇನು?

ರಾಮಕ್ಕ : ಅಲ್ಲರೀ, ಹೊಲೆಮಾದಿಗರು.

ಶಾಸ್ತ್ರಿ : ಹಿಂದೂ ಅನ್ನೂ.

ಪತ್ರಕರ್ತ : ನೀವು ಕೋಪ ಮಾಡಿಕೊಳ್ಳೊದಿಲ್ಲ ಅಂದರೆ ಒಂದು ಪ್ರಶ್ನೆ ಕೇಳತೀನಿ. ನಿಮ್ಮ ಮಗಳ ಮೇಲೆ ಹ್ಯಾಗೆ ಅತ್ಯಾಚಾರ ನಡೀತು ಅಂತ ಸ್ವಲ್ಪ ವಿವರವಾಗಿ ಹೇಳ್ತೀರಾ?

ರಾಮಕ್ಕ : ಅದೊಂದು ಕತೀನೋ ಎಪ್ಪ. ನಾವೂ ಹೊಲ್ಯಾರು. ಅದೊಂದು ಮಗಳೈತಿ. ನನ್ನ ತಮ್ಮಗ ಗಂಟ ಹಾಕಿದ್ದೆ. ಮೂವರು ಕೂಲಿ ನಾಲಿ ಮಾಡಿಕೊಂಡ ಜೀವನ ಮಾಡತೀವ್ರಿ. ಮಗಳ ಚಂದ ಅದಾಳ ನೋಡ್ರಿ, ಊರ ಹದ್ದಗೊಳ ಕಣ್ಣೆಲ್ಲಾ ಅಕೀ ಮ್ಯಾಲ ಬಿದ್ದುವರಿ, ಮದಿವ್ಯಾಗಿನ್ನೂ ತಿಂಗಳಾಗಿಲ್ಲ....

ಶಾಸ್ತ್ರಿ : ಮೊನ್ನಿ, ನಡೀತಲ್ಲಾ, ಆ ತುರುಕ ನಿನ್ನ ಮಗಳ ಮ್ಯಾಲ ಮಾಡಿದ್ದು, ಅದನ್ನ ಹೇಳು–

ರಾಮಕ್ಕ : ಹಾಂಗs ಬಸೀರ ಸಾಬರ ಕಣ್ಣು ಈಕೀ ಮ್ಯಾಲ್ಯ ಬಿತ್ತರಿ. ಹೇಳಿಕೇಳಿ ಮಂತ್ರೀ ಮಗ. ನಾವು ನೋಡಿದರ ಹೊಲ್ಯಾರು. ಕಾವಲಿಲ್ಲದ ಹೊಲ. ಒಂದು ದಿನ "ನಿನ್ನ ಮಗಳ್ನ ಕಳಸಬೇ" ಅಂತಂದರು. "ನಾವು ಸೂಳೇರಲ್ಲರಿ" ಅಂದೆ. "ಎಲಾ ಬೋಸಡೀ,ನಿನಗಿಷ್ಟ ಧೈರ್ಯ ಬಂತs?" ಅಂತಂದವರು ಮೈತುಂಬ ಒದ್ದರ್ರಿ ಇಕಾ ಇನ್ನೂ ಆ ಕಲಿ ಐತಿ ನೋಡ್ರಿದs.... ಇನ್ನs ಈ ನೋವs ಮಾಸಿಲ್ಲ, ಅಷ್ಟರಾಗ ಮೊನ್ನಿ ಈಕೀನ್ನ ಹೊತ್ತಕೊಂಡ ಹೋಗಿ ಈ ಪರಿ ಮಾಡಿ ಕಳಿಸ್ಯಾರ ನೋಡ್ರಿ.....

ಶಾಸ್ತ್ರಿ : ನನ್ನ ಕರುಳು ನೀರಾಗಿ ಹರಿತದ ಸಾಹೇಬರs....
*(ಥಟ್ಟನೆ ಕಣ್ಣೀರು ಒರೆಸಿಕೊಂಡು ಅದನ್ನ ಪತ್ರಕರ್ತರಿಗೆ ತೋರಿಸುತ್ತಾ)*

ಬೇಕಾದರೆ ಇದನ್ನೆಲ್ಲಾ ಫೋಟೋ ಹಿಡಿಸಿ ನಿಮ್ಮ ಪೇಪರದಾಗ ಹಾಕಿರಿ.

ಪತ್ರಕರ್ತ : ನೀವು ಪೊಲೀಸ್ ಕಪ್ಲೇಂಟ್ ಕೊಟ್ಟಿರಲ್ಲ, ಅದರಿಂದ ನಿಮಗೆ ತೊಂದರೆ ಆಗತದಂತ ಹೆದರಿಕಿ ಆಗಲಿಲ್ಲೇನು?

ರಾಮಕ್ಕ : ಹೆದರಿಕಿ ಯಾವಾಗಿಲ್ಲರಿ? ನಾವು ಹೋಲ್ಯಾರಾಗಿ ಹುಟ್ಟಿದಾಗಿನಿಂದ ಅದಿದ್ದದ್ದs ನಮ್ಮ ಪಾಡಿಗೆ ನಾವು ದುಡಕೊಂಡ ತಿಂದೇವಂದರ ಬ್ಯಾರೆ ಕಡೆ ಕೂಲಿ ಸಿಗಾಕಿಲ್ಲ, ಇವರ ಅಡಕೊತ್ತಿನಾಗ ಅಡಿಕ್ಯಾಗೇವರಿಯಪ್ಪ ಏನ ಹೇಳಲಿ...

ಶಾಸ್ತ್ರಿ : ಅಡಕೊತ್ತಂದರ ತಿಳಿತಲ್ಲ ಸಾಹೇಬರ? ಅಡಿಕೀ ಕತ್ತರಿಸ್ತೇವಲ್ಲ, ಅದು, ಒಂದು ಕಡೆ ಅ ಪಾಖಂಡಿ ಸರಕಾರ, ಇನ್ನೊಂದು ಕಡೆ ಆ ತುರುಕರುs ಇಬ್ಬರೂ ಸೇರಿ ಹಿಂದೂ ಧರ್ಮ ಹಿಂಗ ಕತ್ತರಿಸಾಕ ಹತ್ಯಾರ ನೋಡ್ರಿ *(ಅಭಿನಯಿಸಿ ತೋರಿಸುವನು).*

ಪತ್ರಕರ್ತ : ನೀವು ಪೊಲೀಸ್ ಕಪ್ಲೇಂಟ್ ಕೊಟ್ಟಿರಲ್ಲ, ಅದರಿಂದ ಏನಾದರೂ ಪ್ರಯೋಜನ ಆದೀತು ಅಂತ ನಿಮಗೆ ಭರವಸೆ ಇದೆಯೇ?

ರಾಮಕ್ಕ : ಭಾಳ್ವೇದಾಗs ಭರೋಸ ಇಲ್ಲಾ, ಇನ್ನ ಪೊಲೀಸರ ಮ್ಯಾಲ ಎಲ್ಲಿಂದ ಬರಬೇಕ್ರಿ? ಎಷ್ಟಂದರೂ ಅವರೂ ಸರಕಾರದ ಮಂದಿ. ಮಂತ್ರೀ ಮಾತ ಬಿಟ್ಟ ನಮ್ಮ ಮಾತ ಹೆಂಗ ಕೇಳ್ಯಾರು? ಸಿಟ್ಟು ಬಂತು. ತಡ್ಯಾಕಾಗಲಿಲ್ಲ, ಆದದ್ದಾಗಲಿ ಅಂತ ಬರಕೊಟ್ಟ ಬಂದಿವಿ.

ಪತ್ರಕರ್ತ : ಇದರೊಳಗೆ ನಿಮ್ಮ ಅಳಿಯನ ಪಾತ್ರವೇನು?

ರಾಮಕ್ಕ : ನಾ ಕಣ್ಣಾರೆ ನೋಡೇನಂತ ಸಾಕ್ಷಿ ಹೇಳಿ ಸೈ ಹಾಕ್ಯಾನ್ರಿ. ಅಷ್ಟಕ್ಕs ಅವನ್ನ ಹುಡಿಕ್ಯಾಡಿ ಕೊಲ್ಲಬೇಕಂತ ನಿಂತಾರ್ರಿ. ಹೆಂತೀನ ಕೆಡಿಸಿದ್ದಕ್ಕೂ ಅವ ಸುಮ್ಮನ್ನ ಇರಬೇಕಿತ್ತ ನೋಡ್ರಿ. ಅಂದರ ಸುಮ್ಮನಿರತಿದ್ದರು....

ಪತ್ರಕರ್ತ : ಮಂತ್ರೀ ಕಡೆಯವರು ನಿಮ್ಮ ಅಳಿಯನಿಗೆ ತೊಂದರೆ ಕೊಡ್ತಾ ಇದ್ದಾರಲ್ಲಾ, ನಿಮಗೂ ಏನಾದರೂ ಮಾಡಿದರೆ?....

ರಾಮಕ್ಕ : ಮಾನಾ ತಗದರು, ಇನ್ನ ಬಾಳಂದರ ಪ್ರಾಣಾ ತಗೀತಾರ ಅಷ್ಟ.

ಶಾಸ್ತ್ರಿ : ಈಗ ಕರಿನಿಂಗ ಎಲ್ಲಿದ್ದಾನ?

ರಾಮಕ್ಕ : ನನಗ್ಗೊತ್ತಿಲ್ಲರಿ.

ಶಾಸ್ತ್ರಿ : ಅವನ್ನ ಮುಗಿಸಬೇಕಂತ ತುರುಕರೆಲ್ಲಾ ಹುಡಿಕಾಡ್ಯಾಕ ಹತ್ಯಾರ. ಈ ಹೊತ್ತ ಅವನ ಕೂದಲು ಕೊಂಕಿದರೂ ನಾವ್ಯಾರೂ ಸುಮ್ಮನಿರೋ ಪೈಕಿ ಅಲ್ಲ ಮತ್ತ. ಅವನ ಬಚಾವ ಮಾಡಬೇಕಂತs ನಾವು ಬಂದೀವಿ; ತಿಳೀತ? ಎಲ್ಲಿದ್ದಾನ?

ರಾಮಕ್ಕ : ನನಗ್ಗೊತ್ತಿಲ್ಲರಿ. ಅವ ಮನೀಗಿ ಬಂದs ಇಲ್ಲ.

ಶಾಸ್ತ್ರಿ : ಏ ಹುಡಕರ್ಯೋ...
*(ಶಾಸ್ತ್ರಿ ಜೊತೆಗಿದ್ದ ಹುಡುಗರು ಅಡಿಗೆ ಮನೆಯಲ್ಲಿ ಇಣಿಕಿ ಹುಡುಕುವರು)*

ಕರಿನಿಂಗ ನೀ ಹೇಳಬೇಕು ರಾಮೀ, ಪ್ರಾಣ ಹೋದರೂ ಸಾಕ್ಷಿ ಬದಲೀ ಮಾಡಬ್ಯಾಡಂತ ಹೇಳು.
*(ಅಷ್ಟರಲ್ಲಿ ಹುಡುಗರು, ಹಿತ್ತಲ ಬಾಗಿಲ ಕಡೆ ನುಗ್ಗಿದಾಗ ರಾಮಕ್ಕ ಓಡಿಹೋಗಿ ಅಡ್ಡಗಟ್ಟುವಳು.)*

ರಾಮಕ್ಕ : ಹೇಳ್ಲಿಲ್ಲರಿ ಅವ ಇಲ್ಲಂತ? ನಮಗ ಮೊದಲs ಅಂಜಿಕೆ ಬರತೈತಿ.
*(ಶಾಸ್ತ್ರಿ ಮತ್ತು ಹುಡುಗರು ಪರಸ್ಪರ ಮುಖ ನೋಡಿಕೊಳ್ಳುವರು. ತಕ್ಷಣ ನಾಟಕೀಯವಾಗಿ ಶಾಸ್ತ್ರಿ ಮುಖ ಚರ್ಯೆ ಬದಲಿಸುವನು)*

ಶಾಸ್ತ್ರಿ : ಹೊರಟೆ ರಾಮೀ ಹೊರಟೆ

ರಾಮಕ್ಕ : ಎಲ್ಲಿಗಿರಿ?

ಶಾಸ್ತ್ರಿ : ಧರ್ಮಯುದ್ಧಕ್ಕೆ. ತುರುಕರು ರುಂಡಗಳನ್ನು ಚೆಂಡಾಡಲಿಕ್ಕೆ, ದೇಶ ದ್ರೋಹಿಗಳನ್ನ ಜೀವಂತ ಸುಡೋದಕ್ಕೆ, ಬೋಲೋ ಭಾರತ ಮಾತಾಕೀ

ಹುಡುಗರು : ಜೈ
*(ಎಲ್ಲರೂ ಹೋಗುವರು. ರಾಮಕ್ಕ ಹಿತ್ತಲಲ್ಲಿದ ಕರಿನಿಂಗನನ್ನು ಕರೆಯಲು ಹೋಗುತ್ತಿರುವಾಗ ಮುಂಬಾಗಿಲಲ್ಲಿ ಶೆಟ್ಟಿ ಹಾಜರಾಗುವನು.)*

ಶೆಟ್ಟಿ : ಇದ್ದಿಯಾ ರಾಮವ್ವಾ? ಯಾರಿಲ್ಲೇನು?
*(ಒಳಬಂದು ಬಾಗಿಲಿಕ್ಕಿಕೊಳ್ಳುವನು)*

ಗುರುತು ಸಿಗಲಿಲ್ಲೇನು? ನಾನು ಪಂಚಾಯ್ತಿ ಚೇರಮನ್ ಕೋದಂಡ ರಾಮಶೆಟ್ಟಿ, ಗುರುತು ಸಿಕ್ಕಿತೇನು?

ರಾಮಕ್ಕ : ಬಾಗಿಲಾ ಯಾಕ ಹಾಕಿದಿರಿ?

ಶೆಟ್ಟಿ : ಸುಮ್‌ಕಿರವಾ, ಊರಿಗೊರಽ ಹೊತ್ತಿ ಉರ್ಯಾಕ ಹತ್ತೇತಿ. ನಿಮ್ಮ ಮನೀಗಿ ನಾ ಬಂದಿದ್ದ ನೋಡಿದರ ಮಂದಿ ಏನಂದುಕೊಂಡಾರು? ಹಾ ಈಕೀನಽ ಅಲ್ಲ ಬಂಗಾರಿ? ಪೇಪರದಾಗ ಸುದ್ದಿ ಓದಿದೆ... ಛೇ ಛೇ ಛೇ.... ನನಗೆ ಭಾಳ ದುಃಖ ಆಯ್ತು. ಆ ಕರಿನಿಂಗ್ಯಾ ಹಾಂಗ ಮಾಡಬಾರದಿತ್ತು.

ರಾಮಕ್ಕ : ಅವೇನ ಮಾಡಾನ್ರಿ?

ಶೆಟ್ಟಿ : ಅಲ್ಲೇನ ಮತ್ತ? ಮಾಡೋ ಕಾರಭಾರ ಮಾಡಿ ಅದನ್ನ ಬಷೀರ ಸಾಹೇಬರ ಮ್ಯಾಲ ಹಾಕತಾನಂದರ?...

ರಾಮಕ್ಕ : ಅಂದರ?

ಶೆಟ್ಟಿ : ಪೊಲೀಸ್ ಸ್ಟೇಶನಿಗೆ ಹೋಗಿದ್ದೆ. ಒಂದಽ, ಎರಡ? ಮೂರನಾಕ ತಕರಾರು ಅರ್ಜಿ ಬಂದಾವ, ನೀ ಬರಕೊಟ್ಟಿದ್ದ ಒಂದು, ಆ ಬಷೀರ ಸಾಹೇಬರು ಬರಕೊಟ್ಟಿದ್ದ ಒಂದು. ಅದಕ್ಕಽ ಹಣಗಲಾಗಿ ಮಂದೀನ ಕೇಳಿದೆ; ಎಲ್ಲಾರು ಬಷೀರ ಸಾಹೇಬರು ಬರಕೊಟ್ಟಿದ್ದಽ ಖರೆ ಅಂತಾರ.

ರಾಮಕ್ಕ : ಅವೇನಂತ ಬರಕೊಟ್ಟಾನ?

ಶೆಟ್ಟಿ : ಅದಽ. ನಿನ್ನ ಮಗಳ ಮ್ಯಾಲ ಆ ಕರಿನಿಂಗ್ಯಾ ಹಾರಿ ಕೆಡಿಸಾಕ ಹತ್ತಿದ್ದನಂತ. ಬಷೀರ ಸಾಹೇಬರು ಬಂದು ಬಿಡಿಸಿಕೊಂಡರಂತಲ್ಲ? ಇನ್ನೇನ ಮಾತಾಡ್ಯಾರೇನೋ ಅಂತಂಜಿ ಕರಿನಿಂಗ್ಯಾ ತಾನಽ ಮೊದಲು ನಿನ್ನ ಹಂತ್ಯಾಕ ಬಂದ ಹೇಳಿದ, ಬಷೀರ ಸಾಹೇಬರು ಅತ್ಯಾಚಾರ ಮಾಡ್ಯಾರಂತ. ನೀ ಅವನ ಮಾತ ನಂಬಿ ತಕರಾರ ಬರಕೊಟ್ಟಿ, ಅವ ಸಾಕ್ಷಿ ಹೇಳಿದಾ....

ರಾಮಕ್ಕ : ಶೆಟ್ಟರ, ಕರಿನಿಂಗ ಆಕೀ ಗಂಡ. ಅವನಽ ಬಂಗಾರೀನ್ಯಾಕ ಕೆಡಸ್ತಾನ?

ಶೆಟ್ಟಿ : ಮದಿವ್ಯಾಗೇತೇನ? ಅರೇರೇ ನನಗ ಗೊತ್ತಽ ಇಲ್ಲ. ಇರಲಿ, ಅಲ್ಲವಾ, ಹೋಗೀ ಹೋಗೀ ಮಂತ್ರೀ ಮಗ ಬಷೀರನ ಮ್ಯಾಲ ಹೊಲೇರ ತಕರಾರ ಕೊಡೋದಂದರೇನು? ಹೋಗಲಿ ನನ್ನ ಮಾತ ಕೇಳು, ನಾ ಅದನ್ನೆಲ್ಲಾ ಬರಕೊಂಡ ಬಂದೀನಿ, ಅದಕ್ಕ ಬಟ್ಟ ಒತ್ತು, *(ಜೇಬಿನಿಂದ ಕಾಗದ ತೆಗೆಯುತ್ತಾ)* ಏನೋ, ರಾಮವ್ವ, ನಮ್ಮೂರಾಕಿ, ನಮ್ಮ ಮಾನಾ ಉಳಿಸ್ತಾಳಂತ ಇಲ್ಲಿಗೆ ಬಂದೆ. ಬಾ, ಸಹಿ ಹಾಕ ಬಾ.

ರಾಮಕ್ಕ : ಹಾಕೋದಿಲ್ಲರಿ,

ಶೆಟ್ಟಿ : ಯಾಕ?

ರಾಮಕ್ಕ : ಯಾಕಂದರ ಅದು ಸುಳ್ಳು ಐತಿ.

ಶೆಟ್ಟಿ : ಸುಳ್ಳೋ, ಖರೇನೋ, ಜೀವಾ ಉಳಿಸಿಕೊಳ್ಳೋದ ನೋಡಿಕೊ! ಖರೇ ಹೇಳಿ ಜೈಲಿಗೆ ಹೋಗತೀಯೇನು? ಬಾ ಬಾ, ಹೆಬ್ಬೆಟ್ಟ ಒತ್ತ ಬಾ, ಮುಂದಿಂದ ನಾ ನೋಡಕೋತೀನಿ,

ರಾಮಕ್ಕ : ಅದಾಗೋದಿಲ್ಲರಿ.

ಶೆಟ್ಟಿ : ಹಾಂಗಿದ್ದರ ಪೊಲೀಸರು ಬರತಾರ.

ರಾಮಕ್ಕ : ಬರಲಿ, ನಾ ಖರೇನs ಹೇಳತೀನಿ.

ಶೆಟ್ಟಿ : ಇದರರ್ಥ ಬರೀ ಮಗನ್ನಲ್ಲ, ಮಂತ್ರೀನ್ನೂ ಎದರ ಹಾಕ್ಕೊಂಡಾಗ.

ರಾಮಕ್ಕ : ಮಂತ್ರೀ ಆಗಲಿ, ಮಂತ್ರೀ ಮಗ ಆಗಿರಲಿ, ಹಾಂಗಂತ ನಮ್ಮಂಥವರ್ನ ಕೆಡಿಸೋದೇನ್ರಿ?

ಶೆಟ್ಟಿ : ಅವರು ಕೆಡಿಸಿಲ್ಲ, ಒಂದು ವೇಳೆ ಕೆಡಿಸಿದರು ಅನ್ನೋಣ. ಯಾರನ್ನ ಕೆಡಿಸಿದರು? ಹೊಲತೀನ್ನ! ಹೊಲತೇರ ಯಾರಾದರೂ ಕೆಡಿಸ್ತಾರ? ರೊಕ್ಕ ಕೊಡತಾರ ಮಲಗತಾರ, ಅಷ್ಟೆ. ಯಾರಾದರೂ ಉಚ ಜಾತಿಯವರ ಮ್ಯಾಲ ಕೈ ಮಾಡಿದರ ಅದು ಕೆಡಿಸಿಧಾಂಗ. ಇದಕ್ಕ ಕೆಡಿಸಿದರು ಅಂತ ಹೆಂಗಂತೀಯವ್ವಾ? ರೊಕ್ಕ ಬೇಕೇನು? ನೂರ, ಐನೂರ್ರೂಪಾಯಿ ಬೇಕ? ಸಾವಿರ ಬೇಕ? ಇಷ್ಟ ರೊಕ್ಕಾ ನೀ ಸಾಯೋತನಕಾ ಕೂಲೀ ಮಾಡಿದರೂ ಗಳಿಸಾಕ ಆಗಾಣಿಲ್ಲ ಮತ್ತ.

ರಾಮಕ್ಕ : ನಮ್ಮ ಮಾನ ಕೊಳ್ಳಾಕ ಬಂದೀರೇನ್ರಿ?

ಶೆಟ್ಟಿ : ಎರಡ ಸಾವಿರ...

ರಾಮಕ್ಕ : ಯಾರ ಬಂದರೂ ನಮ್ಮಿಂದ ಏನಾರ ಕೇಳಾಕs ಬರತಾರ, ನಮಗೇ-ನಾಗೇತಂತ ನೋಡಾಕ ನಿಮಗ್ಯಾರಿಗೂ ಕಣ್ಣs ಇಲ್ಲ.

ಶೆಟ್ಟಿ : ಕೊಡಾಕ ಬಂದೀನಲ್ಲವ್ವಾ. ಒಮ್ಮಿ ಓದತೀನಿ ಕೇಳು, ಆ ಮ್ಯಾಲೆ ಹೆಬ್ಬೆಟ್ಟ ಒತ್ತು....

ರಾಮಕ್ಕ : ಅದರಾಗೇನೈತಿ ನನಗ್ಗೊತ್ತರಿ.

ಶೆಟ್ಟಿ : ಕಡೀ ಮಾತು, ಎರಡೂವರಿ ಸಾವಿರ. ನನಗಿದರಾಗೇನೂ ಕಮೀಶನ್ ಬ್ಯಾಡ, ಮತ್ತೇನು? ನೀ ಸೈ ಹಾಕಿದರ ಇಡೀ ಊರಿಗೆ ಉಪಕಾರ ಆಗತೈತಿ, ಬಾ, ತಗೊ.
*(ನೋಟಿನ ಕಂತೆ ತೆಗೆಯುವನು)*

ರಾಮಕ್ಕ : ನನಗೆ ಬ್ಯಾಡ್ರಿ.

ಶೆಟ್ಟಿ : ಇನ್ನೇನ ಪುಕ್ಕಟ ಹಾಕ್ತಿ?

ರಾಮಕ್ಕ : ದೊಡ್ಡ ಮನಿಶಾರಿದ್ದೀರಿ, ಎದ್ದ ಹೋಗರಿ, ಏನೋ ಹಿಂಗಾಯ್ತಲ್ಲಾ ಅಂತ ಊರ ದೊಡ್ಡಮನಿಶಾ ಸಮಾಧಾನ ಮಾಡಾಕ ಬಂದಾನಂದರ ಸೈ ಹಾಕಿಸಿ ಕೊಳ್ಳಾಕ ಬಂದಾನ, ಎದ್ದೇಳ್ರಿ....

ಶೆಟ್ಟಿ : ಹೋಗತೀನವಾ, ಇಲ್ಲೇ ಇರಾಕ ಬಂದಿಲ್ಲ. ತುಸ ವಿಚಾರ ಮಾಡು.....

*(ಬಾಗಿಲು ಬಡಿದ ಸದ್ದು, ಹೊರಗಡೆಯಿಂದ 'ಪೊಲೀಸ್, ಪೊಲೀಸ್ ಇನ್ಸ್‌ಪೆಕ್ಟರ ಬಂದಾರ, ಬಾಗಿಲಾ ತಗೀರಿ' ಎಂದು ಕೇಳಿಸುವುದು. ಶೆಟ್ಟಿ ಗಾಬರಿಯಾಗುವನು. ರಾಮಕ್ಕ ಬಾಗಿಲು ತೆಗೆಯಲು ಹೋಗಿ ಮಗಳ ಕಡೆ ನೋಡಿ ಬಂಗಾರೀ ನೀ– ಒಳಗನಡಿ' ಎನ್ನುತ್ತಾಳೆ. ಬಾಗಿಲ ಬಡಿತ ಜಾಸ್ತಿಯಾಗುತ್ತಲೆ ಇದೆ. ಹೋಗಿ ತೆಗೆಯುವಷ್ಟರಲ್ಲಿ ಶೆಟ್ಟಿ ಕೈಯಲ್ಲಿಯ ಒಂದು ನೋಟನ್ನು ಅಲ್ಲೊಂದು ಮಾಡದಲ್ಲಿರಿಸಿ ತಾನೂ ಬಂಗಾರಿ ಹೊಕ್ಕ ಅಡಿಗೆ ಮನೆಯಲ್ಲೇ ಮಾಯವಾಗಿ ಬಾಗಿಲು ಮುಂದೆ ಮಾಡಿಕೊಳ್ಳುವನು. ಅಷ್ಟರಲ್ಲಿ ಬಾಗಿಲು ತೆಗೆದಾಗಿದೆ. ಪೊಲೀಸ್ ಇನ್ಸ್‌ಪೆಕ್ಟರ್ ಇಬ್ಬರು ಪೇದೆಗಳೊಂದಿಗೆ ಬರವನು. ಸುತ್ತ ಕಣ್ಣಾಡಿಸುವನು.)*

ಇನ್ಸ್‌ಪೆಕ್ಟರ್ : ರಾಮವ್ವ ಅಂದರ ನೀನs ಏನು?

ರಾಮಕ್ಕ : ಹೌಂದರಿ.

*(ಮಾಡದಲ್ಲಿ ಶೆಟ್ಟಿ ಇಟ್ಟಿದ್ದ ನೋಟು ಕಣ್ಣಿಗೆ ಬೀಳುತ್ತದೆ.)*

ಇನ್ಸ್‌ಪೆಕ್ಟರ್ : ಇಡಾಕ ಜಾಗಾ ಸಾಲದಷ್ಟ ರೊಕ್ಕ ಐತಿ?

ರಾಮಕ್ಕ : ಅದು ಆ ಶೆಟ್ಟೀದರಿ.

ಇನ್ಸ್‌ಪೆಕ್ಟರ್ : ಕೇಳಿದ್ದಕ್ಕಷ್ಟs ಉತ್ತರಾ ಕೊಡು, ಹೆಚ್ಚು ಕಮ್ಮಿ ಮಾತಾಡಿದರ ಒದೀತೀನಿ. ನಿನ್ನ ಮಗಳೆಲ್ಲಿ?

ರಾಮಕ್ಕ : ಒಳಗದಾಳ.

*(ಇನ್ಸ್‌ಪೆಕ್ಟರ್ ಸನ್ನೆ ಮಾಡುವನು. ಪೇದೆಗಳಿಬ್ಬರೂ ಅಡಿಗೆ ಮನೆಗೆ ನುಗ್ಗುವರು. ಇನ್ಸ್‌ಪೆಕ್ಟರ್ ಮನೆ ತುಂಬ ಕಣ್ಣಾಡಿಸುತ್ತಿರುವಂತೆ ಪೇದೆಗಳಿಬ್ಬರೂ ಬಂಗಾರಿ ಮತ್ತು ಶೆಟ್ಟಿಯನ್ನು ಹಿಡಿದು ತರುವರು. ಶೆಟ್ಟಿ ತನ್ನ ಕೋಟು ಸರಿಪಡಿಸುತ್ತಿರುವನು. ಇನ್ಸ್‌ಪೆಕ್ಟರ್ ಮನೆ ತುಂಬ ಕಣ್ಣಾಡಿಸುತ್ತಿರುವಂತೆ ಪೇದೆಗಳಿಬ್ಬರೂ ಬಂಗಾರಿ ಮತ್ತು ಶೆಟ್ಟಿಯನ್ನು ಹಿಡಿದು ತರುವರು. ಶೆಟ್ಟಿ ತನ್ನ ಕೋಟು ಸರಿಪಡಿಸುತ್ತಿರುವನು. ಇನ್‌ಪೆಕ್ಟರ್ ಆಶ್ಚರ್ಯ ಅಭಿನಯಿಸುವನು.)*

ಇನ್ಸ್‌ಪೆಕ್ಟರ್ : ಲೈಸನ್ಸ್ ಇಲ್ಲದs ಸೂಳಿಗಾರಿಕೀ ಮಾಡೋದು ಅಪರಾಧಂತ ಗೊತ್ತಿಲ್ಲಾ?

ರಾಮಕ್ಕ : ಸೂಳಿಗೀಳಿ ಅಂದರ ನಾ ಸುಮ್ಕಿರಾಕಿಲ್ಲರಿ.

ಇನ್ಸ್‌ಪೆಕ್ಟರ್ : *(ಸಿಟ್ಟನ್ನು ಸಂಯಮಿಸಿಕೊಳ್ಳುತ್ತ)* ಈ ನೋಟ ಎಲ್ಲಿಂದ ಬಂತು?

ಶೆಟ್ಟಿ : ಅದು ನಂದರಿ.

ಇನ್ಸ್‌ಪೆಕ್ಟರ್ : ನೀ ಯಾಕ ಕೊಟ್ಟಿ?

ಶೆಟ್ಟಿ : ಏನೋ ಹೆ ಹೆ..

*(ರಾಮಕ್ಕನಿಗೆ ಆಘಾತವಾಗುತ್ತದೆ)*

ಇನ್ಸ್‌ಪೆಕ್ಟರ್ : ಇದು ಮೊದಲ್ನೆ ಸಲ ಏನು?

ಶೆಟ್ಟಿ : ನಾ ಇಲ್ಲಿ ಖಾಯಂ ಗಿರಾಕಿ.... ಈಕಿ ವಯಸ್ಸಿಗಿ ಬಂದಾಗಿಂದ...

ರಾಮಕ್ಕ : *(ಕೋಪತಾಪಗಳನ್ನು ತಡೆಯಲಾರದೆ)* ಎಲಾ ನನ್ನ ಹಾಟ್ಯಾ ಶೆಟ್ಟಿ, ಇವರೆಲ್ಲಾ ಸಾಮೀಲ ಮಾಡಿಕೊಂಡ ಬಂದಿದ್ದೆನೋ..... *(ಇನ್ಸ್‌ಪೆಕ್ಟರ್ ತಕ್ಷಣ ಅವಳ ಕೆನ್ನೆಗೊಂದು ಬಾರಿಸುವನು. ಏಟು ತಡೆಯಲಾರದೆ ರಾಮಕ್ಕ ಬೀಳುವಳು. ಬಂಗಾರಿ 'ಎವ್ವಾ?' ಎಂದು ಒದರಿ ತಾಯಿಯ ಬಳಿ ಓಡುವಳು. ಇನ್‌ಪೆಕ್ಟರ್ ಅವಳನ್ನು ಸರಿಸಿ ಏಳಲಿದ್ದ ರಾಮಕ್ಕನ ಮೇಲೆ ಉಗುಳು ಸಿಡಿಸುತ್ತ ಒದರುವನು.)*

ಇನ್ಸ್‌ಪೆಕ್ಟರ್ : ಹುಚ್ಚ ಭೋಸಡೆ, ಸೂಳಿ ಅಂದರ ಸಿಟ್ಟ ಬರತೈತಿ. ಹೊರಗ ಬಾಗಲಾ ಹಾಕೀದಿ. ಒಳಗ ಬಂದರ ಅಡಗೀ ಮನ್ಯಾಗ ಶೆಟ್ಟೀ ಜೋಡಿ ಮಗಳ್ನ ಮಲಗ್ಸೀದಿ. ಮತ್ತ ಇದಕ್ಕ ಸೂಳಿತನ ಅಲ್ಲಂತಿ? ಹಲಕಟ್ಟ ರಂಡೇ *(ಶೆಟ್ಟಿಗೆ)* ಸಹಿ ಮಾಡಿದಳೇನ?

ಶೆಟ್ಟಿ : ಇಲ್ಲರಿ.

ಇನ್ಸ್‌ಪೆಕ್ಟರ್ : ಕಾಗದಾ ತಾತಾ ಇಲ್ಲಿ. *(ಶೆಟ್ಟಿ ತನ್ನ ಜೇಬಿನಿಂದ ಕಾಗದ ಕೊಡುವನು)* ಇಕಾ ಇಲ್ಲಿ ನನ್ನ ಪೆನ್ ಐತಿ, ತಗೊ. ಬಟ್ಟ ಒತ್ತು.

ರಾಮಕ್ಕ : *(ಕಿರಚಿ)* ನಾ ಒತ್ತೂದಿಲ್ಲ.
ಇನ್ಸ್‌ಪೆಕ್ಟರ್ : ಈಕೀನ ಎಳಕೊಂಡ ಸ್ಟೇಷನ್ನಿಗೆ ನಡೀಯೋರ್ ಸೂಳಿತನದ ಕೇಸ್
ಹಾಕರಿ. *(ರಾಮಕ್ಕ ಸಂಕಟದಿಂದ ಕಿತ್ತುಕೊಂಡೆದ್ದು 'ಅಯ್ಯೋ ಎಪ್ಪಾ ಬರ್ಯೋ.... ಊರಾಗ ಯಾರಾದರೂ ದರಮವಂತರಿದ್ದರ ಕಾಪಾಡರ್ಯೋ.....' ಎಂದು ಕಿರುಚುತ್ತಾ ಓಡುವಳು. ಪೊಲೀಸರು ಬಾಗಿಲಿಗೆ ಅಡ್ಡಗಟ್ಟಿದ್ದರಿಂದ ತಪ್ಪಿಸಿಕೊಂಡು ಮನೆ ತುಂಬ ಮೇಲಿನ ಮಾತನ್ನೇ ಮತ್ತೆ ಮತ್ತೆ ಕಿರುಚುತ್ತ ಬೇಟೆಯ ಬೆನ್ನು ಹತ್ತಿದಂತೆ ಹಿಂದೆ ಹಿಂದೆ ಬರುತ್ತಿದ್ದ ಪೊಲೀಸರನ್ನು ತಪ್ಪಿಸಕೊಂಡು ಮತ್ತೆ ಕಿರುಚುವಳು. ಅವಳೊಂದಿಗೆ ಬಂಗಾರಿಯೂ 'ಎವ್ವಾs' ಎಂದು ಕಿರುಚುತ್ತಿದ್ದಾಳೆ. ಆ ಹೊತ್ತಿಗೆ ಸರಿಯಾಗಿ ಮಂತ್ರಿ ಬಾಗಿಲಲ್ಲಿ ನಿಂತಿದ್ದಾನೆ. ಎಲ್ಲರೂ ಅವನನ್ನು ನೋಡಿ ಸ್ತಬ್ದರಾಗುವರು. ರಾಮಕ್ಕ ಹೆಣ್ಣು ನಾಯಿಯಂತೆ ಅಳುತ್ತಿದ್ದಾಳೆ.)*

ಮಂತ್ರಿ : ಏನ್ರೆಪಾ ಇದೆಲ್ಲಾ? ಏನು ಮಾಡ್ತಾ ಇದ್ದೀರಿ? ಬಿಡಿ ಅವಳನ್ನ.

ಶೆಟ್ಟಿ : *(ರಾಮಕ್ಕನಿಗೆ)* ನೋಡು ಸ್ವಥಾ ಸನ್ಮಾನ್ಯ ಮಂತ್ರಿಸಾಹೇಬರs ನಿನ್ನ ಮನೀಗಿ ಬಂದಾರ.

ಮಂತ್ರಿ : ಇವಳು ನಮ್ಮ ರಾಮಕ್ಕನಲ್ಲವೆ?

ಶೆಟ್ಟಿ : ಇವಳೆ.

ಮಂತ್ರಿ : ಏನಂತೆ?

ಇನ್ಸ್‌ಪೆಕ್ಟರ್ : ಸಹಿ ಮಾಡೋದಿಲ್ಲಂತ.

ಮಂತ್ರಿ : ಅಲ್ಲಿಗೆ ಮುಗೀತಲ್ಲ. ತನ್ನ ಮನಸ್ಸಿಗೆ ವಿರುದ್ಧವಾಗಿ ಸಹಿ ಹಾಕಲಿಕ್ಕೆ ಅವಳಿಗಿಷ್ಟವಿಲ್ಲ ಅಷ್ಟೆ. ಅದಕ್ಕೆ ಅವಳ್ನ ಈ ಥರ ಬೇಟೆ ಆಡೋದಾ ನೀವೆಲ್ಲ? ಏನ್ರಿ ಇದೆಲ್ಲಾ? ಬೇಲಿ ಎದ್ದು ಹೊಲಾ ಮೇಧಂಗೆ. ಪ್ರಜೆಗಳನ್ನ ಕಾಪಾಡಬೇಕಾದ ನೀವೇ ಈ ರೀತಿ ಅವಳಿಗೆ ಹೆರಾಸ್ ಮಾಡಿದರೆ?

ರಾಮಕ್ಕ : *(ತುಂಬಿಕೊಂಡ ದುಃಖ ಗಾಬರಿಗಳನ್ನು ಹೊರಹಾಕುವಂತೆ)* ಹೇಳ್ರಿಯಪ್ಪ, ನೀವs ಹೇಳ್ರಿ. ಈ ಶೆಟ್ಟಿ ಸೈ ಹಾಕು ರೊಕ್ಕ ಕೊಡ್ತೇನಂತ ಬಂದ. ನಾ ಆಗಾಣೆಲ್ಲ ಅನ್ನೂದರಾಗs ಪೊಲೀಸರು ಬಂದರು. ಶೆಟ್ಟಿ ಹೋಗಿ ಅಡಿಗಿ ಮನ್ಯಾಗ ಅಡಗಿದ : ಆಹಾ ಸೂಳಿತನ ಮಾಡ್ತಿ, ಸ್ಟೇಷನ್ನಿಗಿ ನಡಿ ಅಂತಾರ. ಇದ್ಯಾವ ಸೀಮಿ ನ್ಯಾಯ ನೀವ ಹೇಳ್ರಿ.

ಮಂತ್ರಿ : ಛೇ ರಾಮಕ್ಕ ಸೂಳೇಥರ ಕಂಡಳೇನ್ರಿ ನಿಮಗೆ? ಏನ್ರಿ ಇನ್ಸ್‌ಪೆಕ್ಟರ್ ಇಷ್ಟ ವರ್ಷ ಸರ್ವೀಸ್ ಮಾಡಿದೀರಿ. ಸೂಳೆ ಯಾರು, ಗರತಿ ಯಾರು ಅಂತ ತಿಳಿಯೋಲ್ಲೇನ್ರಿ? ಹೊರಗೆ ನಡ್ರಿ..ಛೇ.

*(ಶೆಟ್ಟಿ, ಪೊಲೀಸ್ ಫೊಜದಾರರು ಸಹಿ ಹಾಕಬೇಕಾದ ಕಾಗದವನ್ನು ಕೊಟ್ಟು ಹೊರಗೆ ಹೋಗುವರು.)*

ನನಗೆ ನಿಜ ಬೇಕು ತಾಯಿ, ನನ್ನ ಮಗನ ಮೇಲೆ ನನಗೆ ನಂಬಿಕೆಯಿಲ್ಲ. ಅಥವಾ ನನ್ನ ಮಗನಾದ್ದರಿಂದ ಆತ ಹೇಳುವ ಸತ್ಯದಲ್ಲಿ ನನಗೆ ಅನುಮಾನ ಬರುತ್ತಿರಬಹುದು. ಒಂದು ಸಲ ನಿನ್ನನ್ನ ಕೇಳಿ ಹೋಗೋಣಂತ ಬಂದೆ. ಹೇಳು ರಾಮಕ್ಕ, ನೀನು ಪೊಲೀಸ್ ಕಂಪ್ಲೇಂಟ್ ಕೊಟ್ಟದ್ದು ನಿಜ ಏನಮ್ಮಾ?

ರಾಮಕ್ಕ : ಹೌಂದರಿ.

ಮಂತ್ರಿ : ನನ್ನ ಮಗ ನಿನ್ನ ಮಗಳ ಮೇಲೆ ಅತ್ಯಾಚಾರ ಮಾಡಿದ್ದು ನಿಜ ಹಾಗಿದ್ದರೆ?

ರಾಮಕ್ಕ : ಹೌಂದರಿ.

ಮಂತ್ರಿ : ಕರೆಕ್ಟ್! ನಾನು ಮಾಡ್ತಾ ಇರೋದು ಸರಿ ಅಂತ ನನಗೆ ಖಾತ್ರಿಯಾಯ್ತು. ಇಂಥ ಸಂದರ್ಭದಲ್ಲೂ ನೀನು ನಿಜ ಹೇಳುತ್ತಿರುವುದು ಅಭಿನಂದನೀಯ. ತಾಯಿ, ಈ ದಿನ ನೀನು ನನಗೊಂದು ಪಾಠ ಕಲಿಸಿದೆ. ನಾನು ಪ್ರಾಮಾಣಿಕನೇ, ನಿನ್ನ ಹಾಗೆ. ಗಾಂಧೀಜಿ ಜೊತೆ ಇದ್ದೆ, ರಾಮಕ್ಕಾ ನನ್ನ ಮುಖ ನೋಡು. (ರಾಮಕ್ಕ ನೋಡುವಳು.) ನಿನ್ನ ಕಣ್ಣಿನಲ್ಲಿ ಒಬ್ಬ ತಾಯಿಯನ್ನು ಕಂಡೆ. ನೀನು ಬಂಗಾರಿಯ ತಾಯಿ. ಮಗಳಿಗಾದ ಅನ್ಯಾಯ ಕಂಡು ನಿನ್ನ ಕಣ್ಣಿನಲ್ಲಿ ಉರಿಯುತ್ತಿರುವ ಬೆಂಕಿಯನ್ನು ಕಂಡೆ! ಆದರೆ ನಿನ್ನ ಕಣ್ಣಿನಲ್ಲಿ ಬರೀ ಬೆಂಕಿಯಲ್ಲ ತಾಯೀ, ಅದನ್ನು ಆರಿಸುವ ಕಣ್ಣೀರೂ, ಇದೆ. ಅದನ್ನೂ ಕಂಡೆ.

ಸುದ್ದಿ ಕೇಳಿ ಆಘಾತವಾಯ್ತು. ಇಂಥ ಒಬ್ಬ ನೀಚ ಮಗನಿದ್ದಾನಲ್ಲಾ ಎಂದು ಪಶ್ಚಾತ್ತಾಪ ಪಟ್ಟೆ. ಊರಿನ ನಾರಿಯರಿಗೆ ಸಹೋದರನಾಗಬೇಕಿದ್ದವನು ಚಂಡಾಲನಾದರೆ ಇನ್ನು ಆ ಊರನ್ನು ದೇವರೇ ಕಾಪಾಡಬೇಕು. ಇಂಥವನಿಗೆ ನಾನು ತಂದೆ! ಭೂಮಿಗೆ ಭಾರವಾದ ಮಗ ಇರಲೇಕೂಡದೆಂದು ಬಂದೂಕು ಲೋಡುಮಾಡಿಕೊಂಡೇ ಇಲ್ಲಿಗೆ ಬಂದೆ. ಅವನಿನ್ನೂ ಹಾಸಿಗೆಯಲ್ಲೇ ಇದ್ದ. ನನ್ನ ರೌದ್ರಾವತಾರ ನೋಡಿ ಕಿಟಾರನೆ ಕಿರುಚಿದ. ಒಂದು ಕ್ಷಣ ಯಾಕೋ ಏನೋ, ಬೆಳಕು ಮಿಂಚಿದಂತಾಯ್ತು. ಕಣ್ಣೆದರು ನೋಡಿದರೆ ಅವನ ತಾಯಿ, ಯಾವಳು ಆ ಚಂಡಾಲನನ್ನು ನವಮಾಸ ಗರ್ಭದಲ್ಲಿ ಹೊತ್ತು ಹೆತ್ತಳೋ ಆ ತಾಯಿ, ಮಗನನ್ನು ಹಿಂದೆ ನಿಲ್ಲಿಸಿಕೊಂಡು "ಮೊದಲು ನನ್ನನ್ನು ಕೊಲ್ಲಿ" ಎಂದು ಅಳುತ್ತಿದ್ದಳು! ನಿನ್ನ ಮುಖ ನೋಡಿದಾಗ ನನಗೆ ಆ ಮುಖ
ನೆನಪಾಯಿತು. *(ಕಣ್ಣೀರು ಒರೆಸಿಕೊಳ್ಳುವನು.)*

ನೀನು ಸತ್ಯ ಹೇಳಿ ನಿನ್ನ ಕರ್ತವ್ಯ ಪಾಲಿಸಿದೆ. ಈಗ ಬಾಕಿ ಉಳಿದದ್ದು ನನ್ನ ಕರ್ತವ್ಯ ಮಾತ್ರ. ಬರ್ತೀನಿ ತಾಯಿ. ಬರ್ತೀನಮ್ಮ ಬಂಗಾರಿ. ಆದರೆ ಒಂದು ಮಾತು. ಅಂಥಾ ಚಂಡಾಲ ಮಗನ ತಂದೆ ತಾಯಿಗಳನ್ನ ದಯವಿಟ್ಟು
ಕ್ಷಮಿಸಮ್ಮಾ. *(ಕೈ ಮುಗಿಯುವನು)* ಆಯ್ತು ಕ್ಷಮೆ ಸಿಗಲಿಲ್ಲವೆಂದಾಯ್ತು. *(ಅವರು ಸುಮ್ಮನಿರುವರು.)* *(ಹೊರಡುವನು.)*

ರಾಮಕ್ಕ : ಸಾಹೇಬರS

ಮಂತ್ರಿ : ಕ್ಷಮಿಸಿದ್ದೀಯಾ ಅಮ್ಮಾ? ನನಗೆ ಗೊತ್ತು ಒಬ್ಬ ತಾಯಿಯನ್ನು ಇನ್ನೊಬ್ಬ ತಾಯಿ ಮಾತ್ರ ಗುರುತಿಸಬಲ್ಲಳು. ಈಗ ನಿನ್ನ ಮನಸ್ಸಿನಲ್ಲಿ ಆ ನನ್ನ ಹೆಂಡತಿ ತಾನೇ ಇರೋದು?

ರಾಮಕ್ಕ : ಹೌದು.

ಮಂತ್ರಿ : ತಾಯಂದಿರೆಲ್ಲಾ ಹಾಗೇ. ಅವಳು ಹೇಳಿದ್ಲು; ರಾಮಕ್ಕ ಒಬ್ಬ ನೊಂದ ತಾಯಿ, ನಾನೇ ಹೋಗಿ ನನ್ನ ಮಗನಿಗೆ ಜೀವದಾನ ಮಾಡು ಅಂತ ಕಾಲಿಹಿಡಿದು ಕೇಳುತ್ತೇನೆ ಅಂತ. ನಾನಂದೆ; ರಾಮಕ್ಕ ನಿನಗೆ ತಾಯಿಯಾದರೆ ನನಗೆ ತಂಗಿ. ತಂಗೀ ಹತ್ತಿರ ಹೋಗಿ ನಾನೇ ಕ್ಷಮೆ ಕೇಳುತ್ತೇನೆ, ಅಂತ ಬಂದೆ.

ರಾಮಕ್ಕ : ಅವರು ಹೆಂಗದಾರ್ರೀ?

ಮಂತ್ರಿ :  ನಿನ್ನ ಹಾಂಗೇ. ನೀವಿಬ್ಬರೂ ಭಾರತಾಂಬೆಯ ಪಡಿಯಚ್ಚು.

ರಾಮಕ್ಕ : ಭಾರತಾಂಬೆ ಯಾರ್ರೀ?

ಮಂತ್ರಿ : ಅವಳು ನಮ್ಮೆಲ್ಲರ ತಾಯಿ.

ರಾಮಕ್ಕ : ಹೋಗಿ ಏನ್ಮಾಡತೀರಿ?

ಮಂತ್ರಿ : ಆ ತಾಯಿ ಬಾಗಿಲಲ್ಲೇ ನಿಂತುಕೊಂಡು ದಾರಿ ಕಾಯ್ತಿರತ್ತಾಳೆ. ನಿನಗೆ ನಿನ್ನ ಮಗ ಸಿಕ್ಕಲಿಲ್ಲ ಅಂತ ಸುಲಭವಾಗಿ ಹೇಳಬಲ್ಲೆ. ಭಾರತಾಂಬೆಗೇನು ಹೇಳಲಿ?

ರಾಮಕ್ಕ : ಅಂದರ?

ಮಂತ್ರಿ : ಈಗ ನೀನೆ ಹೇಳು ರಾಮಕ್ಕಾ. ಬಷೀರ ನನ್ನ ಮಗನೇ ಇರಬಹುದು. ಆತ ಮುಸಲ್ಮಾನ, ಹೌದೋ? ನಿನ್ನ ಮಗಳು ಹಿಂದೂ ಸ್ತ್ರೀ ಹೌದೊ?

ರಾಮಕ್ಕ : ಹೌದು.

ಮಂತ್ರಿ : ಅಷ್ಟೆ.

ರಾಮಕ್ಕ : ಅಂದರ?

ಮಂತ್ರಿ : ಅದರರ್ಥ ನನ್ನ ಮಗ ನಿನ್ನ ಮಗಳ ಮೇಲೆ ಅತ್ಯಾಚಾರ ಮಾಡಿದ ಅಂತಲ್ಲ ತಾಯೀ. ಅಷ್ಟೇ ಆಗಿದ್ದರೆ ಬಷೀರನನ್ನ ಯಾವಾಗಲೋ ಕೊಂದು ಹಾಕತಿದ್ದೆ.

ಇಲ್ಲಿರೋದು ಒಬ್ಬ ಮುಸಲ್ಮಾನ ಒಬ್ಬ ಹಿಂದೂ ನಾರಿಯ ಮೇಲೆ ಅತ್ಯಾಚಾರ ಮಾಡಿದ-ಇದು! ಆಗಲೇ ಇಡೀ ಊರಿನ ಹಿಂದೂಗಳೆಲ್ಲಾ ಸೇರಿ ಮುಸಲ್ಮಾನರ ರುಂಡಗಳನ್ನು ಚೆಂಡಾಡಬೇಕೂಂತ ಇದ್ದಾರೆ. ಮುಸಲ್ಮಾನರೂ ಒಂದಾಗ್ತಾ ಇದಾರೆ. ನಾಳೆ ಬೆಳಗಾಗೋದರೊಳಗೆ ಎಷ್ಟು ಜನ ತಾಯಂದಿರು ಮಕ್ಕಳ್ನ ಕಳಕೊಂಡಿರತಾರೋ! ಈ ಸುದ್ದಿ ದೇಶಕ್ಕೆ ತಲುಪಿ ದೇಶದ ತುಂಬ ಹಿಂದೂ ಮುಸ್ಲಿಂ ಗಲಭೆ ಸುರುವಾಗುತ್ತೆ. ನೋಡು ನೋಡುವಷ್ಟರಲ್ಲಿ ಕೋಟಿ ಹೆಣ ಬೀಳುತ್ತವೆ. ಈಗ ನೀ ಹೇಳು ತಾಯಿ. ನಿನ್ನ ಒಬ್ಬಳೇ ಮಗಳಿಗೆ ಅನ್ಯಾಯವಾದಾಗ ನಿನ್ನ ಕರುಳಿಗೆ ಎಂಥ ವೇದನೆಯಾಯ್ತು. ಇನ್ನು ನಮ್ಮೆಲ್ಲರ ತಾಯಿಯಾದ ಆ ಭಾರತಾಂಬೆ - ಕೋಟಿ ಕೋಟಿ ಮಕ್ಕಳು ತಮ್ಮ ತಮ್ಮಲೇ ಬಡಿದಾಡಿ ಸಾಯುತ್ತಿರುವ ದೃಶ್ಯವನ್ನು ಮೌನವಾಗಿ ನಿಂತುಕೊಂಡು ನೋಡಬೇಕಾದ ಆ ತಾಯಿ - ಅವಳ ಗತಿಯೇನಾಗಬೇಕು? *(ದನಿ ನಡುಗಿಸುತ್ತ)* ತಾಯೀ ಭಾರತಾಂಬೇ ಇಷ್ಟಕ್ಕೆಲ್ಲಾ ಕಾರಣನಾದ ಮಗನಿಗೆ ಜನ್ಮ ನೀಡಿದ ಈ ಪಾಪಿಯನ್ನು ಕ್ಷಮಿಸಮ್ಮ ಕ್ಷಮಿಸು…. ಈಗ ಸ್ವಯಂ ಮಹಾತ್ಮಾ ಗಾಂಧೀಜಿಯವರೇ ನಿನ್ನ ಮನೆತನಕ ಬಂದು ಕೇಳಿದರೂಂತ

ಇಟ್ಟುಕೊ; ಮಗಳೇ ರಾಮಕ್ಕಾ ಒಂದು ಕಡೆ ನಿನ್ನ ಮಗಳಿಗಾದ ಅನ್ಯಾಯ ಇದೆ; ಇನ್ನೊಂದು ಕಡೆ ಕೋಟಿ ಕೋಟಿ ಜನರ ಜೀವ ಇದೆ. ಇವೆರಡರಲ್ಲಿ ಯಾವುದು ದೊಡ್ಡದು ತಾಯಿ?

ರಾಮಕ್ಕ : ಗಾಂಧಿ ಸತ್ತಾರ. ನಮ್ಮ ಮನೀಗ್ಯಾಕ ಬಂದಾರ ಬಿಡರೀ.

ಮಂತ್ರಿ : ನಾ ಬಂದೀನಲ್ಲಮ್ಮಾ. ನನಗೆ ಹೇಳು ಯಾವುದು ದೊಡ್ಡದು?

ರಾಮಕ್ಕ : ಗಾಂಧೀ ಆಗಿದ್ದರ ಇಂಥಾ ಸುಳ್ಳಿಗೆಲ್ಲ ಸೈ ಹಾಕಂತಿದ್ದರೇನ್ರಿ?

ಮಂತ್ರಿ : ಸತ್ಯ ಅಂದರೆ ಸೂಕ್ಷ್ಮ ತಾಯೀ. ನಿನ್ನ ಮಗಳಿಗಾದ ಅನ್ಯಾಯವೂ ಸತ್ಯ. ಲಕ್ಷಾಂತರ ಜೀವಿಗಳ ಸಾವೂ ಸತ್ಯ. ಇದರಲ್ಲಿ ದೊಡ್ಡ ಸತ್ಯ ಯಾವುದು? ನೀನು ಕೇವಲ ಬಂಗಾರಿಯ ತಾಯಿಯಾಗಿ ವಿಚಾರ ಮಾಡಬಾರದು; ಎಲ್ಲರ ತಾಯಿಯಾಗಿ ಭಾರತಾಂಬೆಯಾಗಿ ಚಿಂತನೆ ಮಾಡಬೇಕು. ಇಲ್ಲವೆ ಬಂಗಾರಿಯ ತಾಯಿಯಾಗಿ ವಿಚಾರ ಮಾಡಬೇಕು.

ರಾಮಕ್ಕ : ನೀವೇನ ಹೇಳ್ತೀರೊ ತಿಳೀವೊಲ್ದು.

ಮಂತ್ರಿ : ನೀ ಈಗೇನ ಹೇಳ್ತಿ ಅಂತ ನಾ ಹೇಳ್ಲೆ? ನಿನಗೆ ನಿನ್ನ ಸತ್ಯ, ನಿನ್ನ ದುಃಖ ದೊಡ್ಡದು. ಸರಿ ತಾನೆ? ಅದಕ್ಕೇ ಸಹಿ ಮಾಡು.

ರಾಮಕ್ಕ : ಅಂದರ?

ಮಂತ್ರಿ : ಸೇಡಿನಿಂದ ನಿನ್ನ ಕಣ್ಣು ಕುರುಡಾಗಿದೆ ತಾಯೀ, ಆಗಲೇ ಇಲ್ಲಿ ಶಾಸ್ತ್ರಿ ಬಂದಿದ್ದ ತಾನೆ?

ರಾಮಕ್ಕ : ಹೌಂದು.

ಮಂತ್ರಿ : ಕರಿನಿಂಗ ಎಲ್ಲಿ ಅಂತ ಕೇಳಿದ ತಾನೆ?

ರಾಮಕ್ಕ : ಹೌಂದು.

ಮಂತ್ರಿ : ಅಷ್ಟೆ.

ರಾಮಕ್ಕ : ಅಂದರೆ?

ಮಂತ್ರಿ : ಹಿಂದು ಮುಸ್ಲಿಮರಿಗೆ ಯುದ್ಧವಾಗ್ತದೆ ಅಂದೆ. ಆಗಲ. ಕೊನೇ ಪಕ್ಷ ನಿನ್ನ ಮಗಳ ಸೌಭಾಗ್ಯದ ಬಗ್ಗೆ ಆದರೂ ಕಾಳಜಿ ಇಲ್ಲವೆ?

ರಾಮಕ್ಕ : ಅಂದರ?

ಮಂತ್ರಿ : ಶಿಕ್ಷೆ ದುಷ್ಟರಿಗೆ ಸಿಕ್ಕುದಾದರೆ ಸಿಕ್ಕಲಿ. ಆದರೆ ಆ ನಿನ್ನ ಅಳಿಯ ಕರಿನಿಂಗನಿಗೂ ಶಿಕ್ಷೆ ಆಗುತ್ತೆ ಗೊತ್ತ?

ರಾಮಕ್ಕ : ಅಂಥೆಂಗ?

ಮಂತ್ರಿ : ಹಿಂಗ; *(ಬಂಗಾರಿಯನ್ನು ತೋರಿಸುತ್ತ)* ಹೊಲೆಯರ ಜಾತಿಯಲ್ಲಿ ಇಷ್ಟು ಸುಂದರ ಹುಡುಗಿ ಇದ್ದರೆ ಉಚ್ಚ ಜಾತಿಯವರ ಕಣ್ಣು ಅರಳುತ್ತವೆ ತಾಯೀ. ಅವರಿಗೆ ನಿಮ್ಮ ಜಾತಿಯೆಂದರೆ ಬರೀ ಸೂಳೆಯರ ಜಾತಿ. ನೀವಿರೋದೇ ಅವರ ಭೋಗಕ್ಕೆ. ನೀನು ಮಗಳನ್ನು

ಕರಿನಿಂಗನಿಗೆ ಮದುವೆ ಮಾಡಿದಾಗಿನಿಂದ ಅವರಿಗಾದ ನಿರಾಸೆ ಅಷ್ಟಿಷ್ಟಲ್ಲ. ಕರಿನಂಗನನ್ನ ಈಗ ಕೊಲ್ಲುತಾರೆ. ಸಾಕ್ಷಿ ಹೇಳಿದ್ದರಿಂದ ಮಂತ್ರಿ ಕಡೆಯವರೇ ಕೊಲ್ಲಿಸಿದರು ಅಂತ ಅದನ್ನು ಸುಲಭವಾಗಿ ನಮ್ಮ ಕಡೆ ತಳ್ಳುತ್ತಾರೆ. ಹೋದ ತಿಂಗಳು ಶಾಸ್ತ್ರಿಗಳು ಬಂಗಾರಿಯ ಮೇಲೇ ಕೈಮಾಡಿ ಕರಿನಿಂಗನಿಂದ ಉಗಿಸಿಕೊಂಡು ಹೋದದ್ದು ನಿನಗೂ ಗೊತ್ತಿದೆ. ಈಗ ತಿಳಿಯಿತೋ ಅವರ ಉಪಾಯ?

ರಾಮಕ್ಕ : *(ಗೊಂದಲದಲ್ಲಿ)* ಈ ಕಾಗದಕ್ಕೆ ಸೈ ಹಾಕಬೇಕಂತೀರೇನು?

ಮಂತ್ರಿ : *(ಉತ್ಸಾಸಹದಿಂದ)* ಊರು ಉಳಿಯಬೇಕಾದರೆ, ಲಕ್ಷಾಂತರ ಜೀವಿಗಳು ಉಳಿಯಬೇಕಾದರೆ, ಭಾರತಾಂಬೆ ನೆಮ್ಮದಿಯಿಂದಿರಬೇಕಾದರೆ, ನಿನ್ನ ಮಗಳ ಸೌಭಾಗ್ಯ ನಿನಗೆ ಬೇಕಿದ್ದರೆ - ಹೌದು ಸಹಿ ಹಾಕಬೇಕು.

*(ಹೊರಗಡೆ ಗಲಾಟೆ ಸುರುವಾಗಿದೆ)*

ನನ್ನಲ್ಲಿ ನಂಬಿಕೆಯಿರಲಿ ತಾಯೀ.

ರಾಮಕ್ಕ : ನಂಬಿದರ.

ಮಂತ್ರಿ : ಸಹಿ ಹಾಕಬೇಕು.

ರಾಮಕ್ಕ : ನಾ ಸೈ ಒತ್ತಿದರೆ ಕರಿನಿಂಗ ಉಳೀತಾನಲ್ಲ?

ಮಂತ್ರಿ : ಅಷ್ಟೇ ಅಲ್ಲ, ಊರವರೆಲ್ಲ ನಿನಗೆ ತಾಯೀ ಅಂತಾರೆ. ಇಡೀ ನಾಡು, ಇಡೀ ದೇಶ ನಿನ್ನ ಹೆಸರಿಗೆ ಜೈಕಾರ ಹಾಕುತ್ತೆ. ಸ್ವರ್ಗದಲ್ಲಿರೋ ಗಾಂಧೀಜಿ ಕುಲು ಕುಲು ನಗುತ್ತ 'ಭೇಷ್ ಮಗಳೇ ರಾಮಕ್ಕಾ' ಎಂದು ಆಶೀರ್ವಾದ ಮಾಡ್ತಾರ. ಸ್ವಯಂ ನನ್ನ ಮಂತ್ರಿ ಮಂಡಳ ನಿನ್ನನ್ನ ಅಭಿನಂದಿಸುತ್ತದೆ ತಾಯೀ.

ರಾಮಕ್ಕ : ತರ್ರಿ ಬಟ್ಟ ಒತ್ತತೀನಿ.

*(ರಾಮಕ್ಕ ಹೆಬ್ಬೆಟ್ಟು ಒತ್ತಿಸುವನು.)*

ಮಂತ್ರಿ : ಇಲ್ಲಗೆ ಮುಗಿಯಲಿಲ್ಲ ತಾಯೀ. ಈ ಥರ ಹೆಬ್ಬೆಟ್ಟನ್ನು ಬೇರೆಯವರಿಂದಲೂ ಒತ್ತಿಸುತ್ತಿದ್ದೆ. ಆದರೆ ಪೇಪರಿನವರು ಬರ್ತಾರೆ ಅದೆಲ್ಲಾ ನಾ ನೋಡಿಕೊಳ್ತೇನೆ. ಅವರು ಬಂದಾಗ ನಾನೇ ಮಾತಾಡ್ತೇನೆ. ಆಗ ನೀನು ಅತ್ಯಾಚಾರ ಆಗಿಲ್ಲ ಅಂತ ಹೇಳಬೇಕು. ಅಥವಾ ನಾ ಹೇಳಿದ್ದಕ್ಕೆಲ್ಲ ಹೌದು ಅನ್ನಬೇಕು.

*(ರಾಮಕ್ಕ ಕತ್ತು ಹಾಕುವಳು)*

ಬರಲೇ ತಾಯೀ? ಮನೆಯಲ್ಲಿ ನಿನ್ನ ತಂಗಿ ಕಾಯುತ್ತಿದ್ದಾಳೆ. ಜೈಹಿಂದ್!

*(ನಮಸ್ಕರಿಸಿ ಹೋಗುವನು. ತಾನೇನು ಮಾಡಿದೆನೆಂದು ರಾಮಕ್ಕನಿಗೆ ತಿಳಿಯುವ ಮೊದಲೇ ಹೊರಗೆ ಗಲಾಟೆ ಕಿರಿಚಾಟ ಜಾಸ್ತಿಯಾಗಿದೆ. ರಾಮಕ್ಕನಿಗೆ ಆ ಕಡೆ ಗಮನವಿದ್ದಂತಿಲ್ಲ. ಬಂಗಾರಿ ಹೋಗಿ ಹಿತ್ತಲ ಬಾಗಿಲು ತೆರೆಯುತ್ತಾಳೆ. ಗಲಾಟೆ ಇನ್ನೂ ಜಾಸ್ತಿ ಕೇಳುತ್ತದೆ. ಕೂಡಲೇ ಬಂಗಾರಿ "ಎವ್ವಾ" ಎಂದು ಕಿರುಚುತ್ತಾಳೆ. ರಾಮಕ್ಕ ಆ ಕಡೆ ನೋಡುತ್ತಾಳೆ.)*

ಬಂಗಾರಿ : ಎವ್ವಾ, ಕರಿನಿಂಗ ಅಡಗಿದ್ದ ಗುಡಿಸಲಕ ಬೆಂಕಿ ಹಾಕ್ಯಾರಬೇ.....

– ಎಂದು ಕಿರುಚುತ್ತಾ ಹಿತ್ತಿಲ ಬಾಗಿಲಿನಿಂದ ಹೊರಗೋಡುತ್ತಾಳೆ. ರಾಮಕ್ಕ ತಬ್ಬಿಬ್ಬಾಗಿ ಬರದ ಚಿತ್ರದ ಹಾಗೆ ತೆರೆದ ಕಣ್ಣು ತೆರೆದ ಹಾಗೇ ನಿಂತಿದ್ದಾಳೆ. ಹೊರಗಡೆಯ ಬೆಂಕಿಯ ಜ್ವಾಲೆಗಳು ಅವಳ ಮುಖದಲ್ಲೂ ಹೊಳೆಯುತ್ತಿದ್ದಾಗ–

-ತೆರೆ–

*ಪ್ರೇರಣೆ: ಜೀನ್‌ಪಾಲ್ ಸಾರ್ತ್ರ್‌ರವರ ನಾಟಕ The Respectful prostitute.*

**ದೃಶ್ಯ - ಒಂದು**

*(ಕೈಬಳೆಗಳಉಲುಹು. ಪೆಟ್ಟಿಗೆತೆರೆದ-ಮುಚ್ಚಿದಸಪ್ಪಳ. ಕುರ್ಚಿಆಚೀಚೆಸರಿಸಿದಪುಸ್ತಕಚೆಲ್ಲಿದಸದ್ದು. ತುಂಬಗಡಿಬಿಡಿ)*

ಲಕ್ಷ್ಮೀ: *(ಒಳಗಿನಿಂದ)*ಓಬಂದೆ…. *(ಬಳಿಬಂದು)*ಏನ್ರೆಮ್ಮಾ….?
…. ಇದೇನ್ರೀಸಾಮಾನೆಲ್ಲಚೆಲ್ಲಾಪಿಲ್ಲಿ? ಈಗತಾನೇಸರಿಯಾಗಿಜೋಡ್ಸಿಇಟ್ಟುಹೋಗಿದ್ದೆ.

ಧ್ವನಿ:ಕೂಡದು! ಈಮನೆಶಿಸ್ತಿನಲ್ಲಿಎಂದೂಇರಕೂಡದು!

ಉಷಾ:ನನ್ನನ್ನೇಆಕ್ಷೇಪಿಸುತ್ತೀಏನೇ? ಇರಲಿ. ಈಬೀಗದಕೈಯಾರೇಇಲ್ಲಿಇಟ್ಟಿದ್ದು?

ಧ್ವನಿ:ಅರಸುತಿಹಲತೆಕಾಲತೊಡಕಲುಹರಿದುಬಿಸಡುವರುಂಟೆ?

ಲಕ್ಷ್ಮೀ:ಸಾಹೇಬರೇಮರೆತುಇಟ್ಟಿರಬೇಕು.

ಉಷಾ:ಸರಿ. ನೀನುನಿನ್ನಕೆಲಸಕ್ಕೆಹೊರಟ್ಹೋಗು.
*(ಒಮ್ಮೆಲೆಶಾಂತವಾತಾವರಣ. ತನಗೆತಾನೇನುಡಿವವರಂತೆಉಷಾ)*

ಉಷಾ:ಬೀಗದಕೈ! ಅವರುಬೇಕೆಂದೇಇದನ್ನಿಲ್ಲಿಇಟ್ಟಿರಲಾರರಷ್ಟೇ? *(ಮತ್ತೆತುಸುಹೊತ್ತುನೀರವ.)*ಲಕ್ಷ್ಮೀ… ಈಸೀರೆರವಿಕೆಗಳನ್ನೆಲ್ಲಸರಿಯಾಗಿಮಡಿಚಿಬ್ಯಾಗಿಗೆಸೇರಿಸು. ವೇಳೆಇಲ್ಲ. ಬೇಗಮುಗೀಬೇಕು.

ಲಕ್ಷ್ಮಿ:ಆಗಲ್ರಮ್ಮ. *(ಸೀರೆಮಡಚಿಬ್ಯಾಗಿಗೆಸೇರಿಸುವಸಪ್ಪಳ.)*

ಉಷಾ:ಲಕ್ಷ್ಮೀಅವರೇನಾದರೂಹೋಗುವಾಗಹೇಳಿದ್ದಾರೇನು?

ಲಕ್ಷ್ಮಿ:ಏನೂಇಲ್ರಿ. ಅಡ್ಡಾಡಿಕೊಂಡುಬರ್ತೀನೀಂತಶಂಕರನಕೈಹಿಡಿದುಕೊಂಡುಹೋದರು.

ಉಷಾ:ಸರಿ, ಸರಿ. ಈಸೀರೆನನಗೆಹ್ಯಾಗೆಒಪ್ಪುತ್ತೆನೋಡು?…

ಲಕ್ಷ್ಮೀ:ಏನ್ಹೇಳ್ಬೇಕ್ರಮ್ಮಾ? ಲಕ್ಷ್ಮಿ! -ಸಾಕ್ಷಾತ್ ಲಕ್ಷ್ಮಿ ಇಳಿದುಬಂದ್ಹಾಗಕಾಣ್ತೀರಿ.

ಉಷಾ:ಶೀನೂಕೂಡಹಾಗೇಹೇಳ್ತಿದ್ದಕಣೇ- ಸ್ವರ್ಗದಿಂದಊರ್ವಶಿಇಳಿದುಬಂದಹಾಗೆಕಾಣ್ತೀರಿ- ಅಂತಅಲ್ವೇನೆ?

ಲಕ್ಷ್ಮಿ:ಅದ್ಸರಿ, ಇದೇನ್ರೆಮ್ಮಾಈಹೊತ್ತಿನಲ್ಲಿಸೀರೀನೆಲ್ಲಾಗಂಟುಕಟ್ತಾಇದೀರಿ?

ಉಷಾ: *(ಪೆಚ್ಚಾಗಿ)*ಓ...ಹ್... ನಾನುಇನ್ನೆರಡುದಿನಗಳಲ್ಲಿತೌರಿಗೆಹೋಗೋಳಿಲ್ಲವೆ? ಈಗಿನಿಂದಲೇಸಿದ್ಧತೆಮಾಡಿಟ್ಟಕೋ- ಬೇಕೂಂತ. ಹೊರಟದಿನವೇಅವಸರಮಾಡಿದರೆತುಂಬಕಷ್ಟವಾಗುತ್ತಲ್ಲವೆ?

ಲಕ್ಷ್ಮೀ:ಹೌದ್ರಿ…. ಆಂ. ಒಂದುಸುದ್ದಿಕೇಳಿದಿರಾತಾಯಿ?

ಉಷಾ:ಏನು?

ಲಕ್ಷ್ಮಿ:ನಮ್ಮಸಾಹೇಬರಿರೋಸ್ಕೂಲಿನಹತ್ತಿರರತ್ನಮ್ಮಾಂತಬಂದುಹುಡುಗಿಇತ್ತುಗೊತ್ತಾ?

ಉಷಾ:ಆಶಿವರಾಮರಾಯರಹಿರಿಯಮಗಳು?

ಲಕ್ಷ್ಮಿ:ಹೂಂ. ಅವಳೇ. ತನ್ನಗಂಡನಬಿಟ್ಟುಗೌಡರಮಗನ್ನಕೂಡಿಕೊಂಡುಓಡಿಹೋದಳಂತೆ!

ಉಷಾ: *(ಉದ್ವೇಗದಿಂದ)*ಲಕ್ಷ್ಮೀ*(ಬಿರುಸಾಗಿತೇಗುತ್ತ)*ಯಾರುಹೇಳಿದರುನಿನಗೀಸುದ್ದೀನ್ನ?

ಲಕ್ಷ್ಮಿ:ಅದ್ಯಾಕ್ರಮ್ಮಾ? ಊರತುಂಬಹಬ್ಬೇತಲ್ಲ- ಡಣಾಡಂಗುರದ್ಹಂಗ! ನೀವಾಕ್ಯಿಷ್ಟುಮನಸ್ಸಿಗೆಹಚ್ಚಿಕೊಳ್ಳಬೇಕುಬಿಡಿ. ಯಾರದೋಸುದ್ದಿ- ಯಾರದೋಮಾತು. ನಮಗೇನು? ಸಧ್ಯನಮಗೆಸಂಬಂಧಿಸಿದ್ದೇನೊಅಲ್ಲಲ್ಲ, ಪಾಪ…. ಗಂಡಭಾಳಸತ್ಯಮನುಷ್ಯ! ಅವಳಿಗೂಕೈಕೊಟ್ಟಳು ಚಾಂಡಾಲಿನಿ.

ಉಷಾ: *(ಎತ್ತರದಧ್ವನಿ)*ಚಾಂಡಾಲಿನಿ? ಯಾರಿಗೆನೀನಂದದ್ದುಹಾಗೆ? ಲಕ್ಷ್ಮೀ ….ಯಾರುಚಾಂಡಾಲಿನಿ? ಯಾರಿಗೆನೀನಂದದ್ದು?

ಲಕ್ಷ್ಮಿ:ಇದೇನ್ರಿಈಹೊತ್ತುಹೀಗೆಲ್ಲಾಆಡ್ತಾಇದ್ದೀರಿ? ಅವಳಿಗೆ- ಆಹುಡಿಗೆಗೆನಾನಂದದ್ದು? ಅಲ್ವೇನ್ರಿಮತ್ತೆ? ಆಕಳಂಥಾಗಂಡ. ಅಂಥವನಿಗೂ ಕೈಕೊಡೋದಂದ್ರೆ- ಎಂಥಚಾಂಡಾಲಿನಿಈಕಾಲದಹುಡಿಗೀರೇಹೀಗೆ…. ಇದೇನ್ರಿ, ನಿಮ್ಮಮುಖದಮೇಲೆಬೆವರು?

ಉಷಾ: *(ಚೇತರಿಸಿಕೊಂಡು)*ಓಹ್…. ಏ…. ನಿಲ್ಲ…. ತುಂಬಶಕೆಆಗ್ತಾಇದೆಅಲ್ಲವೇ? ಈಬೇಸಿಗೆಬೇರೆಎಂದುಹಾಳಾಗಿಹೋಗುತ್ತೋ?

ಲಕ್ಷ್ಮಿ: *(ಕುಲುಕುಲುನಕ್ಕು)*ಬಿಡ್ರಿ…. ನಮ್ಮಂಥಾದಡ್ಡರುಮಾತನಾಡೋಹಾಂಗಮಾತನಾಡ್ತೀರಿ…. ಮಳೆಗಾಲಇದ್ದದ್ದನ್ನಬ್ಯಾಸ್ಗಿಅಂದಬಿಟ್ರಿ.

ಧ್ವನಿ:ಹೊರಗೆಮಳೆಗಾಲವಿದ್ದರೂಅವಳುಮಾತ್ರಇನ್ನೂಸುಡುವಬೇಸಿಗೆಯಲ್ಲೇಇದ್ದಾಳೆ.

ಉಷಾ:ಓಹ್…. ಮರೆತುಹೋಗಿತ್ತು. ಸೀರೆಇಟ್ಟಾಯ್ತೇನು? ಸರಿಸರಿನೀನಿನ್ನುಹೊರಟ್ಹೋಗು.

ಲಕ್ಷ್ಮಿ:... ಹೂಂನ್ರಿ*(ಹೋಗುವಳು)*

*(ತುಸುಸಮಯನೀರವ. ಆಮೇಲೆಬೀಗದಕೈಸದ್ದು, ಪೆಟ್ಟಿಗೆತೆರೆದುಆಭರಣ, ದುಡ್ಡುತೆಗೆದುಕೊಂಡಸಪ್ಪಳ.)*

ಲಕ್ಷ್ಮಿ: *(ಒಳಗಿನಿಂದ)*ಅಮ್ಮಾವ್ರು.... ಬಿಳೀರವಿಕೆಒಳಗೇಇದೆ. ಅದನ್ನುತರಲೇನು?

*(ಗಡಬಡಿಸಿಒಮ್ಮೆಲೆಪೆಟ್ಟಿಗೆಮುಚ್ಚಿದಸಪ್ಪಳ. ಕೆಲಹೊತ್ತುನೀರವ.)*

ಉಷಾ:ಅಡಿಗಡಿಗೂನನ್ನನ್ನುಈಮನೆತಡೆಯುತ್ತಿದೆ. ಇಂಥಕಟುಕರಿಂದದೂರ- ಅತಿದೂರ- ನನ್ನಸುಖಕ್ಕೆಯಾರಿಂದಲೂಬಾಧೆಬಾರದಷ್ಟುದೂರ- ಓಡಿಹೋಗಬೇಕೆಂದರೆನನ್ನಮಟ್ಟಿಗೆನನ್ನನ್ನುಈಜಗತ್ತುಬಿಡುತ್ತಿಲ್ಲ! ಓಹ್- ನಾನುಇರಲಾರೆ- ಖಂಡಿತಇರಲಾರೆ- ನನ್ನಂಥವರುಈಮನೆಯಲ್ಲಿಖಂಡಿತಇರಬಾರದು!

ಧ್ವನಿ:ಖಂಡಿತಇರಬಾರದು. ಸುರೆಇದ್ದೂಹಾಲಿನಭ್ರಾಂತಿಹುಟ್ಟಿಸುವಜನ, ಈಮನೆಯಲ್ಲಿಖಂಡಿತಇರಬಾರದು!

ಉಷಾ: *(ಕೇಳಿದವರಂತೆ)*ಯಾರು? ಯಾರದುಹಾಗೆಮಾತನಾಡಿದವರು? ಲಕ್ಷ್ಮೀ... ಏಲಕ್ಷ್ಮೀ....

ಲಕ್ಷ್ಮಿ: *(ಓಡಿಬಂದಸದ್ದು)*ಏನ್ರಮ್ಮ?

ಉಷಾ:ಅವರುಬಂದಿದ್ದಾರೆಯೇ?

ಧ್ವನಿ:ಅವರೂಎಂದಾದರೂನಿನ್ನದಾರಿಗೆಅಡ್ಡಬಂದುದುಂಟೆ?

ಉಷಾ: *(ಉದ್ರಿಕ್ತವಾಗಿ)*ಲಕ್ಷ್ಮೀ! ಲಕ್ಷ್ಮೀ! ಕೇಳಿದೆಯಾ? ಯಾರೋಹೀಗೆಹಿಂದೆನಿಂತುನನ್ನನ್ನುಅಣಕಿಸಿಮಾತನಾಡುತ್ತಿದ್ದಾರೆ! ಕೇಳಲಿಲ್ಲನಿನಗೆ?

ಲಕ್ಷ್ಮಿ:ಇದೇನ್ರಮ್ಮಾಹೀಗೆಹುಚ್ಚುಚ್ಚಾರಆಡ್ತಾಇದೀರಿ?

ಧ್ವನಿ:ಅಹುದು- ನಿಜವಾಗಿಯೇಹುಚ್ಚು!

ಉಷಾ:ಕೇಳಿದೆಯಾ? ನೀನುಹುಚ್ಚಳೆಂದರೆಅದೂಹುಚ್ಚಳೆನ್ನುತ್ತಿದೆ. ನೀವಿಬ್ಬರೂಮಾತನಾಡಿಕೊಂಡಂತೆಆಡುತ್ತಿದ್ದೀರಿ! ಹಿಂದೆನೀನುಯಾರನ್ನೋಬಚ್ಚಿಟ್ಟುಬಂದಿರಬೇಕು! ಲಕ್ಷ್ಮೀ.... ಯಾರವನು? ಯಾರನ್ನುನೀನುಬಚ್ಚಿಟ್ಟುಬಂದದ್ದು?

ಧ್ವನಿ:ಯಾರನ್ನುನೀನುಬಹುದಿನಗಳಿಂದಮರೆತಿರುವೆಯೋಅವನನ್ನು!

ಉಷಾ:ಕೇಳಿದೆಯಾ? ಏನಂತಾನೆಈಪಾಪಿ? *(ಬಿಕ್ಕುತ್ತ)*ಹೋಗು- ಹೊರಟ್ಹೋಗು... ನಿನ್ನಮನೆಗೆಹೊರಟ್ಹೋಗು.... *(ಬಿಕ್ಕುಅಸ್ಪಷ್ಟವಾಗುತ್ತಿರುವಾಗ.)*

ಲಕ್ಷ್ಮಿ:ಅಮ್ಮಾವ್ರನಾಳಿನದಿನಸ್ವಲ್ಪತಡಮಾಡಿಬರ್ತೀನ್ರಿ.... *(ನಿಷ್ಕ್ರಮಣ, ಕೆಲಹೊತ್ತುನೀರವ.)*

ಶಂಕರ: *(ಪ್ರವೇಶಿಸಿ)*ಕಳ್ಳನಜೀವಹುಳ್ಳಹುಳ್ಳಗಂತ....

ಉಷಾ: *(ಚೀರಿ)*ಯಾರವನು?

ಶಂಕರ:ನಾನುಶಂಕರಅಕ್ಕವರ, ನೋಡಿ... ಆಶಾರಿಸ್ಕೂಲಿನಲ್ಲಿಈಹೊತ್ತುನನ್ನಪುಸ್ತಕಕದ್ದುಕೊಂಡುಇಲ್ಲಾಂತಹೇಳ್ತಾಇದ್ಳು. ನಾನುಗುರುಗಳಹತ್ರಹೋಗಿಹೇಳಿದಕೂಡಲೇಅಳಲಿಕ್ಕೆ....

ಉಷಾ: *(ನಡುವೇತಡೆದು)*ಸತ್ತುಹೋಗಲಿನಿನ್ನಶಾರಿ... ಶಂಕರ.... ನೀನೇನಾದರೂಇದೀಗಹಿಂದೆನಿಂತುಮಾತನಾಡಿದೆಯಾ?

ಶಂಕರ:ನಾನು? ಇಲ್ಲಾಂದ್ರೆ. ಈಗತಾನೇಸಾಹೇಬರನ್ನಕ್ಲಬ್ಬಿನಲ್ಲಿಬಿಟ್ಟುಬಂದೆ. ತಿರುಗಾಡಿಕೊಂಡುಇನ್ನೊಂದುತಾಸಿನಮೇಲೆಬಾಂತಹೇಳಿದರು. ಬಂದೆ.... ಯಾಕ್ರೀಅಕ್ಕಾವರಹೀಗಿದ್ದೀರಿ?

ಉಷಾ:.... ಅ.... ಹ್.... ಯಾಕಿಲ್ಲ. ಚೆನ್ನಾಗೇಇದ್ದೀನಲ್ಲ. ಚೆನ್ನಾಗೇಇದ್ದೀನಲ್ಲ- ಅದೇನೋಕೈಯಲ್ಲಿ?

ಶಂಕರ:ಈಫೋಟೋಕೆಳಗೆಬಿದ್ದಿತ್ತು. ಕುರ್ಚಿಯಮೇಲೆಇಡ್ತಾಇದೀನಿ.

ಉಷಾ:ಯಾರದು?.... *(ಚಿಟ್ಟನೆಚೀರಿ)*ಹೊರಟ್ಹೋಗುಶಂಕರಾಹೊರಟ್ಹೋಗು!.... ಓನಾನುಹೋಗಲಾರೆ.... ಹೋಗಲಾರೆ.... ನಾನುಎಲ್ಲಿಯೂಹೋಗಲಾರೆ!.... ಎಲ್ಲಿಯೂಹೋಗಲಾರೆ*(ಬಿಕ್ಕುತ್ತ)*ಇನ್ನೂನಿಂತಿರುವಿಯಲ್ಲಹಾಗೇ, ಅವರಹತ್ತಿರಹೊರಟ್ಹೋಗು*(ಶಂಕರಹೋಗುತ್ತಾನೆ.)*

ಶೀನೂಧ್ವನಿ:ಏನುಮಾಡಲುಉಷಾ? ನಿನ್ನನ್ನುಬಿಟ್ಟುಒಂದುಕ್ಷಣಕೂಡಬಾಳಲಾರೆ. ಕ್ಷಣಕ್ಷಣವೂನಿನ್ನಈಮೋಹಭರಿತಮುಖವನ್ನುನೋಡುತ್ತಿರಬೇಕು, ಸ್ಪರ್ಶಿಸುತ್ತಿರಬೇಕು! ಬಾರಿಬಾರಿಗೂಈಕರುಳುಗಳನ್ನುನೇವರಿಸುತ್ತಿರಬೇಕು! ದಿನದಇಪ್ಪತ್ತನಾಲ್ಕುತಾಸುಗಳೆಲ್ಲಾನಿನ್ನಸೆರಗಿನಮರೆಯಲ್ಲಿರಬೇಕು- ನಿನ್ನಧ್ವನಿಕೇಳುತ್ತಿರಬೇಕು- ನಿನ್ನಓರೆನೋಟಕ್ಕೆಪಕ್ಕಾಗಬೇಕು.... ಓಹ್.... ನಿನ್ನತೋಳಿನಲ್ಲಿತೃಪ್ತಿಎಂಬುದುಭ್ರಾಂತಿಉಷಾ, ತೃಪ್ತಿಎಂಬುದುಭ್ರಾಂತಿ!....
... ಉ... ಷಾ! ನಿನ್ನನ್ನುಬಿಟ್ಟುನಾನುಖಂಡಿತಬಾಳಲಾರೆ! ಎಲ್ಲಿಯಾದರೂದೂರಹೋಗೋಣ. ಈಜನ- ಈಸಮಾಜಎಲ್ಲವನ್ನೂಬಿಟ್ಟುದೂರ- ಅತೀದೂರಹೋಗೋಣ. ಇಂದುರಾತ್ರಿಟಿಕೆಟ್ಟುಕೊಂಡುಇಟ್ಟಿರುತ್ತೇನೆ. ಅವಶ್ಯವಾಗಿಬರಬೇಕು. ಬರುತ್ತೀಯಾ? ನಮ್ಮಿಬ್ಬರದುನಿಜವಾದಪ್ರೇಮವೇಆಗಿದ್ದರೆಖಂಡಿತಬರುತ್ತಿ. ಖಂಡಿತಬರಬೇಕು. ಹಾಂ.... ಹೋಗುವಾಗೊಂದುಟಾಂಗಾಹೇಳಿಹೋಗು.... ಸಿಕ್ಕಷ್ಟುದುಡ್ಡು, ಆಭರಣತರಲುಮಾತ್ರಮರೆಯಬೇಡ. ನಾನೂತರುತ್ತೇನೆ. ಬರುತ್ತೀಯಾಉಷಾ?

ಉಷಾ: *(ಬಿಕ್ಕುತ್ತ)*ನನಗೆಭಯವಾಗುತ್ತಿದೆ. ನಾವುಮಾಡುತ್ತಿರುವುದುಅನ್ಯಾಯವೆನಿಸುತ್ತದೆ. ನಾನುಬರಲಾರೆ.... ಬರಲಾರೆ....
*(ಮನೆಯಮುಂದೆಟಾಂಗಾನಿಂತಸಪ್ಪಳ)*

ಉಷಾ: *(ಅಳುತ್ತ)*ನಾನುಬರಲಾರೆ.... ಬರಲಾರೆ....

ಟಾಂಗಾವಾಲಾ: *(ಪ್ರವೇಶಿಸಿ)*ಮೇಮ್‌ಸಾಬ್ ಟಾಂಗಾತಯಾರಹೈ.

ಶೀನೂಧ್ವನಿ:ನಿನ್ನತೋಳಿನಲ್ಲಿತೃಪ್ತಿಎಂಬುದುಭ್ರಾಂತಿಉಷಾತೃಪ್ತಿಎಂಬುದುಭ್ರಾಂತಿ!

ಉಷಾ:ಹೊರಗೆ ಯಾರೂಇಲ್ಲವೇ?

ಟಾಂಗಾವಾಲಾ:ನಹೀಂ

ಉಷಾ: ಈ ಬ್ಯಾಗು ತೆಗೆದು ಕೊ….
*(ಬಿಕ್ಕು…. ತೇಗು…. ಬರಬರುತ್ತ ಅಸ್ಪಷ್ಟವಾಗುತ್ತಲೂ ಟಾಂಗಾ ಹೊರಟ ಸಪ್ಪಳ….)*

## ಜಕ್ಕಣ

## ದೃಶ್ಯ ಒಂದು

*(ಚೆನ್ನಕೇಶವ ದೇವಾಲಯ, ಉರಿಬಿಸಿಲಲ್ಲಿ ಶಿಲ್ಪಿ ಜಕಣಾಚಾರ್ಯರ ಶಿಷ್ಯರು ಊಟ ಮಾಡಿ ಮರದ ನೆರಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ದೂರದ ಇನ್ನೊಂದು ಮರದಡಿ ಮಲಗಿದ ಮುದುಕಿಯ ಕಂಡು ಮರುಗುತ್ತ ಅವರೇ ಮೇಳವಾಗುತ್ತಾರೆ.)*

ಮೇಳ : ಯಾರು ಈ ಮುದುಕಿ? ನಡು ಹಗಲು ಸುಡುಬಿಸಿಲಲ್ಲಿ ಕೆಂಪು ಹೂವರಳಿ ಉರಿಯುವ ಮರದ ನೆರಳಲ್ಲಿ ಕೂರಲಾರದೆ, ಮುರಿದ ಮಾತು, ಹರಿದ ಕನಸುಗಳ ಕನವರಿಸುತ್ತ ಮಲಗಿದ್ದಾಳೆ.

ಮೇಳ : ಯಾರೊಂದಿಗೋ ನುಡಿದಾಡುವಂತಿದೆ ಅವಳ ಚಹರೆ.

ಮೇಳ : ಸುಮಾರು ದಿನಗಳಿಂದ ನೋಡುತ್ತಿದ್ದೇನೆ. ದೇವಾಲಯದ ಒಳಗೆ ಹೊರಗೆ ಅರೆಮರುಳದಂತೆ ಅಲೆದಾಡುವಳು ತೋಣಚಿ ಹೊಕ್ಕ ದನದಂತೆ.

ಮುದುಕಿ : *(ಆರ್ತಳಾಗಿ)* ಚೆನ್ನಕೇಶವಾ….

ಮೇಳ : ಅಯ್ಯಯ್ಯೋ ಪಾಪವೇ ಅಕಟಕಟಾ ದುಃಖವೇ! ಆಗೊ ಆಗೋ ಬೇಟೆಗೊಂಡ ಪ್ರಾಣಿಯ ಹಾಗೆ ಕಿರಿಚಿ ಬೊಕ್ಕ ಬೋರಲು ಬಿದ್ದಳು ಮುದುಕಿ, ಯಾರಾದರೂ ಬನ್ನಿರಯ್ಯಾ-ಬಿದ್ದುಕೊಂಡಳುವ, ಹಾಡಿಕೊಂಡಳುವ, ದಿಂಡುರಳಿ ಬಿಕ್ಕಳಿಸಿ ಅಳುವ ಮುದುಕಿಯ ಸಂತೈಸಿರಯ್ಯಾ!

ಮುದುಕಿ :
ಚೆನ್ನಕೇಶವ….. *(ಎನ್ನುತ್ತ ಹೊರಗೆ ಓಡಿ ಹೋಗುವಳು. ಗರ್ಭಗುಡಿಯಿಂದ ಗೊಲ್ಲರ ಹುಡುಗನೊಬ್ಬ ಹೊರಬಂದು ಅವಳನ್ನೇ ನೋಡುತ್ತ)*

ಹುಡುಗ : ಯಾರದು? ಯಾರು ನನ್ನನ್ನು ಕರೆದವರು?

ಮೇಳ : ಯಾರಪ್ಪಾ ಅದು?

ಹುಡುಗ : ನಾನು ಚೆನ್ನಕೇಶವ, ಯಾರೋ ಕೂಗಿದಂತಾಯಿತಲ್ಲ?

ಮೇಳ : ಓಹೋ ಚೆನ್ನಕೇಶವನೊ? ಆಕಾರವೇನೋ ಕೊಂಚ ನಮ್ಮ ಗುರುಗಳು ಕಡೆದ ದೇವರ ಮೂರ್ತಿಯ ಹಾಗೇ ಇದ್ದೀಯ, ಇರಲಿ ನೀನು ಯಾರಾದರೂ ಆಗಿರಲಿ, ಅಗೋ ಅಲ್ಲಿದಾಳಲ್ಲ, ಆ ಮುದುಕಿ ಕೂಗಿದವಳು. ಯಾರಪ್ಪಾ ಅವಳು?

ಹುಡುಗ : ತಾಯಿ!

ಮೇಳ : ಯಾರ ತಾಯಿ?

ಹುಡುಗ : ಶಿಲ್ಪಿಗಳ ತಾಯಿ!ನಿಮಗೂ ತಾಯಿ!

ಮೇಳ : ನಮ್ಮ ತಾಯಿ? ನಮಗೆ ಗೊತ್ತಿಲ್ಲವೆ!

ಹುಡುಗ : ಗೊತ್ತಿಲ್ಲದಿದ್ದರೂ ಆಗಲೇ ಆಕೆ ನಿಮ್ಮ ಕಥೆಯಲ್ಲಿ ಪ್ರವೇಶಪಡೆದಾಗಿದೆ!

ಮೇಳ : ಒಡಪಿನ ಬಡಿವಾರ ಬಿಟ್ಟು ಮಾತಾಡಯ್ಯ, ಯಾರು ಆ ಮುದುಕಿ?

ಹುಡುಗ : ಮಹಾ ತಾಯಿ! ಉಲ್ಕೆಯಂತೆ ಉರಿವ ಆ ತಾಯ ಕಣ್ಣಲ್ಲಿ ಎನೆಲ್ಲ ಇವೆ: ಸೀದ ಬೇಸಿಗೆ, ಹಳಸಲು ನಗೆ, ದನಿಯಿರದ ಹಾಡು……
ಅವಳ ಎದೆಯಲ್ಲೆರಡು ಬೆಟ್ಟಗಳು. ಬೆಟ್ಟದ ಕೆಳಗೆ ಬಿಸಿ ಹಾಲಿನ ಬುಗ್ಗೆ ರಭಸದಲ್ಲಿ ಹರಿದು ಮಡುಗಟ್ಟಿದ ಸರೋವರದಲ್ಲಿ ಬಾಡಿ ನಿಂತಿದೆ; ಮುಲುಮುಲು ಜೀವದ ಸಹಸ್ರದಳ ಕಮಲ- ಹೊಕ್ಕಳ ಬಳ್ಳಿಯ ಎಳೆ ಹಿಡಿದು ಎಳೆಯುತ್ತ! ಇಗೋ ಬಂದೇ ತಾಯಿ…………
*(ಹೋಗುವನು)*

ಮೇಳ : ಮುದುಕಿಯ ಅವಾಂತರದಲ್ಲಿ ಸಂಜೆಯಾದದ್ದೇ ಗೊತ್ತಾಗಲಿಲ್ಲ.

ಮೇಳ : ದೇವಾಲಯದಲ್ಲಿ ಯಾವನೋ ಬಾಲಕ ವಿಗ್ರಹಗಳನ್ನು ನೋಡುತ್ತ ನಿಂತಿರುವನಲ್ಲ? ಗುರುಗಳಿಗೆ ಗೊತ್ತಾದರೆ ಹಾಗೇ ಬಿಡುವರೆ?

ಮೇಳ : ಗುರುಗಳ ಕೋಪದ ವಿಷಯ ಹೇಳಿ ನೋಡಿದೆ. ಏನೇ ಆದರು ಗುರುಗಳನ್ನು ನೋಡಲೇಬೇಕೆಂದು ಹೇಳಿದ. ನೋಡಿಕೊಳ್ಳಲಿ ಬನ್ನಿ. ಅಷ್ಟಕ್ಕೂ ನಾವು ಅವನನ್ನು ಕರೆಯುವಷ್ಟರಲ್ಲಿ ಗುರುಗಳೇ ಬಂದು ಬಿಡಬಹುದು.

## ದೃಶ್ಯ ಎರಡು

*(ಅದೇ ದೇವಾಲಯ. ಅಲ್ಲಿಯ ವಿಗ್ರಹಗಳನ್ನು ಬಾಲಕ ಡಂಕಣ ತದೇಕ ಧ್ಯಾನದಿಂದ ನೋಡುತ್ತಿದ್ದಾಗ ಜಕ್ಕಣನ ಪ್ರವೇಶ)*

ಜಕ್ಕಣ : ಯಾರದು?

ಡಂಕಣ : ನಾನು ಡಂಕಣ *(ಜಕ್ಕಣನ ಪಾದ ಮುಟ್ಟಿ ನಮಸ್ಕರಿಸುವನು)*

ಜಕ್ಕಣ : ನೀನು ನನ್ನ ಶಿಷ್ಯನಂತೆ ಕಾಣುವುದಿಲ್ಲ.

ಡಂಕಣ : ನಿಜ.

ಜಕ್ಕಣ : ಯಾರು ನೀನು? ಇಷ್ಟು ಹೊತ್ತಿನಲ್ಲಿ ದೇವಾಲಯದಲ್ಲಿ ಇರಬಾರದೆಂದು ಗೊತ್ತಿಲ್ಲವೆ?

ಡಂಕಣ : ಕ್ಷಮಿಸಿ ಸ್ವಾಮಿ. ಹೊರಡೋಣವೆಂದೇ ಇದ್ದೆ. ಆದರೆ ಈ ದೇವಾಲಯ ನನ್ನನ್ನು ಸೆಳೆಯಿತು. ಇಂಥ ಸೆಳೆತವನ್ನು ನಾನು ನನ್ನ ಜೀವಮಾನದಲ್ಲೇ ಅನುಭವಿಸಿಲ್ಲ. ದೇವಾಲಯವನ್ನು ನೋಡಿದ ಮೇಲೆ ಇದರ ಸ್ಥಪತಿಗಳ ಪಾದಗಳಿಗೆ ನಮಸ್ಕರಿಸಿಯೇ ಹೋಗಬೇಕೆನ್ನಿಸಿತು. ಸಂಜೆ ಹೊತ್ತು ನೀವು ದೇವಾಲಯಕ್ಕೆ ಬಂದು ಏಕಾಂತ ಕೂರುತ್ತೀರೆಂದು ನಿಮ್ಮ ಶಿಷ್ಯರು ಹೇಳಿದರು ಕಾಯುತ್ತಿದ್ದೆ. ನಿಮಗೆ ಬೇಸರವಾಗುವುದಾದರೆ ಈಗಲೇ ಹೊರಡುತ್ತೇನೆ.

ಜಕ್ಕಣ : ಎಲ್ಲಿಂದ ಬಂದೆ?

ಡಂಕಣ : ಕಳಿಂಗ ದೇಶದಿಂದ ಬಂದೇ ಸ್ಥಪತಿಗಳೇ. ಅಲ್ಲಿಯು ದೇವಾಲಯಗಳ ನಿರ್ಮಾಣ ಬರದಿಂದ ಸಾಗಿದೆ. ಅಲ್ಲಿದ್ದಾಗ ಬೇಲೂರಿನಲ್ಲಿ ಇದಕ್ಕಿಂತ ಅದ್ಭುತ ದೇವಾಲಯವನ್ನು ನಿರ್ಮಿಸಲಾಗುತ್ತಿದೆಯೆಂದು ಯಾರೋ ಹೇಳಿದರು; ಬಂದೆ.

ಜಕ್ಕಣ : ದೇವಾಲಯ ನಿರ್ಮಾಣವಾಗುತ್ತಿರುವುದು ಕಳಿಂಗದೇಶದ ವೇಳೂರುನಲ್ಲಿ ಅಲ್ಲವೆ?

ಡಂಕಣ : ಹೌದು, ನಿಮಗೆ ಹ್ಯಾಗೆ ಗೊತ್ತಾಯಿತು?

ಜಕ್ಕಣ : ಗೊತ್ತಾಗದೇನೋ ಹುಡುಗಾ? ನಿನ್ನ ನೋಡಿ ನನ್ನ ಯೌವನದ ನೆನಪಾಯಿತು. ನಾನು ನಿನ್ನ ಹಾಗೇ ದೇವಾಲಯಗಳಿಗೆ ನುಗ್ಗುತ್ತಿದ್ದೆ, ಕಲಿಯುತ್ತಿದ್ದೆ. ಹೇಳು ನೀನು ಒಬ್ಬ ರೂವಾರಿ, ಹೌದೋ?

ಡಂಕಣ : ಹೌದು ಸ್ಥಪತಿಗಳೆ. ನಾನು ರೂವಾರಿಯ ವಂಶದಲ್ಲಿ ಹುಟ್ಟಿದವನು.

ಜಕ್ಕಣ : ನಿನ್ನ ಗುರು ಯಾರು?

ಡಂಕಣ : ನನಗೆ ಯಾರು ಕಲಿಸಲಿಲ್ಲ, ರೂವಾರಿತನ ನನ್ನ ರಕ್ತದಲ್ಲಿದೆ. ಚಿಕ್ಕಂದಿನಿಂದಲೂ ನನಗೆ ಶಿಲ್ಪದ ಬಗ್ಗೆ ಆಸಕ್ತಯಿತ್ತು. ಮಣ್ಣಿನಿಂದ ಗೊಂಬೆ ಮಾಡುತ್ತಿದ್ದೆ. ತಾಯಿ ಬೇಡವೆಂದಷ್ಟು ನನ್ನ ಹಟ ಹೆಚ್ಚಾಯಿತು. ಕದ್ದು ಕಲ್ಲಿನಲ್ಲಿ ವಿಗ್ರಹ ಕೊರೆಯಲಿ ಶುರು ಮಾಡಿದೆ. ಹಾಗೇ ರೂವಾರಿಯಾದೆ. ಈಗ ಕಲ್ಲಿನ ದರ್ಶನದಿಂದ ಮಾತ್ರದಿಂದ ಅದರಲ್ಲಿ ಯಾವ ಮೂರ್ತಿಯು ಒಡಮೂಡುವದೆಂದು ಹೇಳಬಲ್ಲೆ.

ಜಕ್ಕಣ : ಹಾಗೊ? ಸರಿ ಹಾಗಾದರೆ ಅಕೋ ಅಲ್ಲಿ ಬಿದ್ದಿದೆಯಲ್ಲ, ಆ ಕಲ್ಲು ಕಂಡೆಯಾ?

ಡಂಕಣ : ಕಂಡೆ ಸ್ವಾಮಿ.

ಜಕ್ಕಣ : ಹಾಗಿದ್ದರೆ ಹೇಳು, ಆ ಕಲ್ಲಿನಲ್ಲಿ ನಿನಗೆ ಯಾವ ಮೂರ್ತಿ ಕಂಡಿತು?

ಡಂಕಣ : ನೀವು ಯಾವ ಮೂರ್ತಿಯನ್ನು ಮಾಡಲಿಕ್ಕೆ ಆ ಶಿಲೆಯನ್ನು ತಂದಿದ್ದೀರೋ ಗೊತ್ತಿಲ್ಲ. ನನಗಂತೂ ಆ ಕಲ್ಲಿನಲ್ಲಿ ವೇಣುಗೋಪಾಲನ ಮೂರ್ತಿ ಕಾಣುತ್ತಿದ್ದೆ. *(ಸ್ಥಳ ತೋರಿಸಿ)* ವೇಣು ಹಿಡಿದ ಹಸ್ತ , ಇಲ್ಲಿ ಮೂಡಿದರೆ ಚೆನ್ನ.

ಜಕ್ಕಣ : ಭಲೇ ಹುಡುಗಾ! ವೇಣುಗೋಪಾಲನ ಮೂರ್ತಿಯನ್ನು ಕಡೆಯಲೆಂದೇ ಈ ಕಲ್ಲು ತರಿಸಿ ಇಟ್ಟುಕೊಂಡೆ. ಮನುಷ್ಯ ದೈವದ ಹಾಗೆ ಪ್ರತಿಮೆಗಳಿಗೂ ಒಂದು ದೈವವಿರುತ್ತದೆ. ನನಗದು ಇನ್ನೂ ತಿಳಿಯುತ್ತಿಲ್ಲ. ವೇಣುಗೋಪಾಲನ ಮೂರ್ತಿ ಯಾಕೆ ನನ್ನ ಪರೀಕ್ಷೆ ಮಾಡುತ್ತಿದ್ದಿತೋ ಗೊತ್ತಿಲ್ಲ. ಎಷ್ಟು ಅನುಸಂಧಾನ ಮಾಡಿದರೂ ಮೂರ್ತಿಯ ಸ್ಪಷ್ಟ ಕಲ್ಪನೆ ನನಗಿನ್ನೂ ಸಾಕ್ಷಾತ್ಕಾರವಾಗಿರಲಿಲ್ಲ. ಕಾಲ ಕೂಡಿ ಬರಲೆಂದು ಈ ಕಲ್ಲನ್ನು ಹಾಗೇ ಇಟ್ಟುಕೊಂಡಿದ್ದೆ. ನೀನದರ ಹಸ್ತ ತೋರಿಸಿದ ಮೇಲೆ ನನಗೀಗ ವೇಣುಗೋಪಾಲನ

ಆಕೃತಿ ಸ್ಪಷ್ಟವಾಯಿತು. ನಿನ್ನ ಬಗ್ಗೆ ನನ್ನ ಆಸಕ್ತಿ ಕೆರಳುತ್ತಿದೆ. ಹೇಳು ಹುಡುಗಾ, ನಿನಗ್ಯಾರೂ ಗುರುಗಳಿಲ್ಲ ಅಂದೆ. ನಿಮ್ಮ ಊರಿನಲ್ಲಿ ರೂವಾರಿಗಳಿರಬೇಕಲ್ಲ?

ಡಂಕಣ : ಆಯ್ಕೆ ಅಂತಃಕರಣದ ವ್ಯಾಪಾರವಲ್ಲವೆ ಸ್ಥಪತಿಗಳೆ ಗುರು ಸಿಕ್ಕರೆ ಅದು ಭಾಗ್ಯ ವಿಶೇಷ ಹೌದು. 'ಇವನೇ ನನ್ನ ಶಿಷ್ಯನೆಂದು ಗುರುವೂ', 'ಇವರೇ ನನ್ನ ಗುರು'ಗಳೆಂದು' ಶಿಷ್ಯನೂ ನೋಟ ಮಾತ್ರದಿದಲೇ ಆಯ್ದುಕೊಳ್ಳುತ್ತಾರೆಂದು ನನ್ನ ತಂದೆ ಹೇಳುತ್ತಿದ್ದರಂತೆ. ಹೀಗೆಂದು ನನ್ನ ತಾಯಿ ಹೇಳುತ್ತಿದ್ದಳು.

ಜಕ್ಕಣ : *(ಚಕಿತನಾಗಿ)* ನಿನ್ನದು ಯಾವ ಊರು ಹುಡುಗಾ?

ಡಂಕಣ : ಕೆಲವು ವೈಯಕ್ತಿಕ ಪ್ರಶ್ನೆಗಳಿಗೆ ನಾನು ಉತ್ತರ ಹೇಳಲಾರೆ ಕ್ಷಮಿಸಬೇಕು ಸ್ಥಪತಿಗಳೇ. ಹಾಗೆಂದು ನನ್ನ ತಾಯಿಗೆ ಮಾತು ಕೊಟ್ಟಿದ್ದೇನೆ.

ಜಕ್ಕಣ : ಒಬ್ಬೊಬ್ಬರದು ಒಂದೊಂದು ಗೋಳಿನ ಕತೆ ಮಾರಯಾ! ನನ್ನದು ಅಂಥದೇ ಒಂದು ಕತೆ. ನನ್ನ ಊರು ಕೇರಿ ಯಾವುದೆಂದು ನಾನು ಹೇಳಿಲ್ಲ. ಮಹಾರಾಜರು ಕೇಳಿಲ್ಲ. ಪಟ್ಟಮಹಾದೇವಿಯರ ಉಸ್ತುವಾರಿಯಲ್ಲೇ ದೇವಾಲಯದ ಕೆಲಸ ನಡೆದಿದೆ. ಅವರಿಗೂ ವೈಯಕ್ತಿಕ ವಿವರಗಳಲ್ಲಿ ಆಸಕ್ತಿ ಕಡಿಮೆ. ಒಮ್ಮೆ ಮಾತ್ರ ನನ್ನ ಊರು ಕೇರಿಯ ವಿಷಯ ಕೇಳಿದರು. ನಾನು ಹೇಳಲಿಲ್ಲ. ಅಷ್ಟಕ್ಕೆ ಅವರು ಸುಮ್ಮನಾದರು. ಅವರಿಗೆ ಪ್ರತಿಭೆ ಒಂದಿದ್ದರಾಯಿತು. ನನ್ನ ವಿಷಯ ಬಿಡು, ನಿನಗೆ ಗುರುಗಳಿಲ್ಲ ಅಂದೆ, ಯೋಗ್ಯರಾದ ಗುರುವನ್ನು ಹುಡುಕುತ್ತ ಬಂದೆಯೊ?

ಡಂಕಣ : ನಿಜ ನಾನು ದಾರಿಹೋಕ. ನಾನು ಹುಡುಕುವ ದಾರಿಯಲ್ಲೇ ಸಿಕ್ಕಬೇಕು. ಮಾರ್ಗದರ್ಶಕ ಸಿಗಲೆಂದೇ ಮಾರ್ಗ ಹಿಡಿದಿದ್ದೇನೆ ಸ್ಥಪತಿಗಳೇ.

ಜಕ್ಕಣ : ಚಿತ್ರ ಚರಿತ್ರನಯ್ಯಾ ನೀನು! ಹೋಗಲಿ ಬಿಡು. ದೇವಾಲಯವನ್ನ ನೋಡಿದೆಯಲ್ಲ. ಏನೆನ್ನಿಸಿತು?

ಡಂಕಣ : ನಿಜ ಹೇಳುತ್ತೇನೆ ಸ್ಥಪತಿಗಳೇ, ದೇವಾಲಯ ಮಾತ್ರ ಅದ್ಭುತವಾಗಿದೆ! ಇಡೀ ಮಂದಿರ ಚೇನ್ನಕೇಶವನ ಅಂತಃಪುರ; ಶಿಲಾಬಾಲಿಕೆಯರೆಲ್ಲ ಅವನ ಪ್ರೇಯಸಿಯರು!

ಜಕ್ಕಣ : ಭಲೆ, ಒಳ್ಳೆ ಕಸುಬುದಾರ ನೀನು! ಇನ್ನಷ್ಟು ವಿವರವಾಗಿ ಹೇಳು.

ಡಂಕಣ : ನನಗೊಂದು ಅನುಮಾನ ಸ್ಥಪತಿಗಳೆ, ಇವರು ಅಲೌಕಿಕ ಪ್ರೇಯಸಿಯರಲ್ಲವೆ?

ಜಕ್ಕಣ : ಖಂಡಿತವಾಗಿ! ಚೆನ್ನಕೇಶವನಿಗೆ ಲೌಕಿಕ ಪ್ರೇಯಸಿಯರಿರುವುದುಂಟೇನಯ್ಯಾ?

ಡಂಕಣ : ಇಲ್ಲಿಯ ಬಹಳಷ್ಟು ಶಿಲಾಮೂರ್ತಿಗಳ ಚೆಲುವಿಕೆ ಅಪೂರ್ವವಾದದ್ದು ನಿಜ. ಆದರೆ ಚೆನ್ನಕೇಶವನ ಪ್ರೇಯಸಿಯರು ನಿತ್ಯ ಷೋಡಸಿಯರು. ಇವರದು ಮೊಲೆ ಬಲಿತು ಮಾಗಿದ ಯೌವನವೆಂದು ಅನಿಸುವುದಿಲ್ಲವೆ?

ಜಕ್ಕಣ : ನಿನಗದು ಅನುಭವ ಬಲಿತ ಮೇಲೆ ತಿಳಿದೀತು; ಆಮೇಲೆ?

ಡಂಕಣ : ಇಲ್ಲಿಯ ಬಹಳಷ್ಟು ಶಿಲಾಬಾಲಿಕೆಯರ ಅಂಗಸೌಷ್ಠವದ ಹಿಂದೆ ಒಬ್ಬಳೇ ಹೆಣ್ಣಿನ ಅಂಗಸೌಷ್ಠವದ ಮಾದರಿ ಇದ್ದಂತಿದೆ, ಹೌದೆ ಸ್ಥಪತಿಗಳೇ?

ಜಕ್ಕಣ : ಇದೂ ನಿನಗೆ ಅನುಭವ ಬಲಿತ ಮೇಲೆ ತಿಳಿದೀತು. ಚೇನ್ನಕೇಶವನ ಮೂರ್ತಿಯ ನೋಡಿದೆಯಾ?

ಡಂಕಣ : *(ಶಾಂತಿಯಿಂದ)* ನೀವು ಮಾಡಿದ ಚೇನ್ನಕೇಶವನ ಮೂರ್ತಿಯ ಅವಗುಂಠನ ತೆಗೆದು ನಿಮ್ಮ ಶಿಷ್ಯರು ತೋರಿಸಿದರು; ನೋಡಿದೆ. ಅದೊಂದು ಶಾಸ್ತ್ರರೀತ್ಯಾ ಮಾಡಿದ ಅಪೂರ್ವ ಕಲಾಕೃತಿ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಆದರೆ…..

ಜಕ್ಕಣ : ಏನು ಆದರೆ?

ಡಂಕಣ : ಮೂರ್ತಿಯ ಅಂತರಂಗದಲ್ಲಿ ದೋಷವಿದೆ. ಆದ್ದರಿಂದ ಅದು ಪೂಜಾರ್ಹವಲ್ಲ! ಅರ್ಹವೆಂದು ನಂಬಿದ್ದೀರಿ.

ಜಕ್ಕಣ : *(ಕೋಪದಿಂದ)* ಮೂರ್ಖಾ ಶಾಸ್ತ್ರಾಧಾರವಿದೆಯೋ ಯಾವುದಕ್ಕೂ; ಮ್ಯಾಲೆ ಕೈಲಾಸಕೂ ಕೆಳಗೆ ಭೂಲೋಕಕೂ! ಶಾಸ್ತ್ರವನ್ನು ಬಿಟ್ಟು ಒಂದಂಗುಲವೂ ಆಚೆ ಈಚೆ ಸರಿದಿಲ್ಲ ನಾನು!

ಡಂಕಣ : *(ಶಾಂತನಾಗಿ)* ಅದೇ ನೀವು ಮಾಡಿರುವ ತಪ್ಪು ಸ್ಥಪತಿಗಳೇ. ಶಾಸ್ತ್ರಮೂರ್ತಿಯ ಪ್ರಮಾಣವನ್ನು ಹೇಳಬಲ್ಲದು. ಅದು ಅಂತರಂಗವನ್ನು ತೋರಿಸಲಾರದು. ಅಂತರಂಗಕ್ಕೆ ಅಂತಃಕರಣವೇ ಪ್ರಮಾಣ, ಶಾಸ್ತ್ರವಲ್ಲ. ನಿಮಗೆ ಕಲ್ಲಿನ ಶಾಸ್ತ್ರ, ಕಲೆಯ ಶಾಸ್ತ್ರ ಎರಡೂ ಗೊತ್ತಿವೆ. ಆದರೆ ಈ ಮೂರ್ತಿಯ ವಿಷಯದಲ್ಲಿ ಮಾತ್ರ ಕಲ್ಲಿನ ಅಂತರಂಗ ತಿಳಿದಿಲ್ಲವೆಂದೇ ಹೇಳಬೇಕಾಗುತ್ತದೆ.

ಜಕ್ಕಣ : *(ವ್ಯಂಗ್ಯವಾಗಿ)* ಭಲೇ ಭಲೇ! ಭಾರೀ ತಿಳಿದುಕೊಂಡಿದ್ದೀಯಪ್ಪ! ಉತ್ತರದ ಗೋದಾವರಿಯಿಂದ ದಕ್ಷಿಣದ ಕನ್ಯಾಕುಮಾರಿತನಕ ವಿಜಯಧ್ವಜ ಹಾರಿಸಿದ ಈ ಆಚಾರ್ಯನಿಗೆ ಕಲ್ಲಿನ ಅಂತರಂಗ ತಿಳಿದಿಲ್ಲವೆಂದು ಕವಡೆ ಆಡುವ ಹುಡುಗನೊಬ್ಬ ಹೇಳುವಂತಾದುದು ಈ ನೆಲದ ಮಹಿಮೆಯಲ್ಲವೆ? ನಿನಗ್ಯಾಕೆ ಗುರು ಸಿಕ್ಕಿಲ್ಲವೆಂದು ನನಗೆ ಈಗ ಅರ್ಥವಾಯಿತು. ನೀನಗ್ಯಾಕೆ ಗುರು ಸಿಕ್ಕಿಲ್ಲವೆಂದು ನನಗೆ ಈಗ ಅರ್ಥವಾಯಿತು. ನೀನೇ ಗುರುವಾಗುವಷ್ಟು ಪ್ರತಿಭಾವಂತನಾಗಿರುವಾಗ ನಿನಗಿನ್ನೊಬ್ಬ ಗುರುವ್ಯಾಕೆ ಬೇಕು? ಅಲ್ಲವೇ?

ಡಂಕಣ : ಈಗಲೂ ವಿನಯದಿಂದಲೇ ಹೇಳುತ್ತಿದ್ದೇನೆ ಸ್ಥಪತಿಗಳೇ, ನನ್ನ ಮಾತು ಕೇಳಿ, ಇನ್ನೊಂದು ಮೂರ್ತಿಯ ಮಾಡಿಕೊಡುವುದುಚಿತ.

ಜಕ್ಕಣ : ವಿದ್ಯೆಯ ಕೊಬ್ಬು ನಿನ್ನ ನೆತ್ತಿಗೇರಿದೆಯೋ ಮೂರ್ಖಾ, ನಿನ್ನನ್ನು ದೇವಾಲಯದೊಳಕ್ಕೆ ಬಿಟ್ಟುದೇ ತಪ್ಪು. ತೊಲಗು ಇಲ್ಲಿಂದ (ಹೆಮ್ಮೆಯಿಂದ) ನಾನು ಮೂರ್ತಿ ಮಾಡುವಾಗ ಸ್ವಯಂ ದೇವರೇ ನನ್ನೆದುರು ಬಂದು ರೂಪದರ್ಶಿಯಾಗಿ ಕೂರುತ್ತಾನೆ! ಗೊತ್ತೇನೋ ಕತ್ತೆ?

*(ಅಸಹನೆಯಿಂದ ಡಂಕಣನ ಕೆನ್ನೆಗೆ ಹೊಡೆಯುವನು. ಈಗಲೂ ಡಂಕಣ ಸಹಿಸಿಕೊಂಡಿರುವನು.ಅಷ್ಟರಲ್ಲಿ ಗರ್ಭಗುಡಿಯ ಕಡೆಯಿಂದ ಚೆನ್ನಕೇಶವಾ ಎಂದು ಹೆಣ್ಣಿನ ದನಿ ಕೇಳಿಸಿ ಆ ಕಡೆ ಹೊರಡುವ ಮುನ್ನ ಜಕ್ಕಣನ ಎದುರು ಬಂದು)*

ಡಂಕಣ : ಚೆನ್ನಕೇಶವನನ್ನು ಕಾಣುವ ಕಣ್ಣು ನಿಮ್ಮ ಮುಖದಲ್ಲಿಲ್ಲ ಸ್ಥಪತಿಗಳೇ.

*(ಹೋಗುವನು. ಡಂಕಣನ ಸೊಕ್ಕಿನ ಮಾತು ಕೇಳಿ ಅಸಹಾಯಕ ಆಘಾತ ಹೊಂದಿ ಜಕ್ಕಣ ನಿಶ್ಶಕ್ತಿಯಿಂದ ಅಲ್ಲೇ ಒಂದು ಕಲ್ಲಿನ ಮೇಲೆ ಕುಸಿದು ಕೂರುವನು. ದೇವಾಲಯದ ಹೊರಭಾಗದಲ್ಲಿ ಬೆಳ್ದಿಂಗಳಿದೆ. ಅಲ್ಲಿ ಗೊಲ್ಲರ ಹುಡುಗ ನಿಂತಿದ್ದಾನೆ.)*

ಗೊ.ಹುಡುಗ : ಎಂದಿನಂತಿಲ್ಲ ಇಂದಿನ ರಾತ್ರಿ. ಮುತ್ತಿಕ್ಕಿದ ಮೋಡಗಳಿಂದ ಚಂದ್ರನಮುಖ ರಾಡಿಯಾಗಿದೆ. ಕಿಡಿ ಸಿಡಿಸುತ್ತಿವೆ ತಾರೆಗಳು. ಕಲಾವಿದನ ರೂಪಕಗಳು ನೆತ್ತರು ಬಸಿಯುತ್ತಿವೆ. ಬೂದಿಯಾಗಿವೆ ಕ್ಷಿತಿಜಗಳು. ಅರೆಕೊರೆದ ಮೂರ್ತಿಗಳು! ಕಿರಿದ ಹಲ್ಲು ಕಿಸಿದ ಕಣ್ಣು ಬಿಳಿಚಿಕೊಂಡಿವೆ.

ಜಕ್ಕಣ : ಯಾರದು?

ಗೊ.ಹುಡುಗ : ನಾನು ಗೊಲ್ಲರ ಹುಡುಗ.

ಜಕ್ಕಣ : ಗೊಲ್ಲರ ಹುಡುಗ ಅಂದರೆ ಯಾರು?

ಗೊ.ಹುಡುಗ : ಇನ್ನೂ ಗುರುತು ಸಿಗಲಿಲ್ಲವೇ ಸ್ಥಪತಿಗಳೇ? ಚೆನ್ನಕೇಶವನ ಮೂರ್ತಿ ಮಾಡುವಾಗ ಮಾದರಿಗಾಗಿ ಸ್ವಲ್ಪ ಹೊತ್ತು ಹಾಗೇ ನಿಂತಿರು ಅಂತ ಮುಂದೆ ನಿಲ್ಲಿಸಿ ಕೊಂಡಿದ್ದಿರಲ್ಲ? ಆ ಕೇಶವ!

ಜಕ್ಕಣ : ಯಾಕಯ್ಯಾ ಇಷ್ಟು ಹೊತ್ತಿನಲ್ಲಿ ಈ ಕಡೆ ಬಂದೆ?

ಗೊ.ಹುಡುಗ : ನೀವಿದ್ದೀರಲ್ಲ. ನೋಡಿಕೊಂಡು ಹೋಗೋಣ ಅಂತ ಬಂದೆ.

ಜಕ್ಕಣ : ಆಗಲೇ ಒಬ್ಬ ಹುಡುಗ ಮಾತಾಡಿ ಹೋದನಲ್ಲ, ಆವಾಗ ನೀನಿದ್ದೆಯೊ?

ಗೊ.ಹುಡುಗ : ಇದ್ದೆ. ಯಾಕೆ ನಾನಿರಬಾರದಿತ್ತೆ ಸ್ಥಪತಿಗಳೆ? ನಿಮ್ಮ ನಡುವೆ ನಡೆದ ಮಾತುಗಳನ್ನು ನಾನು ಯಾರಿಗೂ ಹೇಳುವುದಿಲ್ಲ.

ಜಕ್ಕಣ : ಅಧಿಕ ಪ್ರಸಂಗತನ ಮಾಡಬೇಡ. ಯಾರು ಕೇಳಬಾರದ ನುಡಿಗಳನ್ನು ನಾವೇನೂ ಆಡಲಿಲ್ಲವಲ್ಲ? ನಿನಗೆ ಹಾಗಿನ್ನಿಸಿತೇನಯ್ಯಾ?

ಗೊ.ಹುಡುಗ : ನನಗೂ ಹಾಗನ್ನಿಸಲಿಲ್ಲ.

ಜಕ್ಕಣ : ಆ ರೂವಾರಿಯ ಮಾತು  ಉದ್ಧಟತನ ಅಂತ ಅನ್ನಿಸಲಿಲ್ಲವೆ?

ಗೊ.ಹುಡುಗ : ಅಬ್ಬಾ ಏನವನ ಧಿಮಾಕು! ಕೊಂಬುಗಳನ್ನು ಅಲಂಕರಿಸಿಕೊಂಡು ನಿಂತ ಸಂಕ್ರಾತಿಯ ಹೋರಿಯ ಹಾಗೆ ಕಂಡನಾತ. ನಿಮ್ಮ ಹೆಮ್ಮೆಗಳಿಗೆ ಭಾರೀ ಗಾಯ ಮಾಡಿದ!

ಜಕ್ಕಣ : ಅಂದರೆ ನೀನವನ ಮಾತುಗಳನ್ನು ಒಪ್ಪಿಕೊಳ್ಳುತ್ತೀಯಾ?

ಗೊ.ಹುಡುಗ : ಒಪ್ಪುವುದೂ ಬಿಡುವುದೂ ನಿಮಗೂ ಮಹಾರಾಜರಿಗೂ ಬಿಟ್ಟಿದ್ದು. ಆದರೆ ಆ ಪ್ರತಿಮೆ ದೋಷಪೂರ್ಣವೆಂಬ ಶಬ್ದಸೂತಕವಂತೂ ಹಾಗೇ ಉಳಿಯಿತಲ್ಲ!

ಜಕ್ಕಣ : ಮೂರ್ತಿಯಲ್ಲಿಯ ದೋಷದ ಬಗ್ಗೆ ಅಂತಿಮವಾಗಿ ಹೇಳಬೇಕಾದವನು ನಾನೊ? ಆ ದಾರಿಹೋಕನೋ?

ಗೊ.ಹುಡುಗ : ಮಹಾರಾಜರು! ಯಾಕಂತೀರೋ ಮೂರ್ತಿ ದೋಷಪೂರ್ಣವೆಂದು ತಿಳಿದ ಮೇಲೂ ಪ್ರತಿಷ್ಠಾಪನೆ ಮಾಡಿದರೆ ಆಮೇಲೆ ಹುಟ್ಟುವ ಕಥೆಗಳಿಗೆ ಅವರೇ ನಾಯಕರಾಗಬೇಕಾಗುತ್ತದೆ. ಅಲ್ಲವೇ?

ಜಕ್ಕಣ : ಎರಡು ದಿನ ರೂಪದರ್ಶಿಯಾಗಿ ಕೂತವನು ಮೂರನೇ ದಿನ ಕಲಾ ವಿಮರ್ಶಕನಾಗಿ ಹೊರಹೊಮ್ಮುವುದೆಂದರೆ ಈ ಮಣ್ಣಿನಲ್ಲಿ ಏನೋ ವಿಶೇಷವಿರಬೇಕಲ್ಲವೆ?

ಗೊ.ಹುಡುಗ : ನೀವೇನಾದರೂ ಹೇಳಿ, ನಿಮಗೆ ಸಿಕ್ಕದ ಶಿಲ್ಪಕಲೆಯ ಸೂಕ್ಷ್ಮಗಳು ಆ ಬಾಲಕನ ಬಾಯಿಂದ ಸಿಡಿದವೆಂದು ಅನ್ನಿಸಲಿಲ್ಲವೆ ಸ್ಥಪತಿಗಳೆ? ಇರಲಿ, ನೀವಿಬ್ಬರೂ ಮಾತಾಡುತ್ತಿದ್ದಾಗ ಯಾವುದೋ ಹೆಂಗಸು ಬಂದು ದೇವರಿಲ್ಲದ ಗರ್ಭಗುಡಿಯಲ್ಲಿ ದೀಪಹಚ್ಚಿ ಮಂಗಳಾರತಿ ಗುನುಗಿ, ಬಿಕ್ಕಿದ್ದು ಕೇಳಿಸಿತೆ?

ಜಕ್ಕಣ : ಇಲ್ಲ.

ಗೊ.ಹುಡುಗ : ಸರಿ ಹೋಯ್ತಲ್ಲ! ನೀವು ಮಾಡಿದ ಚೆನ್ನಕೇಶವನ ತುಟಿಗಳಲ್ಲಿ ಮಲಗಿರುವ ಮೌನವನ್ನು ಆ ಹುಡುಗನಂತೂ ಕೆಣಕಿದ್ದಾನೆ. ಮುಂದೆ ಅವನೇ ಉತ್ತರಿಸುತ್ತಾನೆ ಬಿಡಿ.

*(ಗೊಲ್ಲರ ಹುಡುಗ ಹೋಗುವನು. ಜಕ್ಕಣ ಹಾಗೇ ಕೂರುವನು)*

ಜಕ್ಕಣ : ನನ್ನನ್ನು ಮೀರಿದ ಒಂದರಿಂದ ವಿಪರೀತವಾದದ್ದೇನೋ ನಡೆಯುತ್ತಿದೆ ಅಂತ ಅನ್ನಿಸುತ್ತಿದೆಯಲ್ಲಾ!

## ದೃಶ್ಯ ಮೂರು

ಮೇಳ : ಯಾರವನು ಹಾಗೆ ಹೇಳಿದವನು? ದಕ್ಷಿಣಕ್ಕೆ ಓವಜನಾದ ಜಕ್ಕಣಾಚಾರ್ಯರ ಪ್ರತಿಭೆ, ವಿದ್ವತ್ತು, ಪಡೆದ ಕೃಪೆಯನ್ನೆಲ್ಲ ಪಣಕ್ಕಿಟ್ಟು ಮಾಡಿದ ಕೇಶವನ ಪ್ರತಿಮೆಯಲ್ಲಿ ದೋಷವಿದೆಯೆಂದನಲ್ಲ – ಯಾರು ಆ ಪೋರ?

ಆತ ಹುಚ್ಚನೋ? ಉಂಡಾಡಿಯೋ?-ಗೊತ್ತಲ್ಲ! ಅಥವಾ ಶಿಲ್ಪಶಾಸ್ತ್ರದ ವಿದ್ಯಾರ್ಥಿಯೊ? ಹಾಗಿದ್ದಲ್ಲಿ ಪ್ರತಿಭೆಯ ಪ್ರಥಮ ಸ್ಪರ್ಶದಲ್ಲೇ ಸ್ಖಲನವಾಗಿ ಬಾಯಿಗೆ ಬಂದುದನಾಡಿದ್ದಾನೆ. ಆಚಾರ್ಯರು ಯಾರು? ಅವರ ಪತಿಶ್ರಮವೇನು? ಜೊತೆ ನಿಂತು ಕಟ್ಟಿದವರಿಗಲ್ಲದೆ ನೆತ್ತಿಯ ಮಾಂಸವಾರದ ಬಾಲಕನಿಗೆ ತಿಳಿಯಲುಂಟೆ?

*(ಗೊಲ್ಲರ ಹುಡುಗ ಬರುವನು)*

ಬಂದವನು ನೀನ್ಯಾರಪ್ಪ?

ಗೊ.ಹುಡುಗ : ನಾನು ಕೇಶವ.

ಮೇಳ : ನೀನೇ ಏನಪ್ಪಾ, ಕೇಶವನ ಪ್ರತಿಮೆಯಲ್ಲಿ ದೋಷವಿದೆ ಅಂತ ಸಾರಿದವನು?

ಗೊ.ಹುಡುಗ : ನಾನಲ್ಲ, ಆದರೆ ಹಾಗೆ ಒಬ್ಬ ಹುಡುಗ ಸಾರುವಾಗ ನಾನಲ್ಲಿ ಇದ್ದೆ.

ಮೇಳ : ಹಾಗೊ? ಆ ಹುಡುಗನಲ್ಲಿ ಶಿಲ್ಪವಿದ್ಯೆಯ ಬಗ್ಗೆ ಕಿಂಚಿತ್ತಾದರೂ ತಿಳುವಳಿಕೆ ಇದೆ ಅಂತ ಅನ್ನಿಸಿತೇನಪ್ಪಾ ನಿನಗೆ?

ಗೊ.ಹುಡುಗ : ಖಂಡಿತ ಇದೆ ಸ್ವಾಮಿ.

ಮೇಳ : ಹಾಗಿದ್ದರೆ ಅವನ್ಯಾಕೆ ಸಿದ್ಧಮಾಡಿ ತೋರಿಸಲಿಲ್ಲ?

ಗೊ.ಹುಡುಗ : ನಿಜ, ಅವನು ಹಾಗೆ ಮಾಡಬೇಕೆಂದಾಗಲೇ ಒಬ್ಬ ಹೆಂಗಸು ಗರ್ಭಗುಡಿಯ ಮುಂದೆ ನಿಂತು ಮಂಗಳಾರತಿ ಗುನುಗಿ ಬಿಕ್ಕಿದಳಪ್ಪ. ಹುಡುಗನನ್ನು ನೋಡಿದ್ದೇ ಓಡಿಹೋದಳು! ಆ ಹುಡುಗನೂ ಯಾವುದೋ ಜನಪದ ದೇವತೆಯನ್ನು ಕಂಡೆ ಹಾಗೆ ಅವಳ ಹಿಂದೆ ಓಡಿದ. ನನಗಿಷ್ಟೆ ಗೊತ್ತು.

ಮೇಳ : ಇನ್ನೂ ಚೆನ್ನಕೇಶವನ ಮೂರ್ತಿಯ ಪ್ರತಿಷ್ಠಾಪನೆಯೇ ಆಗಿಲ್ಲ. ಆಗಲೇ ಮಂಗಳಾರತಿ ಗುನುಗಿ ಬಿಕ್ಕಿದಳಪ್ಪ. ಹುಡುಗನನ್ನು ನೋಡಿದ್ದೇ ಓಡಿಹೋದಳು! ಆ ಹುಡುಗನೂ ಯಾವುದೋ ಜನಪದ ದೇವತೆಯನ್ನು ಕಂಡ ಹಾಗೆ ಅವಳ ಹಿಂದೆ ಓಡಿದ. ನನಗಿಷ್ಟೆ ಗೊತ್ತು.

ಮೇಳ : ಇನ್ನೂ ಚೆನ್ನಕೇಶವನ ಮೂರ್ತಿ ಪ್ರತಿಷ್ಠಾಪನೆಯೇ ಆಗಿಲ್ಲ. ಆಗಲೇ ಮಂಗಳರಾತಿ ಗುನುಗಿದಳು ಅಂತೀಯಲ್ಲಪ? ನಿನಗೆ ಬುದ್ಧಿ ಬ್ಯಾಡವಾ? ಹೋಗು ಹೋಗು.

ಗೊ.ಹುಡುಗ : ಸುಳ್ಳಲ್ಲ ನಿಜ ಸ್ವಾಮಿ.

ಮೇಳ : ಬಂದೂ ಬಂದೂ ನಿನ್ನನ್ನೂ ಕೇಳಿದೆವಲ್ಲ. ನಮ್ಮ ಬುದ್ಧಿಯ ಕೇಡು….. ಹೋಗು ಹೋಗು.

ಗೊ.ಹುಡುಗ : ಅಯ್ಯಯ್ಯೋ ನೀವೇ ಬನ್ನಿ ಸ್ವಾಮಿ, ದೇವಾಲಯದ ವಿಗ್ರಹಗಳೆಲ್ಲ ಇದನ್ನೇ ಪಿಸುನುಡಿದಾಡುವುದನ್ನು ನಾನೇ ಕೇಳಿಸಿಕೊಂಡೆ…….

## ದೃಶ್ಯ ನಾಲ್ಕು

*(ಚೆನ್ನಕೇಶವನ ವಿಗ್ರಹದೆದುರು ಜಕ್ಕಣ ಚಿಂತಾಕ್ರಾಂತನಾಗಿ ಕೂತಿದ್ದಾನೆ. ಸೇವಕ ಬಂದ 'ಪಟ್ಟ ಮಹಾದೇವಿಯವರು ಬಂದರು' ಅನ್ನುತ್ತಾನೆ. ಜಕ್ಕಣ ಎದ್ದುನಿಲ್ಲುವಷ್ಟರಲ್ಲಿ ಶಾಂತಲೆ ಬರುವಳು)*

ಜಕ್ಕಣ : *(ಕೈಮುಗಿದು)* ಪಟ್ಟಮಹಾದೇವಿಯವರು ಬರಬೇಕು.

ಶಾಂತಲೆ : ಸ್ಥಪತಿಗಳೆ ಯಾಕೆ ಹೀಗಿದ್ದೀರಿ? ಮೈ ಹುಷಾರಿಲ್ಲವೆ?

ಜಕ್ಕಣ : ಹುಷಾರಾಗಿದ್ದೇನೆ ಪಟ್ಟ ಮಹಾದೇವಿಯವರೆ.

ಶಾಂತಲೆ : ಮೂರ್ತಿ ಪೂರ್ಣವಾಯಿತೆ ಸ್ಥಪತಿಗಳೆ?

ಜಕ್ಕಣ : ಅಲ್ಲಲ್ಲಿ ನಯಗೊಳಿಸಬೇಕು. ಇನ್ನೂ ಒಂದು ವಾರ ಸಮಯವಿದೆಯಲ್ಲ, ಸಂಪೂರ್ಣವಾಗುತ್ತದೆ.

ಶಾಂತಲೆ : ಯಾರೋ ದಾರಿಹೋಕನೊಬ್ಬ ಮೂರ್ತಿಯಲ್ಲಿ ದೋಷವಿದೆಯೆಂದು ಹೇಳಿದನಂತಲ್ಲ? ಯಾರವನು?

ಜಕ್ಕಣ : *(ವಿಷಾದದಿಂದ)* ತನ್ನ ವಿಷಯ ಹೇಳಿಕೊಳ್ಳಲಿಲ್ಲ.

ಸೇವಕ : ಪ್ರತಿಮೆಯಲ್ಲಿ ದೋಷ ಕಂಡು ಹಿಡಿದವನು ಅಗೋ ದೇವಾಲಯದಲ್ಲಿದ್ದಾನೆ ಮಹಾರಾಣಿ!

ಶಾಂತಲೆ : ಇಲ್ಲಿಗೆ ಕರೆದುಕೊಂಡು ಬಾ ಅವನನ್ನ.
*(ಸೇವಕ ಹೋಗುವನು, ಅವರು ಬರುವವರೆಗೆ ಇಬ್ಬರೂ ಆ ಕಡೆಗೇ ನೋಡುತ್ತ ನಿಲ್ಲುತ್ತಾರೆ. ಡಂಕಣ, ಸೇವಕ ಬರುವರು.)*

ಜಕ್ಕಣ : ಇವನೇ ಆ ರೂವಾರಿ ತಾಯಿ, ರೂವಾರಿ ಪಟ್ಟಮಹಾದೇವಿ ಶಾಂತಲಾ ದೇವಿಯವರು!

ಡಂಕಣ : *(ಕೈ ಮುಗಿದು)* ತಮ್ಮ ಹೆಸರು ಕೇಳಿದ್ದೆ. ಈ ದಿನ ಪ್ರತ್ಯಕ್ಷ ಕಂಡುದು ನನ್ನ ಸೌಭಾಗ್ಯ ಮಹಾದೇವಿಯವರೆ.

ಶಾಂತಲೆ : *(ತನ್ನಲ್ಲಿ)* ಒಬ್ಬರ ಅಚ್ಚಿನಲ್ಲಿ ಇನ್ನೊಬ್ಬರ ಎರಕ ಹುಯ್ದಂತಿದೆಯಲ್ಲ! ಆಶ್ಚರ್ಯ! (ಪ್ರಕಾಶ) ನಿನ್ನನ್ನು ಕಂಡು ಸಂತೋಷವಾಯಿತಪ್ಪ. ನಿನ್ನ ಹೆಸರೇನು, ನಿನ್ನ ಗುರು ಯಾರು? ನಿನ್ನದು ಯಾವುರಾಯ್ತು ರೂವಾರಿ?

ಜಕ್ಕಣ : ಕ್ಷಮಿಸಬೇಕು. ಅವನಿಗೂ ವೈಯಕ್ತಿಕ ಪ್ರಶ್ನೆಗಳು ಅಪಥ್ಯ ತಾಯಿ.

ಶಾಂತಲೆ : ನೀವೂ ಹಾಗೇ ಹೇಳುತ್ತೀರಿ. ಈ ರೂವಾರಿಯೂ ಹಾಗೇ ಹೇಳುತ್ತಾನೆ. ಎಲ್ಲ ರೂವಾರಿಗಳ ಕತೆಯೂ ಒಂದೇ! ಇರಲಿ, ಹೇಳು ರೂವಾರಿ. ದೇವಾಲಯವನ್ನು ನೋಡಿದೆಯಲ್ಲವೆ? ಏನನ್ನಿಸಿತು?

ಡಂಕಣ : ನಾನು ನೋಡಿದ ಇನ್ನೊಂದು ಸುಂದರವಾದ ಮಂದಿರ ಕಳಿಂಗದ ವೇಳೂರದಲ್ಲಿ ಇದೆ ತಾಯಿ. ಇದು ಮಾತ್ರ ಅದಕ್ಕಿಂತ ಅದ್ಭುತವಾದ ಸೃಷ್ಟಿ! ಇಂಥ ಇನ್ನೊಂದು ದೇವಾಲಯವನ್ನು ನಾನು ಕಲ್ಪಿಸಲೂ ಸಾಧ್ಯವಿಲ್ಲ ತಾಯಿ!

ಶಾಂತಲೆ : ನಿನ್ನ ಮಾತು ಕೇಳಿ ಆನಂದವಾಯಿತಪ್ಪ. ಮೂಲ ವಿಗ್ರಹವನ್ನು ನೋಡಿದೆಯಲ್ಲವೆ? (ವಿಗ್ರಹವನ್ನು ತೋರಿಸುವಳು. ಸನ್ನೆಯ ಆಜ್ಞೆಯಂತೆ ಸೇವಕ ಅವಗುಂಠನವನ್ನು ಸ್ಮರಿಸುವನು)

ಡಂಕಣ : ನಾನು ಇದನ್ನೂ ನೋಡಿದ್ದೇನೆ ತಾಯಿ.

ಶಾಂತಲೆ : ಈ ಬಗ್ಗೆ ನೀನೇನೋ ಹೇಳಿದೆಯಂತೆ?

ಡಂಕಣ : ಹೌದು ತಾಯಿ, ಕಲೆಯ ದೃಷ್ಟಿಯಿಂದ ಈ ಪ್ರತಿಮೆ ಅಪ್ರತಿಮವಾಗಿದೆ. ಆದರಿದು ಮೂಲ ವಿಗ್ರಹವಲ್ಲವೆ ತಾಯಿ?

ಶಾಂತಲೆ : ಹೌದು.

ಡಂಕಣ : ಅಂದರೆ ದಿನಾಲೂ ಪೂಜೆಗೊಳ್ಳುವಂಥದು.

ಶಾಂತಲೆ : ಹೌದು.

ಡಂಕಣ : ಅಂದರೆ ಇದರಲ್ಲಿ ದೈವ ಪ್ರತಿಷ್ಠಾಪನೆಯಾದ ಮೇಲೆ ಕಾಲಾಂತರದಲ್ಲಿ ಕೋಟಿ ಕೋಟಿ ಭಕ್ತರ ಅಭೀಷ್ಟವನ್ನು ಈಡೇರಿಸುವ ಶಕ್ತಿಯನ್ನು ಈ ವಿಗ್ರಹ ಪಡೆಯುತ್ತದೆ……

ಜಕ್ಕಣ : *(ಅಸಹನೆಯಿಂದ)* ಹೌದು ಹೌದು ಹೌದು. ಈ ವಿಗ್ರಹ ದೋಷಪೂರ್ಣವಾಗಿದೆಯೆಂದು ತಾನೇ ನೀನು ಹೇಳುವುದು?

ಡಂಕಣ : ವಿಗ್ರಹದಲ್ಲಿ ದೋಷವಿಲ್ಲ ಸ್ಥಪತಿಗಳೇ, ಪ್ರತಿಮಾ ಲಕ್ಷಣಗಳನ್ನು ಅನುಸರಿಸಿ ಕಡೆದ ಮೂರ್ತಿ ಇದಾದ್ದರಿಂದ ಮೂರ್ತಿಯಲ್ಲಿ ಯಾವ ದೋಷವೂ ಇಲ್ಲ. ದೋಷವಿರೋದು ಕಲ್ಲಿನಲ್ಲಿ!

ಶಾಂತಲೆ : ಏನು ನೀನು ಹೇಳುವುದು? ಸ್ಥಪತಿಗಳು ಹಿರಿಯರು ಅನುಭವಿಕರು, ಇಡೀ ದಕ್ಷಣಕ್ಕೆ ಶಿಲ್ಪದಲ್ಲಿ ಆಚಾರ್ಯರು. ಮೂರ್ತಿಗಾಗಿ ಕಲ್ಲನ್ನು ಪರೀಕ್ಷಿಸಿಯೇ ಆಯ್ದಿರುತ್ತಾರೆ. ಅಲ್ಲವೆ ಸ್ಥಪತಿಗಳೆ?

ಜಕ್ಕಣ : *(ನೊಂದು)* ನಿಜ ತಾಯಿ, ಇದರ ಅಣು ಅಣುವನ್ನು ಪರೀಕ್ಷಿಸಿ ನಾನು ಈ ಕಲ್ಲನ್ನು ಆಯ್ದು ತಂದೆ. ಇದರಲ್ಲಿ ಸುಳಿಯಾಗಲಿ, ಗಂಟು ಗೆರೆಗಳಾಗಲಿ ಇಲ್ಲ. ಉಳಿಗೆ ಒಮ್ಮೆ ಇದರ ಲಯ ಸಿಕ್ಕರೆ ಸಾಕು ಮೂರ್ತಿಯನ್ನು ತಂತಾನೇ ಬಚ್ಚಿಕೊಡುತ್ತದೆ. ಇಷ್ಟು ವರ್ಷ ಕಲ್ಲು ಕೆತ್ತಿದ್ದೇನೆ, ನನಗೆಂದೂ ಕಲ್ಲು ಸುಳ್ಳು ಹೇಳಿಲ್ಲ. ಈಗ ಈ ಮಹಾಶಯನಿಂದ ಕಲ್ಲು ಹೇಳುವ ಸುಳ್ಳುಗಳನ್ನು ಕಲಿಯಬೇಕಾಗಿದೆ! ನನ್ನ ಅದೃಷ್ಟ.

ಶಾಂತಲೆ : ನೋಡಿದೆಯಾ ರೂವಾರಿ? ನೀನು ಹಿರಿಯರನ್ನು ಅವಮಾನಿಸಲಿಕ್ಕಾಗಿಯೇ ಕಲ್ಲಿನಲ್ಲಿ ದೋಷ ಹುಡುಕಿದಂತಿದೆ.

ಡಂಕಣ : ಸ್ಥಪತಿಗಳ ಬಗ್ಗೆ ನನಗೆ ಅಪಾರವಾದ ಗೌರವವಿದೆ ತಾಯಿ. ನನ್ನ ತಾಯಿಯಾಣೆಗೂ ಅವರನ್ನು ಅವಮಾನಿಸುವುದು ನನ್ನ ಉದ್ದೇಶವಲ್ಲ. ಸ್ಥಪತಿಗಳೆ ಹೇಳಿದಂತೆ ಮೇಲುನೋಟಕ್ಕೆ ಕಲ್ಲು ದೋಷರಹಿತವಾಗಿಯೇ ಇದೆ. ಆದರೆ ದೋಷವಿರುವುದು ಕಲ್ಲಿನ ಅಂತರಂಗದಲ್ಲಿ! ಒಳಗೆ ಹುಸಿ ಮುಚ್ಚಿಕೊಂಡು ಹೊರಗೆ ಸಜ್ಜನಿಗೆ ಮೆರೆವ ಡಾಂಭಿಕನಂತೆ ಕಲ್ಲು ಇವರೊಂದಿಗೆ ಆಟವಾಡಿದೆ ತಾಯಿ!

ಶಾಂತಲೆ : ಆ ದೋಷ ನಿನ್ನ ಕಣ್ಣಿಗೆ ಹ್ಯಾಗೆ ಬಿತ್ತು?

ಡಂಕಣ : ಬಾಲ್ಯದಿಂದಲೂ ಕಲ್ಲಿನಲ್ಲಿ ಬೆಳೆದಿದ್ದೇನೆ, ಪಟ್ಟಮಹಾದೇವಿಯರೆ. ಅವು ತಮ್ಮ ಅಂತರಂಗವನ್ನು ತೆರೆದು ತೋರಿಸಿ ನನಗೆ ತಮ್ಮ ಕಥೆಯನ್ನ ಹೇಳುತ್ತವೆ.

ಶಾಂತಲೆ : ಆ ಕಲ್ಲು ಸ್ಥಪತಿಗಳಿಗೂ ತನ್ನ ಅಂತರಂಗ ತೋರಿಸಿರಬೇಕಲ್ಲ?

ಡಂಕಣ : ಇವರು ನೋಡಿಲ್ಲ. ನೋಡಿದ್ದರೆ ಆ ಕಲ್ಲನ್ನು ಆರಿಸುತ್ತೀರಲಿಲ್ಲ.

ಜಕ್ಕಣ : *(ವ್ಯಂಗ್ಯದಿಂದ)* ನಿನಗಿನ್ಯಾವುದೋ ಮೂರನೆಯ ಕಣ್ಣಿದಂತೆ ಮೊಳಗುವ ನುಡಿಗಳನ್ನು ಆಡುತ್ತಿರುವೆ ಬಾಲಕಾ. ನಿನಗೆ ಮಾತ್ರ ಕಂಡಿರುವ ಕಲ್ಲಿನ ದೋಷವನ್ನು ನಾವೂ ನೋಡಬಹುದೆ?

ಡಂಕಣ : *(ಅಷ್ಟೇ ವ್ಯಂಗ್ಯದಿಂದ)* ನೋಡಬಹುದು ನೋಡುವ ಕಣ್ಣಿದ್ದರೆ.

ಜಕ್ಕಣ : ಹಾಗಾದರೆ ಪರೀಕ್ಷೆಯಾಗಲಿ.

ಶಾಂತಲೆ : ಪರೀಕ್ಷೆಯೆಂದರೆ ಹ್ಯಾಗೆ ಆಗಬೇಕು?

ಜಕ್ಕಣ : ವಿಗ್ರಹವನ್ನು ಒಡೆದು ನೋಡುವುದೊಂದೇ ದಾರಿ.

ಶಾಂತಲೆ : ರೂವಾರಿ, ನೀನು ಹೇಳಿದಂತೆ ವಿಗ್ರಹದ ಕಲ್ಲಿನ ಒಳಗಡೆ ದೋಷ ಇದೆಯೆಂದಾದರೆ ವಿಗ್ರಹವನ್ನು ಒಡೆದೇ ನೋಡಬೇಕೆಂದಾಯಿತು. ಜವಾಬ್ದಾರಿಯಿಂದ ಹೇಳು. ಪ್ರತಿಮೆಯನ್ನು ಒಡೆಯುವುದೆಂದರೆ ಯಾವುದೋ ಹಣ್ಣು ಬಿಚ್ಚಿ ನೋಡಿದಂತಲ್ಲ. ಬಿಚ್ಚಿದಾಗ ಹಣ್ಣಿನ ಒಳಗಡೆ ದೋಷವಿದ್ದರೆ ಎಸೆಯಬಹುದು ಚೆನ್ನಾಗಿದ್ದರೆ ತಿನ್ನಬಹುದು. ಪ್ರತಿಮೆಯ ಮಾತು ಹಾಗಲ್ಲ ನೋಡು! ಒಡೆದು ನೋಡಿದಾಗ ದೋಷ ಕಂಡುಬಂದರೆ ಸೈ. ಇಲ್ಲದಿದ್ದರೂ ಭಗ್ನಮೂರ್ತಿ ನಿರುಪಯುಕ್ತವಲ್ಲವೆ? ಇದಕ್ಕೇನೆನ್ನುತ್ತಿ?

ಡಂಕಣ : ತಾಯೀ, ನನಗೆ ಕಂಡ ಸತ್ಯವನ್ನಂತೂ ಹೇಳಿದ್ದೇನೆ. ಅದನ್ನು ಒಪ್ಪುವುದೂ ಬಿಡುವುದೂ ನಿಮ್ಮ ವಿವೇಕಕ್ಕೆ ಬಿಟ್ಟಿದ್ದ. ಈ ಪ್ರತಿಮೆ ಪೂಜೆಗೆ ಅರ್ಹವಲ್ಲ ಎನ್ನುವುದಂತೂ ನಿಜ. ಈವರೆಗಿನ ನನ್ನ ಮಾತು ವ್ಯರ್ಥ ಕಾಲಹರಣವಾಗಿದ್ದರೆ ಕ್ಷಮಿಸಿ ತಾಯಿ. *(ನಮಸ್ಕರಿಸಿ ಹೊರಡುವನು)*

ಜಕ್ಕಣ : ನಿಲ್ಲು. ಪಟ್ಟಮಹಾದೇವಿಯವರ ಅಪ್ಪಣೆ ಇಲ್ಲದೆ ಹೊರಟಿದ್ದೀಯಲ್ಲ, ಎಷ್ಟಯ್ಯ ನಿನ್ನ ಕೊಬ್ಬು? ಹೇಳಿಕೊಳ್ಳಲು ಒಬ್ಬ ಗುರುವಿನ ಗುರುತು ಕೂಡ ಇಲ್ಲದ ನೀನು ರೂವಾರಿಯ ಕುಲದಲ್ಲಿ ಹುಟ್ಟಿದವನೆಂಬುದೂ ಹುಸಿ, ಯಾವನೋ ಅಡ್ಡ ಕಸುಬಿಗೆ ಹುಟ್ಟಿ.....

ಡಂಕಣ : *(ತಡೆದು)* ನಿಮ್ಮಂಥ ಹಿರಿಯರಿಗೆ ಈ ಮಾತು ಶೋಭಿಸುವುದಿಲ್ಲ ಸ್ಥಪತಿಗಳೇ. ನೀವು ಸರಸ್ವತಿ ಪುತ್ರರೆಂದು ಗೌರವ ಪಡೆದಿರಬಹುದು. ನಾನೊಬ್ಬ ತಾಯಿಯ ಮಗನೆಂದಾದರೂ ಒಪ್ಪಿಕೊಳ್ಳುವ ಸೌಜನ್ಯ ತೋರಿಸಿ. ನಾನು ರೂವಾರಿ. ನೀವು ತೋರಿಸಿದ ಕಲ್ಲಿನಲ್ಲಿ ವೇಣುಗೋಪಾಲನ ಮೂರ್ತಿ ಕಾಣುತ್ತಿದೆ ಎಂದಾಗ ಹೌದೆಂದು ನೀವೇ ಒಪ್ಪಿಕೊಂಡಿರಲ್ಲವೆ? ನಾನು ರೂವಾರಿಯ ಮಗನೆಂದು ನನ್ನ ತಾಯಿ ಹೇಳಿದಳು. ನಾನು ಒಪ್ಪಿದೆ. ಅಲ್ಲಿಗದು ಮುಗಿಯಿತು. ನಾನು ರೂವಾರಿಗಳ ವಂಶದಲ್ಲಿ ಹುಟ್ಟಿದೆನೆಂಬುದೇ ಹುಸಿ ಎಂದಿರಿ. ಆ ಕಲ್ಲಿನಲ್ಲಿರುವ ವೇಣುಗೋಪಾಲನ ಮೂರ್ತಿ ಸರಸ್ವತೀ ನಿಮಗೆ ಇನ್ನೂ ಹೊಳೆದಿರಲಿಲ್ಲವಲ್ಲ! ವೇಣು ಹಿಡಿದ ಕೈಗಳ ಸ್ಥಳ ಇದೆಂದು ತೋರಿಸಿದಾಗ ನೀವೇ ಭಲೇ ಬಾಲಕಾ ಅಂದಿರಿ!

ಜಕ್ಕಣ : ಆಯಿತಯ್ಯ ನಾನು ಈವರೆಗೆ ಕಲಿತ, ಕಲಿಸಿದ, ಕೆತ್ತಿದ ವಿದ್ಯೆಯಲ್ಲ ಹುಸಿ, ನಿನ್ನದೇ ನಿಜವೆನ್ನೋಣ. ನನಗೇನೋ ನಂಬಿಕೆಯಿದೆ - ಪ್ರತಿಮೆಯಲ್ಲಿ ದೋಷವಿಲ್ಲ ಎಂದು. ಅದಕ್ಕಾಗಿ ನೀನು ಕೇಳಿದ ಪಣ ಕಟ್ಟಬಲ್ಲೆ. ಪ್ರತಿಮೆಯಲ್ಲಿ ದೋಷವಿದೆಯೆಂದು ಇಷ್ಟು ಗಟ್ಟಿಮುಟ್ಟಾಗಿ ಹೇಳುವೆಯಲ್ಲ- ಒಂದು ವೇಳೆ ಅದು ಸುಳ್ಳಾದರೆ ನೀನು ಕಟ್ಟುವ ಪಣ ಏನು?

ಡಂಕಣ : ನಾನು ಹೇಳಿದ್ದು ಸುಳ್ಳಾದರೆ ಸುಳ್ಳು ಹೇಳಿದ ನಾಲಿಗೆಯನ್ನು ಕತ್ತರಿಸಿ ಚೆಲ್ಲುತ್ತೇನೆ. ರೂವಾರಿತನ ಮಾಡುವ ಈ ಕೈಗಳನ್ನು ಕತ್ತರಿಸಿ ಹಾಕುತ್ತೇನೆ ಒಪ್ಪಿಗೆಯೊ?

ಜಕ್ಕಣ : ಹಾಗಾದರೆ ನನ್ನ ಪಣ ಕೇಳು.

ಡಂಕಣ : ನಿಲ್ಲಿಸಿ ಸ್ಥಪತಿಗಳೇ. ಪಣ ಸಮಾನರಲ್ಲಿರಬೇಕು. ನಾನು ನಿಮ್ಮ ಸಮಾನನಲ್ಲ. ವಯಸ್ಸಿನಲ್ಲಿ, ಅನುಭವದಲ್ಲಿ, ವಿದ್ಯೆಯಲ್ಲಿ ಕೂಡ ನಾನು ಹುಡುಗ. ಇದು ನನ್ನ ವಿದ್ಯೆಯ ಪರೀಕ್ಷೆ. ನಿಮ್ಮದಲ್ಲ. ನಿಮ್ಮ ಪಣವನ್ನು ನಾನು ಒಪ್ಪಲಾರೆ.

ಶಾಂತಲೆ : ಭಲೇ ರೂವಾರಿ! ನಿನ್ನ ಮಾತನ್ನು ಮೆಚ್ಚಿಕೊಂಡೆ. ಎಂಥಾ ಮಹಾತಾಯಿ ನಿನ್ನನ್ನು ಹೆತ್ತಿರಬೇಕಪ್ಪ! ಆ ತಾಯಿಯ ಒಡಲು ತಂಪಾಗಿರಲಿ. ಸ್ಥಪತಿಗಳೇ ಪ್ರಾಯವನ್ನು ಅವಿಶ್ವಾಸದಿಂದ ಕಾಣುವುದು ಬೇಡ. ನಿಮ್ಮಿಬ್ಬರಿಗೂ ನಾನು ಹಾಕುವ ಶರತ್ತೊಂದಿದೆ. ಯಾವುದೇ ಪಣಗಳಿಲ್ಲದೆ ಈ ಪರೀಕ್ಷೆ ನಡೆಯಬೇಕು.

ಜಕ್ಕಣ : ಇದು ನಮ್ಮ ಕಲೆಯ ಪರೀಕ್ಷೆ. ಪಣಗಳಿಲ್ಲದೆ ಕಲೆಯ ಸತ್ಯ ಹೊಳೆಯಲಾರದು ಪಟ್ಟ ಮಹಾದೇವಿಯವರೇ.

ಶಾಂತಲೆ : ನೀವು ಮಾಡಿದ ಚೆನ್ನಕೇಶವನ ಪ್ರತಿಮೆ ಶ್ರೇಷ್ಠ ಕಲಾಕೃತಿ ಎಂದು ರೂವಾರಿ ಒಪ್ಪಿಕೊಂಡಿದ್ದಾನೆ. ಆದ್ದರಿಂದ ಇದು ಕಲೆಗಾರಿಕೆಯ ಪರೀಕ್ಷೆಯಲ್ಲ. ಇಬ್ಬರು ಕಲಾವಿದರ ವೃತ್ತಿ ಪರೀಕ್ಷೆ. ಆದ್ದರಿಂದ ಪಣದ ಅಗತ್ಯವಿಲ್ಲ.

ಜಕ್ಕಣ : ಕೆಲವು ಸಲ ಹಿಂಸೆಯ ಮೂಲಕವೇ ಪರೀಕ್ಷೆಯ ನಿರ್ಣಯ ಪ್ರಕಟವಾಗುತ್ತದಲ್ಲವೆ ಮಹಾದೇವಿಯವರೆ?

ಶಾಂತಲೆ : ಭರತ ಬಾಹುಬಲಿಯರ ಪರೀಕ್ಷೆ ಅಹಿಂಸೆಯ ಮೂಲಕ ನಡೆಯಿತೆಂಬುದು ನೆನಪಿರಲಿ ಸ್ಥಪತಿಗಳೆ. ಈಗ ಹೇಳು ರೂವಾರಿ. ಪ್ರತಿಮೆಯ ದೋಷ ನಿರ್ಣಯ ಮಾಡುವುದು ಹ್ಯಾಗೆ?

ಡಂಕಣ : ಪ್ರಥಮದಲ್ಲಿ ಪ್ರತಿಮೆಯ ಮೈತುಂಬ ಲೇಪಿಸಬೇಕು. ಅದು ಒಣಗುವ ತನಕ ತಡೆದು ಎಲ್ಲ ಒಣಗಿದ ಮೇಲೆ ಮೂರ್ತಿಯ ಯಾವುದಾದರು ಭಾಗದಲ್ಲಿ ಹಸಿ ಉಳಿದರೆ ದೋಷ ಅಲ್ಲೇ ಇದೆ ಎಂದು ತಿಳಿಯಬೇಕು. ಆ ಸ್ಥಳದಲ್ಲಿ ಒಡೆದು ನೋಡಿದರೆ ದೋಷವೇನೆಂದು ತಾನೇ ತಿಳಿಯುತ್ತದೆ.

ಶಾಂತಲೆ : ಇದ್ದಕ್ಕೆ ಒಪ್ಪಿಗೆಯೆ ಸ್ಥಪತಿಗಳೆ?

ಜಕ್ಕಣ : ಒಪ್ಪಿದೆ ಪಟ್ಟ ಮಹಾದೇವಿಯವರೆ.

ಶಾಂತಲೆ : ಹಾಗಿದ್ದರೆ ಈಗ ನನ್ನ ಶರ್ತು ಕೇಳಿರಿ: ಈ ಪರೀಕ್ಷೆ ಮಹಾರಾಜರ ಕಟ್ಟಳೆಗೆ ಒಳಗಾಗಿ, ಅವರ ಸನ್ನಿಧಿಯಲ್ಲೇ ನಡೆಯಬೇಕು. ಪರೀಕ್ಷೆಯ ನಿಯಮಗಳನ್ನು ಮಾಡುವವರು, ನಿರ್ಣಯ ಹೇಳುವವರು ಮಹಾರಾಜರೇ. ನಾಳೆ ಮುಂಜಾನೆ ಚೆನ್ನಕೇಶವನ ಸಮ್ಮುಖದಲ್ಲಿ, ಇದೇ ಜಾಗದಲ್ಲಿ ಸೇರೋಣ. ಅಲ್ಲಿಯವರೆಗೆ ಇಬ್ಬರ ನಡುವೆ ಯಾವುದೇ ಮನಸ್ತಾಪ ನಡೆಯಕೂಡದು. ಅರ್ಥವಾಯಿತೇ? ಈಗ ಎಲ್ಲರೂ ಹೊರಡಿ.

*(ಎಲ್ಲರೂ ಹೋಗುವರು, ಶಾಂತಲೇ ಒಬ್ಬ ಳೇ ಚೆನ್ನಕೇಶವನ ಮೂರ್ತಿಯನ್ನು ನೋಡುತ್ತ ನಿಟ್ಟುಸಿರಿಡುವಳು. ಗೊಲ್ಲರ ಹುಡುಗ ಬರುವನು.)*

ಗೊ.ಹುಡುಗ : ಆಶ್ಚರ್ಯ! ಮೂರ್ತಿ ಕಡೆದವನೇ ಮೂರ್ತಿ ಭಂಜನೆಗೆ ಸಿದ್ಧವಾಗಿದ್ದಾನೆ. ಮಾಡಿಸಿದವರು ನಿಟ್ಟುಸಿರುಗರೆಯುತ್ತಿದ್ದಾರೆ, ವಿಚಿತ್ರವಲ್ಲವೆ ಪಟ್ಟಮಹಾದೇವಿಯವರೆ?

ಶಾಂತಲೆ : ವಿಚಿತ್ರವೇನು ಬಂತು ನನ್ನಪ್ಪಾ. ನಾನು ಜೈನಮತೀಯಳಾದರೂ ಕಲೆ ನನ್ನ ಸ್ವಧರ್ಮ. ಅದಕ್ಕೆ ನನಗೆ ದೇವಾಲಯ ನಿರ್ಮಾಣದಲ್ಲಿ ಇಷ್ಟು ಆಸಕ್ತಿ. ಸ್ಥಪತಿ, ರೂವಾರಿ ಇಬ್ಬರೂ ಕಲಾವಿದರು. ಅಂದರೆ ಕಲೆ ಅವರ ಸ್ವಧರ್ಮ. ಅಹಂಕಾರದಿಂದ ಒಬ್ಬ ತನ್ನ ಸ್ವಧರ್ಮವನ್ನ ಮಲಿನಗೊಳಿಸಿಕೊಂಡಿದ್ದಾನೆ. ಅದೇ ಇಬ್ಬರ ಜಗಳಕ್ಕೆ ಕಾರಣ.

ಗೊ.ಹುಡುಗ : ಸರಿಯಾಗಿ ಹೇಳಿದಿರಿ ತಾಯಿ. ಯಾರ ಸ್ವಧರ್ಮ ಮಲಿನವಾಗಿದೆ? ಯಾರದು ಶುದ್ಧವಾಗಿದೆ?

ಶಾಂತಲೆ : ಇದೆಲ್ಲ ನನಗೆ ಹ್ಯಾಗೆ ತಿಳಿದೀತಯ್ಯ? ಕೇಶವನೇ ತೋರಿಸುತ್ತಾನೆ ಇರು. ದೇವರು ಕೊಟ್ಟ ನಿರ್ಣಯ ಶತಮಾನಗಳಿಗೆ ಕೇಳಿಸುತ್ತದೆ. ಮನುಷ್ಯ ಕೊಟ್ಟ ನಿರ್ಣಯ ಹೆಚ್ಚೆಂದರೆ ಒಂದು ಗಂಟೆ ಮಾತ್ರ.

ಗೊ.ಹುಡುಗ : ಬಹಳ ದೊಡ್ಡ ಮಾತನ್ನು ಹೇಳಿದಿರಿ. ದೇವರಿಗೇ ದೇವರ ಜವಾಬ್ದಾರಿ ಹೇಳಿ ಎಚ್ಚರಿಸಿದಿರಿ. ತಾಯಿ!

## ದೃಶ್ಯ ಐದು

*(ಮಾರನೆ ಮುಂಜಾನೆ ಅದೇ ಸ್ಥಳ, ವಿಷ್ಣುವರ್ಧನ, ಶಾಂತಲೆಯರು ಪೀಠಸ್ಥರಾಗಿದ್ದಾರೆ. ಸುತ್ತ ಅವರ ಪರಿವಾರ. ಜಕ್ಕಣ ಡಂಕಣರು ಚೆನ್ನಕೇಶವನ ಮೂರ್ತಿಯ ಬಳಿ ನಿಂತಿದ್ದಾರೆ. ಮೂರ್ತಿಯ ಮೈತುಂಬ ಗಂಧ ಲೇಪಿಸಲಾಗಿದೆ. ಒಣಗಲೆಂದು ಎಲ್ಲರೂ ಕಾಯುತ್ತಿದ್ದಾರೆ.)*

ಮೇಳ : ಯಾಕೆ ಕುಂತಿದ್ದೀರಿ ಹೀಗೆ ಕೈ ಕಟ್ಟಿಕೊಂಡು, ಮೊಳಕಾಲುಗಳಲ್ಲಿ ತಲೆ ಹುದುಗಿಕೊಂಡು? ಹಿರೀಕರ್ಯಾಕೆ ಹಿರಿತನವ ಮಾಡುತ್ತಿಲ್ಲ? ಯಾಕೆ ಕುಂತಿದ್ದೀರಿ ಹೀಗೆ ಎದುರು ನೋಡದೆ ಆಸುಪಾಸಿನವರೊಂದಿಗೆ ಮಾತಾಡದೆ? ನಿಯಮಗಳು ಇವೆಯಣ್ಣ ಯಾವುದಕ್ಕೂ, ಮ್ಯಾಲೆ ಕೈಲಾಸಕೂ ಕೆಳಗೆ ಭೂಲೋಕಕೂ. ಅವನ್ನು ತಕ್ಕಡಿಯಲ್ಲಿಟ್ಟು ತೂಗಿ ಕೊಳೆತ ಆತ್ಮಗಳ, ಮುರಿದ

ಮನಸುಗಳ ಹೇಳಿಕೆ ಕೇಳಿಕೆ ಕೇಳಿಕೊಂಡು ನ್ಯಾಯ ನಿರ್ಣಯ ತಿಳಿಯಬ್ಯಾಡವೆ?
ಶಿಲೆಯೊಳಗಿನ ನಿಜವ ಎಬ್ಬಿಸಿರಯ್ಯಾ ನಂಬಿದವರ ಗತಿಯೇನೆಂದು ಅಂಜಿ ಆಲಸಿಯಾಗಿ ಮಲಗಿದರೆ ಕೇಳಿರಯ್ಯಾ-

ವಿಷ್ಣುವರ್ಧನ : ಯಾಕೆ ಆರೋಗ್ಯ ಸರಿಯಿಲ್ಲವೆ ದೇವಿ?

ಶಾಂತಲೆ : ಬೆಳ್ಳಂ ಬೆಳಗು ನಿದ್ರೆಯಿಲ್ಲ ಸ್ವಾಮಿ. ಎರಡು ಗಾಳಿಗಳು ಎದುರೆದುರೆ ಅಪ್ಪಳಿಸಿ ಸುಂಟರಗಾಳಿಯಾಗಿ ಸುತ್ತಿ, ಕೇಶವನ ಕಲ್ಲಿನ ಕಣ್ಣಿನಲ್ಲಿ ಮಿಂಚಿನ ಬೆಳಕಾಡಿದಂತೆ ಕನಸಾಯಿತು.

ವಿಷ್ಣುವರ್ಧನ : ಕನಸು ಚೆನ್ನಾಗಿದೆಯಲ್ಲ? ಕೇಶವನ ಕಣ್ಣಿನ ಬೆಳಕಿನಲ್ಲಿ ಸತ್ಯವಾದದ್ದು ಕಂಡೇ ಕಾಣುತ್ತದೆ, ಚಿಂತೆ ಬೇಡ.
ಗಂಧದ ಲೇಪನ ಬಹುಭಾಗ ಒಣಗಿದೆ. ಇನ್ನೊಂದು ಗಳಿಗೆಯಲ್ಲಿ ಪೂರ್ತಿ ಒಣಗಬಹುದು. ಆಮೇಲೇನು ರೂವಾರಿಗಳೆ?

ಡಂಕಣ : ಮಹಾಪ್ರಭು, ಮೂರ್ತಿಯ ಒಳಗೆ ದೋಷವಿದ್ದರೆ ಅಷ್ಟು ಭಾಗ ಒಣಗುವುದಿಲ್ಲ. ಪರೀಕ್ಷೆಯ ನಿರ್ಣಯವನ್ನು ಮೂರ್ತಿಯೇ ನಮಗೆ ನೀಡುತ್ತದೆ.

ವಿಷ್ಣುವರ್ಧನ : ಆಯ್ತು, ವಿಗ್ರಹದ ಕೊಂಚ ಭಾಗ ಒಣಗುವುದಿಲ್ಲ ಅಂತ ಅಂದುಕೊಳ್ಳೋಣ. ಅಂದರೆ ಮೂರ್ತಿ ಅಶುದ್ಧವೆಂದಾಯಿತು ಅಲ್ಲವೆ?

ಡಂಕಣ : ಹೌದು ಮಹಾಪ್ರಭು.

ವಿಷ್ಣುವರ್ಧನ : ಮೂರ್ತಿಯ ಅಷ್ಟು ಭಾಗ ಒದ್ದೆಯಾಗಿರಲು ಏನು ಕಾರಣ ಎಂದು ನೋಡಬೇಡವೆ?

ಡಂಕಣ : ಅದು ಸ್ಥಪತಿಗಳಿಗೂ ತಮಗೂ ಬಿಟ್ಟ ವಿಚಾರ.

ವಿಷ್ಣುವರ್ಧನ : ಒದ್ದೆಯಾಗುಳಿದ ಮೇಲೆ ಅಷ್ಟು ಭಾಗ ಒಡೆದರೂ ಅಷ್ಟೇ, ಬಿಟ್ಟರೂ ಅಷ್ಟೇ, ಆ ಮೂರ್ತಿ ಪೂಜೆಗೆ ಅರ್ಹವವಾಗುವುದಿಲ್ಲ. ಅಲ್ಲವೆ ಸ್ಥಪತಿಗಳೆ?

ಜಕ್ಕಣ : ಹೌದು ಮಹಾಪ್ರಭು.

ವಿಷ್ಣುವರ್ಧನ : ನಿಮ್ಮ ಪರೀಕ್ಷೆ ಮುಗಿದ ಮೇಲೆ ನಮ್ಮ ಪರೀಕ್ಷೆ ಸುರುವಾಗುವುದಲ್ಲ? ಅದಕ್ಕೇನು ಪರಿಹಾರ?

ಶಾಂತಲೆ : ಹೌದು. ಪರೀಕ್ಷೆಯಲ್ಲಿ ಒಬ್ಬರು ಸೋಲುತ್ತಾರೆ, ಒಬ್ಬರು ಗೆಲ್ಲುತ್ತಾರೆ, ಇಬ್ಬರೂ ಚೆನ್ನಕೇಶವನ ನಿರ್ಣಯವನ್ನು ಒಪ್ಪಿಕೊಂಡು ಮುನ್ನಡೆಯುವುದು ಜಾಣತನ. ಸೋಲಿನ ಸೇಡು ಉಳಿಯಬಾರದು.

ವಿಷ್ಣುವರ್ಧನ : ದೇವೀ, ಅದರ ಚಿಂತೆ ನನಗಿರಲಿ. ನಿರ್ಣಯವನ್ನು ಮೂರ್ತಿ ಕೊಡುತ್ತದಾದರೂ ಅದಕ್ಕೆ ಮಾತು ಕೊಡುವವರು ನಾವು. ಅದನ್ನು ಸಾರುವವರೂ ನಾವೇ! ನಾವು ಕೇಳುವುದಿಷ್ಟು; ನಿರ್ಣಯ ಏನು ಬೇಕಾದರು ಬರಲಿ; ಈ ಮೂರ್ತಿ ಶುದ್ಧವಾಗಿದೆಯೆಂದೇ ನಂಬಿ ನಾವಾಗಲೇ ಅದರ ಪ್ರತಿಷ್ಠಾಪನೆಗೆ ದಿನ, ಗಳಿಗೆ, ಮುಹೂರ್ತಗಳನ್ನು ನಿರ್ಣಯಿಸಿದ್ದೇವೆ. ಆ ದಿನ ಅದನ್ನು ನೋಡಲು ನೆರೆ ರಾಜ್ಯದ ಗಣ್ಯರನ್ನು ಆಮಂತ್ರಿಸಿದ್ದೇವೆ. ಇಂತಿರುವಾಗ ಮೂರ್ತಿ ಭಿನ್ನವಾದರೆ ಮುಹೂರ್ತ ನಿರ್ಣಯಕ್ಕೇನು ಮಾಡೋಣ? ಅಂದರೆ ನಾವು ನಿರ್ಣಯಿಸಿದ ಮುಹೂರ್ತಕ್ಕೆ ಸರಿಯಾಗಿ ಇನ್ನೊಂದು ಹೊಸ ಮೂರ್ತಿಯ ನಿರ್ಮಾಣವಾಗಬೇಕು; ಅದಕ್ಕೆ ನೀವಿಬ್ಬರೂ ಹೊಣೆ. ಅಂದರೆ ಪ್ರತಿಮೆ ಒಡೆದ ಮೇಲೂ ಮುಹೂರ್ತಕ್ಕೆ ಸರಿಯಾಗಿ ಹೊಸ ಮೂರ್ತಿ ಸಿದ್ಧವಾಗುವ ತನಕ ನಿಮ್ಮ ಪರೀಕ್ಷೆ ಇದೆ ಎಂಬುದು ನೆನಪಿರಲಿ.

ಜಕ್ಕಣ : ಅದಕ್ಕೆ ನಾವಿಬ್ಬರೂ ಬದ್ಧರಾಗಿದ್ದೇವೆ ಮಹಾಪ್ರಭು.

ಡಂಕಣ : ಹೌದು ಮಹಾಪ್ರಭು.

ವಿಷ್ಣುವರ್ಧನ : ಹಾಗಾದರೆ ಸರಿ.

*(ಮೂರ್ತಿಯ ಬಹುಭಾಗ ಒಣಗಿ ತೊಡೆದು ಹತ್ತಿರ ಒಣಗಿಲ್ಲ.)*

ಡಂಕಣ : ಮಹಾಪ್ರಭು, ತೊಡೆಯ ಭಾಗದಲ್ಲಿ ಹಸಿ ಉಳಿದಿದೆ. ಇನ್ನೂ ಸ್ವಲ್ಪ ಹೊತ್ತು ಕಾಯೋಣ.

ಜಕ್ಕಣ : ಅಗತ್ಯವಿಲ್ಲ ಮಹಾಪ್ರಭು. ದೋಷವಿದ್ದದ್ದು ನಿಜ, ಆದರೆ ಅದು ಏನೆಂದು ತಿಳಿಯಬೇಕು. ಅಪ್ಪಣೆಯಾದರೆ ನಾನೇ ಅಲ್ಲಿ ಒಡೆದು ನೋಡಲೆ?

ವಿಷ್ಣುವರ್ಧನ : ಸ್ಥಪತಿಗಳ ದುಡಕಬಾರದು. ಇನ್ನೂ ಸ್ವಲ್ಪ ಹೊತ್ತು ಕಾಯೋಣ. ಚೈತ್ರಮಾಸದ ಬಿಸಿಲು ಕಾಯುತ್ತಿದೆ. ಈಗ ಒಣಗಿದರೂ ಒಣಗಬಹುದು. ಸಮಾಧಾನವಿರಲಿ.

ಜಕ್ಕಣ : ಅಸಹನೆಯಿಂದ ನನ್ನ ತಲೆ ಕಾಯುತ್ತಿದೆ ಪ್ರಭು, ನಾನೇ ನೋಡುತ್ತೇನೆ.
*(ಜಕ್ಕಣ ಸಣ್ಣ ಸುತ್ತಿಗೆಯಿಂದ ಒದ್ದೆಯಿದ್ದಲ್ಲಿ ಹೊಡೆಯುತ್ತಾನೆ. ಮೂರ್ತಿಯ ಶಿಲೆಯ ತುಂಡೊಂದು ಹಾರುತ್ತದೆ. ಒಳಗೆ ಹಿಡಿ ಮರಳು, ನೀರು ಮತ್ತು ಒಂದು ಕಪ್ಪೆ ಕಾಣತ್ತದೆ. ಕಪ್ಪೆ ಜಿಗಿದು ಹೊರಬರುತ್ತದೆ. ಎಲ್ಲರೂ ಮಂತ್ರಮುಗ್ಧರಾಗುತ್ತಾರೆ.)*

ಜಕ್ಕಣ : ಪರೀಕ್ಷೆ ಮುಗಿಯಿತು. ನಾನು ಸೋತೆ ಪ್ರಭು, ತಾವು ನಿರ್ಣಯ ಹೇಳಬಹುದು.

ವಿಷ್ಣುವರ್ಧನ : ನಿರ್ಣಯ ಕಣ್ಣೆದುರಿಗೇ ಇದೆ ಸ್ಥಪತಿಗಳೇ. ಮುಂದಿನದನ್ನು ಪಟ್ಟಮಹಾದೇವಿಯವರು ಹೇಳುತ್ತಾರೆ. ಅವರಿಗೆ ಶಿಲ್ಪಶಾಸ್ತ್ರವೂ ಗೊತ್ತು; ಮನುಷ್ಯ ವ್ಯಕ್ತಿತ್ವದ ಶಿಲ್ಪವು ಗೊತ್ತು; ಎರಡರ ಅಂತರಂಗ ಬಹಿರಂಗಗಳೂ ಗೊತ್ತು. ಮುಂದಿನ ಕ್ರಮವನ್ನು ಅವರೇ ಹೇಳಲಿ.

ಶಾಂತಲೆ : ಯುವ ರೂವಾರಿ ಗೆದ್ದ. ಆದರೆ ಇಬ್ಬರ ಪರೀಕ್ಷೆ ಮುಗಿಯುವುದು ಮುಹೂರ್ತದ ಒಳಗೆ ಚೆನ್ನಕೇಶವನ ಇನ್ನೊಂದು ಮೂರ್ತಿ ಸಿದ್ಧವಾದಾಗ. ಆದರೆ ಒಂದು ಮಾತು ರೂವಾರಿ. ನಿನ್ನ ಹೆಸರು ಗೊತ್ತಿಲ್ಲ ನಿಜ. ಆದರೆ ನಮ್ಮ ಬೇಹುಗಾರರು ನಿನ್ನೆಯಿಂದ ಕೆಲವು ಸಂಗತಿಗಳನ್ನು ಸಂಗ್ರಹಿಸಿ ಹೇಳಿದ್ದಾರೆ. ನಿನ್ನ ಹೆಸರು ಡಂಕಣ. ನಿನ್ನ ಊರು ಕ್ರೀಡಾಪುರ, ನೀನೀಗ ಒಂದು ವರ್ಷದಿಂದ ಕಳೆದುಕೊಂಡ ತಂದೆಯನ್ನು ಹುಡುಕುತ್ತ ಮೊನ್ನೆಯಷ್ಟೇ ಇಲ್ಲಿಗೆ ಬಂದೆ. ಇದೆಲ್ಲ ನಿಜ ತಾನೆ?

ಡಂಕಣ : *(ತಲೆ ತಗ್ಗಿಸಿ)* ಹೌದು ಪಟ್ಟಮಹಾದೇವಿಯವರೆ.

ಜಕ್ಕಣ : ನೀನು ಕ್ರೀಡಾಪುರದವನೆ?

ಡಂಕಣ : ಹೌದು ಸ್ಥಪತಿಗಳೆ. ನಾನು ಕ್ರೀಡಾಪುರದಲ್ಲಿ ಹುಟ್ಟಿ ಬೆಳೆದವನು.

ಶಾಂತಲೆ : ರೇವಿಮಯ್ಯ ನೀನು ತಂದ ಸುದ್ದಿಯನ್ನು ಹೇಳು.

ರೇವಿಮಯ್ಯ : ನಾನು ಈಗೊಂದು ವರ್ಷದ ಹಿಂದೆ ಕ್ರೀಡಾಪುರಕ್ಕೆ ಹೋಗಿದ್ದೆ. ಅಲ್ಲಿ ರೂವಾರಿ ಡಂಕಣನ ತಾಯಿ ಸಿಕ್ಕಳು. ತನ್ನ ಮಗ ಡಂಕಣ ರೂವಾರಿತನದಲ್ಲಿ ಜನ್ಮಜಾತ ಪ್ರತಿಭೆಯುಳ್ಳವನೆಂದು ಹೆಮ್ಮೆಯಿಂದ ಹೇಳಿದ್ದಳು. ಆಮೇಲೆ ನಾನು ಗೌಂಡರನ್ನು ಕರೆಸಿ ವಿಚಾರಸಿದೆ. ತಾಯಿ ಹೇಳಿದಿದ್ದುದನ್ನು ಗೌಂಡರು ಹೇಳಿದರು. ಡಂಕಣನ್ನು ಅವರು ಬಾಲ್ಯದಿಂದ ಬಲ್ಲವರಂತೆ. ತಂದೆಯಂತೆಯೇ ಇವನೂ ಪ್ರತಿಭಾವಂತ ಎಂದರು. ವಯಸ್ಸಿಗೆ ಬಂದ ಮೇಲೆ ಡಂಕಣ ತನ್ನ ತಂದೆಯಲ್ಲಿ ಎಂದು ತಾಯಿಯನ್ನು ಪೀಡಿಸಿದನಂತೆ. ಡಂಕಣ ಹುಟ್ಟಿದಾಗಲೇ ಮನೆ ಬಿಟ್ಟು ಹೋದ ತಂದೆ ಹಿಂದಿರುಗಿ ಬಂದಿಲ್ಲವೆಂದು ಹೇಳಿದಳಂತೆ. ಈಗೊಂದು ವಾರದ ಹಿಂದೆ ಹೋಗಿದ್ದೆ. ಮನೆಯಲ್ಲಿ ಯಾರು ಇರಲಿಲ್ಲ. ಡಂಕಣ ತಂದೆಯನ್ನು ಹುಡುಕಿಕೊಂಡು ಹೋಗಿ ಆಗಲೇ ವರ್ಷವಾಯಿತು ಎಂದರು ನೆರೆಹೊರೆಯವರು. ಮಗ ಬಾರದ ದುಃಖದಲ್ಲಿ ಈಗೊಂದು ತಿಂಗಳ ಹಿಂದೆ ತಾಯಿಯೂ ತೌರಿನ ಕಡೆಗೆ ಹೋದಳಂತೆ.

ಶಾಂತಲೆ : ತಂದೆ ಯಾರೆಂದು ಹೆಸರು ಕೇಳಿದೆಯ?

ರೇವಿಮಯ್ಯ : ಕೇಳಿದೆ ಪಟ್ಟ ಮಹಾದೇವಿಯವರೆ. *(ಜಕ್ಕಣನ ಕಡೆಗೆ ನೋಡುತ್ತ)* ಅವರ ಹೆಸರು ಜಕ್ಕಣನಂತೆ.

ಜಕ್ಕಣ : ಒಂದೇ ಹೆಸರಿನವರು ಹಲವಾರು ಜನರಿರಬಹುದು

ಡಂಕಣ : ದಕ್ಷಿಣಕ್ಕೆಲ್ಲ ಜಕ್ಕಣಾಚಾರಿ ಒಬ್ಬನೇ ಅಂದಿರಿ!

ಜಕ್ಕಣ : ವಿಶೇಷವಾಗಿ ಒಬ್ಬನೆ ಅಂದೆ. ಆದರೆ ಒಂದೇ ಹೆಸರಿನವರು ಹಲವರು ಇರುವುದು ಸಾಧ್ಯ; ಅಲ್ಲವೆ?

ಶಾಂತಲೆ : ನಿಮಗೆ ಹಾಗನಿಸಿತೆ ಸ್ಥಪತಿಗಳೆ? ನಿಮ್ಮ ಹೆಸರನ್ನು ನೀವು ಈವರೆಗೆ ಹೇಳಿಲಿಲ್ಲ. ನಾವೂ ಆ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ ಈಗ ನಾನೊಂದು ಮಾತು ಕೇಳುತ್ತೇನೆ. ರಾಜ್ಯದ ಹಿತ ದೃಷ್ಟಿಯಿಂದ ಹೇಳಿ; ನೀವು ಮನೆ ಬಿಟ್ಟು ಬಂದಿರಂತೆ. ಅದು ಸ್ವಂತದ ವಿಷಯ ಕೇಳಬೇಡಿ ಎಂದು ನಿರ್ಬಂಧ ಹಾಕಿದಿರಿ. ಈಗ ದಯವಿಟ್ಟು ಹೇಳಿರಿ; ನೀವು ಮನೆ ಬಿಟ್ಟು ಬಂದದ್ದು ಯಾಕೆ?

ಜಕ್ಕಣ : ನಾನು ಮೊದಲೇ ಹೇಳಿದ್ದೇನೆ ಮಹಾದೇವಿಯವರೇ, ಅದು ನನ್ನ ಸ್ವಂತ ವಿಷಯ, ಹೇಳುವಂತಿಲ್ಲ. ಅಲ್ಲದೆ ರಾಜ್ಯದ ಹಿತಕ್ಕೂ ಇದಕ್ಕೂ ಸಂಬಂಧವಿಲ್ಲ. ದಯಮಾಡಿ ನಿರ್ಬಂಧಪಡಿಸಿಬಾರದು.

ವಿಷ್ಣುವರ್ಧನ : ಸಂಬಂಧವಿದೆ ಸ್ಥಪತಿಗಳೇ. ರಾಜ್ಯದವೆಂದರೆ ಶತ್ರುಗಳನ್ನು ಗೆದ್ದು ಬರೀ ಬೊಕ್ಕಸ ತುಂಬಿಕೊಳ್ಳುವುದಲ್ಲ, ರಾಜ್ಯದ ಸೀಮೆಯ ವಿಸ್ತಾರವು ಅಲ್ಲ, ವೈಭವ ಪ್ರದರ್ಶನವು ಅಲ್ಲ. ಪ್ರಜೆಗಳನ್ನು ನೆಮ್ಮದಿಯಿಂದ ಇಡುವುದೇ ರಾಜ್ಯ.

ಶಾಂತಲೆ : ಸ್ಥಪತಿಗಳೇ. ನಮ್ಮ ರೇವಿಮಯ್ಯ ತಂದಿರುವ ಬೇಹು ನಿನ್ನೆ ಮೊನ್ನೆಯದಲ್ಲ. ನೀವು ದೇವಸ್ಥಾನದ ಸ್ಥಾಪತ್ಯವನ್ನು ಒಪ್ಪಿಕೊಂಡಾಗಲೇ ಪ್ರಾರಂಭವಾಗಿದೆ. ನಿಮ್ಮ ಪ್ರತಿಭೇ ಅಗಾಧವಾದದ್ದು. ಅದನ್ನು ನಾವು ಮೆಚ್ಚಿಕೊಂಡಾಗಲೆ ವಿಷಯ ಸಂಗ್ರಹಣೆ ಮಾಡಿದೆವು. ನೀವು ಕ್ರೀಡಾಪುರದವರೆಂದು ಅಂದೇ ಗೊತ್ತಾಗಿತ್ತು. ಮಗ ಹುಟ್ಟಿದಾಗ ಜಾತಕದ ಶಾಸ್ತ್ರ ನೋಡಿ, ಹುಟ್ಟಿದವನು ನನ್ನ ಮಗನಲ್ಲವೆಂದು ನಂಬಿ ಮನೆ ಬಿಟ್ಟು ಹೋದಿರಿ. ಆಮೇಲೆ ತಂದೆ ಮಗ ಭೇಟಿಯಾದದ್ದು ನಿನ್ನೆಯೇ. ಮುಖಚರ್ಯ ನೋಡಿದಾಗಲೇ ರೂವಾರಿ ನಿಮ್ಮ ಮಗನಿರಬೇಕೆಂದು ಅನುಮಾನವಾಯಿತು. ನಿಮ್ಮ ಮಗ ನಿಮ್ಮಂತೆಯೇ ಪ್ರಭಾವಶಾಲಿ. ಅವನು ನಿಮ್ಮನ್ನು ಹುಡುಕುತ್ತ ಚೆನ್ನಕೇಶವನ ದಯೆಯಿಂದ ಇಲ್ಲಿಗೆ ಬಂದ. ಡಂಕಣ ನಿಮ್ಮ ಮಗ, ಒಪ್ಪಿಕೊಳ್ಳಿ.

ಜಕ್ಕಣ : ನಾನು ಹಾಕಿದ ಜಾತಕ ಶಾಸ್ತ್ರ ಸುಳ್ಳಾಯಿತಲ್ಲ... ಎಂದು.....

ಶಾಂತಲೆ : ಅದು ಸುಳ್ಳು ಎಂದು ನಮಗಾಗಲೇ ತಿಳಿದಿತ್ತು. ನಿಮ್ಮನ್ನು ಅವಮಾನಿಸಬಾರದೆಂದು ಸುಮ್ಮನಿದ್ದೆವು. ನೀವು ನಮ್ಮ ಪ್ರಜೆ ಹೌದು. ಕ್ರೀಡಾಪುರ ನಮ್ಮ ರಾಜ್ಯದಲ್ಲಿದೆ. ಆದರೆ ನೀವು ಸಾಮಾನ್ಯ ಪ್ರಜೆಯಲ್ಲ. ನಿಮ್ಮ ಪ್ರತಿಭೆ ರಾಜ್ಯಕ್ಕಿಂತ ಹೆಚ್ಚು ಬೆಲೆಯುಳ್ಳದ್ದು. ಆದ್ದರಿಂದ ಕಾಲ ಕೂಡಿ ಬರುವವರೆಗೆ ಸುಮ್ಮನಿರಬೇಕಾಯಿತು.

ಜಕ್ಕಣ : ಈ ಯುವಕನ ಪ್ರತಿಭೆ ಅಸಾಮಾನ್ಯವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಹಾಕಿದ ಜಾತಕದ ಶಾಸ್ತ್ರ ಸುಳ್ಳಾಯಿತೆಂಬ ಬಗ್ಗೆ ನನಗಿನ್ನೂ
ಅನುಮಾನವಿದೆ. *(ಗೊಲ್ಲರ ಹುಡುಗ ಬರುವನು. ಅವನ ಹಿಂದೆ ಹುಚ್ಚಿಯೂ ಬರುತ್ತಾಳೆ. ಹುಡುಗ ಹುಚ್ಚಿಯನ್ನು ತೋರಿಸಿ.)*

ಗೊ.ಹುಡುಗ : ಈಕೆ ಯಾರು ಗೊತ್ತೇ ಸ್ಥಪತಿಗಳೇ?
*(ಹುಚ್ಚಿಯನ್ನು ನೋಡಿ ಜಕ್ಕಣನಿಗೆ ಈಕೆ ತನ್ನ ಮಡದಿಯೆಂದು ಗುರುತಾಗಿ ಆಘಾತವಾಗುತ್ತದೆ. ಆದರೆ ಗೊಲ್ಲರ ಹುಡುಗನನ್ನು ಶಂಕಿಸುತ್ತಾನೆ.)*

ಜಕ್ಕಣ : ನಿಜ ಹೇಳು ಯಾರು ನೀನು?

ಗೊ.ಹುಡುಗ: ನಾನು ನಿಮ್ಮ ಹಿತಚಿಂತಕನೆಂದು ಸಾರಿ ಹೇಳುತ್ತೇನೆ, ಸ್ಥಪತಿಗಳೆ. ನಿಮ್ಮ ಪ್ರತಿಭೆಗೆ ಮನಸೋತವನು ನಾನು. ನೀವೊಂದು ದೇವರ ಪ್ರತಿಭೆ ಮಾಡುತ್ತೇನೆಂದರೆ ಸ್ವಯಂ ಆ ದೇವರೇ ಬಂದು ನಿಮ್ಮೆದುರಿಗೆ ರೂಪದರ್ಶಿಯಾಗಿ ನಿಲ್ಲುವನೆಂದರೆ ಸಾಮಾನ್ಯ ಮಾತೇ ಇದು? ಆದರೆ ಒಂದು ತಿಂಗಳು ನಿಮ್ಮೆದುರು ನಾನು ನಿಂತರೂ ನಿಮಗೆ ನನ್ನ ಗುರುತಿಲ್ಲ! ಭೇಟಿಯಾದಾಗೊಮ್ಮೆ ಯಾರು ನೀನು ಅಂತೀರಿ! ಹೋಗಲಿ, ನಿಮಗೆ ಜೋತುಬಿದ್ದ ಹೆಂಗರುಳೊಂದು ನಿಮಗಾಗಿ ತನ್ನೆಲ್ಲ ನಿಟ್ಟುಸಿರುಗಳನ್ನು ವ್ಯಯಮಾಡುತ್ತಿರುವುದು ನಿಮಗೆ ಗೊತ್ತೇನು? ಈ ಹುಚ್ಚಿ ಒಂದು ತಿಂಗಳಿಂದ ನೀವೇ ಕಟ್ಟಿದ ದೇವಾಲಯದ ಗರ್ಭಗುಡಿಯೆದುರು ಗುನುಗುತ್ತ ಬಿಕ್ಕಿದು ನಿಮಗೆ ಕೇಳಿಸಿಲ್ಲ. ನೀವು ಒಂದೊಂದು ಸ್ತ್ರೀ ವಿಗ್ರಹವನ್ನು ತೊಡೆಯ ಮೇಲಿಟ್ಟುಕೊಂಡು ನಯವಾಗಿಸುವಾಗಲೂ ಈ ತಾಯಿ ಮತ್ಸರದಿಂದ ಸವುತೇ ಎಂದು ಲಟಿಕೆ ಮುರಿಯುವುದು ನಿಮಗೆ ಕಾಣಲಿಲ್ಲ. ಪಕ್ಕದಲ್ಲಿದ್ದ ಸತಿ ಸುತರನ್ನು ಗುರುತಿಸದವರು ಇನ್ನು ಈ ಸಾಮಾನ್ಯ ಗೊಲ್ಲರ ಹುಡುಗನನ್ನು ಗುರುತಿಸಬಹುದೆ ಸ್ಥಪತಿಗಳೆ?, ಮಣ್ಣು ರಸಾಯನವಾಗಿ ಕಲ್ಲಾಗಿ ಎಷ್ಟು ವರ್ಷಗಳಾದುವೋ! ಆ ಕಲ್ಲಿನಲ್ಲಿದ್ದ ಕಪ್ಪೆ ನೀರು ಮಳಲು ಅಂದಿನಿಂದ ಇಂದಿನವರೆಗೆ ನಿಮ್ಮ ಪ್ರಶ್ನೆಯ ಮೂಲಕ ಈಗದರ ಅಭಿವ್ಯಕ್ತಿಯ ಕಾಲ ಕೂಡಿ ಬಂತು. ಈ ಪ್ರಶ್ನೆ ಕೇಳುವ ಅರ್ಹತೆ ಕೊಟ್ಟವಳು ಈ ತಾಯಿ ಭವಾನಿ ಮತ್ತು ಈ ನಿಮ್ಮ ಮಗ ಡಂಕಣ! ನಿಮ್ಮ ಕಾರಣ ಶಕ್ತಿಯನ್ನು ದೇವರೇ ಕಾಪಾಡಬೇಕು. ಬರ್ತೀನಿ…

*(ಗೊಲ್ಲರ ಹುಡುಗ ಮೇಲಿನ ಮಾತುಗಳನ್ನು ಹೇಳುತ್ತಿರುವಂತೆ ಜಕ್ಕಣನಿಗೆ ಹುಡುಗನ ಪರಿಚಯ ಹೆಚ್ಚಾಗುತ್ತ ಹೋಗುತ್ತದೆ. ಒಂದೊಂದೇ ಹೆಜ್ಜೆ ಹುಡುಗನತ್ತ ಹಾಕುತ್ತ ಬಂದು.)*

ಜಕ್ಕಣ : ನಿಲ್ಲು!
*(ಹೊರಟ್ಟಿದ್ದ ಹುಡುಗ ನಿಂತುಕೊಳ್ಳುತ್ತಾನೆ. ಜಕ್ಕಣ ಅವನ ಮುಂದೆ ಕೈಮುಗಿದು ಕುಸಿದು ಕೂತು.)*

ಕೊನೆಗೂ ಕಾರಣ ಶಕ್ತಿಯನ್ನು ದಯಪಾಲಿಸಿದ ಚೆನ್ನಕೇಶವಾ, ತಂದೇ ನನಗೆ ನಿನ್ನ ಗುರುತೂ ಸಿಕ್ಕಲಾರದಾಯಿತೆ! ನಾನೊಬ್ಬ ಶಪಿತ ನಿಶಾಚಾರನಾಗಿದ್ದೆ ಕೇಶವಾ, ಹೆಣ್ಣಿನ ಪ್ರತಿಷ್ಠೆ ಗೌರವಗಳನ್ನು ನೋಯಿಸಿದವನು. ಡಂಕಣನನ್ನು ನೋಡಿ ನನ್ನ ಯೌವನ ನೆನಪಾಯಿತು : ನಾನು ಹುಡುಗನಾಗಿ ಮೂರ್ತಿಗಳ ಕಡೆಯುವಾಗ ಹಿಟ್ಟಿನ ಮುದ್ದೆ ಹುರುಳೀ ಕಾಳಿನ ಸಾರು ತಗೊಂಡು ನಾನಿದ್ದಲ್ಲಿಗೆ ಬರುತ್ತಿದ್ದಳು ಈ ನನ್ನ ಸತಿ ಭವಾನಿ! ನಮ್ಮ ಪ್ರೀತಿಗೆ ಬಿಟ್ಟ ಕುಡಿಯ ಜಾತಕ ನೋಡಿ ಚಿತ್ತ ಭ್ರಮಣೆಯಾಯ್ತು ನನಗೆ. ಶಾಸ್ತ್ರವ ನಂಬಿ ನನ್ನದಲ್ಲದ ಪಿಂಡಕ್ಕೆ ನಾ ಯಾಕೆ ತಂದೆಯಾಗಬೇಕೆಂದು ಅನುಮಾನಕ್ಕೆ ಆತ್ಮವ ಅಡವಿಟ್ಟು ಮಡದಿ ನುಡಿದ ನುಡಿ ತಪ್ಪೆಂದು ನಡೆದ ನಡೆ ತಪ್ಪೆಂದು ಮುಳ್ಳಿರುವ ಮಾತುಗಳನಾಡಿ ಚಕಿತಚಿತ್ತಳ ಬಿಟ್ಟು ದಾಟಿ ಬಂದೆ. ನನ್ನ ಭವಾನಿಯ ಆತ್ಮದ ಮ್ಯಾಲೆ ಅತ್ಯಾಚಾರ ಮಾಡಿ ಬಂದೆ ಕೇಶವಾ, ಚೆನ್ನಕೇಶವಾ ನನ್ನ ಕ್ಷಮಿಸು ತಂದೇ!
*(ಹುಡುಗನ ಕಾಲು ಹಿಡಿಯಲು ಹೋಗುವನು. ಗೊಲ್ಲರ ಹುಡುಗ ಮಾಯವಾಗುವನು)*

ಚೆನ್ನಕೇಶವಾ, ನನ್ನನ್ನು ಪುನರ್ಜಾತನ ಮಾಡಿ ಮಾಯಾವಾದಿರಾ ತಂದೇ! ಭವಾನೀ, ಡಂಕಣಾ ಕ್ಷಮಿಸಬೇಕಾದ ಚೆನ್ನಕೇಶವ ಮಾಯವಾದ, ನೀನಾದರೂ ನನ್ನನ್ನು ಕ್ಷಮಿಸಿಯಪ್ಪಾ……
*(ಡಂಕಣ, ಭವಾನಿ, ಜಕ್ಕಣ ಪರಸ್ಪರ ತಬ್ಬಿಕೊಳ್ಳುವರು)*

ಮಗನೇ ಡಂಕಣಾ, ನಿನ್ನೆದುರು ಸೋತು ಧನ್ಯನಾದೆನಪ್ಪಾ! ಮಹಾಪ್ರಭು, ಪಟ್ಟಮಹಾದೇವಿಯವರೇ ನನ್ನನ್ನು ಕ್ಷಮಿಸಿ.

ವಿಷ್ಣುವರ್ಧನ : ನಮಗೆ, ಇಡೀ ರಾಜ್ಯಕ್ಕೆ ಇದಕ್ಕಿಂತ ಸಂತೋಷದ ಗಳಿಗೆ ಯಾವುದಿದೆ ಸ್ಥಪತಿಗಳೆ? ನಾವೇ ಧನ್ಯರು; ನಮ್ಮ ರಾಜ್ಯವೇ ಧನ್ಯವಾಯಿತು! ಸ್ವಯಂ ಚೆನ್ನಕೇಶವನೇ ಪ್ರತ್ಯಕ್ಷನಾಗಿ ನಮ್ಮನ್ನು ಧನ್ಯನಾಗಿಸಿದ. ಇದಕ್ಕೆಲ್ಲ ನೀವು ಕಾರಣರು ಸ್ಥಪತಿಗಳೇ. ಇಡೀ ರಾಜ್ಯ ನಿಮಗೆ ಅಭಾರಿಯಾಗಿದೆ.

ಜಕ್ಕಣ : ಆದರೆ ಅಖಂಡ ಕಲ್ಲಿನಲ್ಲಿ ಕಪ್ಪೆ, ನೀರು, ಮಳಲು- ಈ ರೂಪಕದ ಅರ್ಥ ಹಾಗೇ ಉಳಿಯಿತಲ್ಲ ಪಟ್ಟ ಮಹಾದೇವಿಯವರೆ?

ಶಾಂತಲೆ : ನಮ್ಮ ನಮ್ಮ ಕಲೆಗಳ ಮೂಲಕ ಚೆನ್ನಕೇಶವನ ಆ ರೂಪಕದ ಅರ್ಥವನ್ನು ಶೋಧಿಸಬೇಕು ಸ್ಥಪತಿಗಳೆ. ಮುಹೂರ್ತಕ್ಕೆ ಸರಿಯಾಗಿ ಹೊಸ ಮೂರ್ತಿ ಸಿದ್ಧವಾಗಬೇಕಲ್ಲವೆ? ಶೋಧನೆಯನ್ನು ಸುರು ಮಾಡಿ.

## ಹಳವಂಡಗಳು

*(ಬೆಂಗಳೂರಿನಂಥ ನಗರದಲ್ಲಿಯ ಒಂದು ಮಧ್ಯಮವರ್ಗದ ಮನೆ. ಚಿಕ್ಕ ಹಾಲು, ಹೊರಗಡೆ ತುಸು ಹೊತ್ತಿನಲ್ಲಿಯೇ ಸೂರ್ಯೋದಯವಾಗಬೇಕಷ್ಟೆ. ಶಿವಣ್ಣ ವಯಸ್ಸು ಮೂವತ್ತು- ಯಾವುದೋ ಆಫೀಸಿನಲ್ಲಿ ಜವಾಬ್ದಾರಿಯ ಸ್ಥಾನದಲ್ಲಿದ್ದಾನೆಂದು ನೋಡಿದೊಡನೆ ಹೊಳೆಯುತ್ತದೆ. ದಿನಪತ್ರಿಕೆಗಾಗಿ ಕಾಯುತ್ತಿದ್ದಾನೆ. ಹಾಲಿಗಂಟಿ ಬೆಡ್‌ರೂಮಿದ್ದು ಅದರ ಬಾಗಿಲು ಮಾತ್ರ ಕಾಣುತ್ತಿದೆ. ಒಳಗೆ ಲೈಟಿದೆ. ಹೆಂಡತಿ ಪಾರ್ವತಿ ಒಳಗಿದ್ದಾಳೆ. ಮುಂದೆ ರಂಗದ ಮೇಲೆ ಪ್ರವೇಶವಾಗುವವರೆಗೆ ಅವಳ ಮಾತುಗಳು ಈ ರೂಮಿನಿಂದಲೇ ಬರುತ್ತವೆ. ಅಡುಗೆ ಮನೆಯನ್ನು ಸೂಚಿಸುವ ಇನ್ನೊಂದು ಬಾಗಿಲು ಇದೆ. ಅಲ್ಲಿ ಬೆಳಕಿಲ್ಲ.)*

ಶಿವಣ್ಣ : ಇನ್ನೂ ಕಾಫಿ ಆಗಿಲ್ಲವೇನೆ?

ಪಾರ್ವತಿ : *(ಒಳಗಿನಿಂದ)* ಹಾಲಿನ್ನೂ ಬಂದಿಲ್ಲ. ಬಂದಿದ್ದರೆ ಕಾಫೀ ಕೊಡ್ತ ಇರಲಿಲ್ಲವ?

ಶಿವಣ್ಣ : ಏನೇ ಹುಡುಗಿ, ಸಂಸಾರ ಹೂಡಿ ಇನ್ನೂ ಆರುತಿಂಗಳಾಗಿಲ್ಲ, ಆಗಲೇ ಗಂಡನ ಮೇಲೆ ಜೋರು ಮಾಡ್ತೀಯ?

ಪಾರ್ವತಿ : ಮತ್ತಿನ್ನೇನು ಅಷ್ಟೂ ತಾಳ್ಮೆ ಇಲ್ಲದೋರು ಊರಿಗ್ಮುಂಚೆ ಯಾಕೇಳಬೇಕಿತ್ತು? ಹಾಲು ಬಂದಮೇಲೆ ನಾನೇ ಎಬ್ಬಿಸ್ತಿರಲಿಲ್ಲವ?

ಶಿವಣ್ಣ : ಆಗಲೇ ಆರುಗಂಟೆ ಆಯ್ತು; ಪೇಪರಿನ್ನೂ ಬರಲಿಲ್ಲವೆ?

ಪಾರ್ವತಿ : ಒಂದು ಗಂಟೆ ತಡವಾಗಿ ಬಂದರೇನೀಗ? ಹಾಲು ಬಂದಮೇಲೆ ಕಾಫಿ ಕಾಯ್ಸಿ ಕೊಡ್ತೇನೆ. ಇಲ್ಲಿ ಬನ್ನಿ.

ಶಿವಣ್ಣ : ಛೇ, ಆ ಪೇಪರಿನವನಿಗೇನು ಧಾಡಿಯಾಯ್ತೊ? ಅವನು ತಡ ಮಾಡೋದಂದರೆ,

ಪಾರ್ವತಿ : ಪೇಪರ್ ಬಂದಮೇಲೆ ಹೋಗೀರಂತೆ; ಇಲ್ಲಿ ಬನ್ನೀಂದ್ರೆ-

ಶಿವಣ್ಣ : ಇರು ಮಾರಾಯಳೆ-

ಪಾರ್ವತಿ : ಹಾಳಾದ್ದು ಆ ಪೇಪರಲ್ಲೇನಿರುತ್ತೊ?

ಶಿವಣ್ಣ : ಪೇಪರೋದ್ದೇ ಹೋದರೆ ಪ್ರಪಂಚದಲ್ಲಿ ಏನೇನಾಗ್ತಾ ಇದೆ-ಅಂತ ಹ್ಯಾಗೆ ತಿಳಿಯೋದು?

ಪಾರ್ವತಿ : ನೀವು ಪೇಪರೋದಿದರೂ, ಓದ್ದೇ ಹೋದರೂ ಏನೂ ಆಗೋಲ್ಲಾರಿ. ಮಳೆಗಾಲ ಆದಮೇಲೆ ಚಳಿಗಾಲ ಬರತ್ತೆ, ಚಳಿಗಾಲ ಆದ ಮೇಲೆ-

ಶಿವಣ್ಣ : ಬೇಸಿಗೆ ಬರತ್ತೆ.

ಪಾರ್ವತಿ : ಅದಕ್ಕೇ ಹೇಳಿದೆ,-ಏನೂ ಆಗೋಲ್ಲಾಂತ. ಏನೂ ಆಗೋಲ್ಲಾಂತ ಸ್ವಥಾ ಇಂದಿರಾಗಾಂಧೀಯವರೇ ರೇಡಿಯೋದಲ್ಲಿ ಭಾಷಣ ಮಾಡಿದಾರೆ, ಕೇಳಿಸಿಕೊಳ್ಳಲಿಲ್ಲವ?

ಶಿವಣ್ಣ : ಏ ರಾಣಿ ಬಾರೇ ಇಲ್ಲಿ,

ಪಾರ್ವತಿ : ಬಂದೇನು ಮಾಡ್ಲಿ?

ಶಿವಣ್ಣ : ಲವ್ ಮಾಡೋಣ ಬಾರೇ.

ಪಾರ್ವತಿ : ಥೂ ನಿಮಗೆ-

ಶಿವಣ್ಣ : ಹೊತ್ತುಗೊತ್ತು ಒಂದೂ ಇಲ್ಲಾಂತ ತಾನೆ?

ಪಾರ್ವತಿ : ಬುದ್ದೀನೂ ಇಲ್ಲ.

ಶಿವಣ್ಣ : ಹೋಗಲಿ, ನಿನ್ನೆ ರಾತ್ರಿ ನಿಲ್ಲಿಸಿದ್ದಿವಲ್ಲ- ಹಗಲಗನಸಿನ ಆಟ, ಅದನ್ನ ಮುಂದುವರಿಸೋಣವ? ಏನೇ,-

ಪಾರ್ವತಿ : *(ಹೊರಬಂದು ಅವನ ಭುಜದ ಮೇಲೊರಗುತ್ತ)* ಥೂ ಹೋಗಿಪ್ಪ, ನೀವು ಮಲಗೋಕ್ಕೂ ಬಿಡೋಲ್ಲ-

ಶಿವಣ್ಣ : ನಮ್ಮ ಮಗ ಹ್ಯಾಗ್ಿತಾನೆ ಗೊತ್ತೆ? ಒಳ್ಳೇ ಹಳ್ಳೀಕಡೆ ಹೋರಿ ಇರುತ್ತೆ ನೋಡು-ಹಾಗೆ.

ಪಾರ್ವತಿ : ಛೀ, ಅವನಿನ್ನೂ ಮೂಡಿ ಮೂರುತಿಂಗಳಾಗಿಲ್ಲ, ಆಗಲೇ ಹೋರಿ ಅಂತೀರ! ಪ್ರಾರಂಭದಿಂದ ಸುರುಮಾಡಿ, ಅಂದರೆ-

ಶಿವಣ್ಣ : ನಮ್ಮ ಮಗುವಿನ ಕಣ್ಣು ಹ್ಯಾಗಿರುತ್ತವೆ ಗೊತ್ತ? ಹೂವಿನಥರ! ಕಣ್ಣು ತೆರೆದಾಗೆಲ್ಲ ಎರಡು ಹೂ ಅರಳಿದ ಹಾಗೆ-

ಪಾರ್ವತಿ : ಅಂಬೆಗಾಲಿಟ್ಟುಕೊಂಡು, ಜೊಲ್ಲು ಸುರಿಸಿಕೊಂಡು ಮನೆತುಂಬ ಓಡಾಡ್ತಾನೆ! ಅವನ ಜೊಲ್ಲು ಬಿದ್ದಲ್ಲೆಲ್ಲ ಮಲ್ಲಿಗೆ ಹೂ ಬಿದ್ದಿರುತ್ತೆ!

ಶಿವಣ್ಣ : ಹೌದು ಅವನ ಕಣ್ಣಿನ ಕೊಣೆ ತುಸು ರಂಗೇರಿರುತ್ತೆ! ಯಾಕೆ ಗೊತ್ತ! ನನ್ನ ಮಗ ಬಣ್ಣದ ಕನಸು ಕಾಣತಾನೆ, ನನ್ನ ಹಾಗೆ! ಮೂಗಿದೆ ನೋಡು, ತುಸು ಮೊಂಡ, ನಿನ್ನ ಹಾಗೆ, ಯಾಕೆಂದ್ರೆ ಅವನಿಗೂ ನಿನ್ನ ಹಾಗೇ ಮುಂಗೋಪ ಜಾಸ್ತಿ….

ಪಾರ್ವತಿ : ಏನ್ರೀ, ನಮ್ಮ ಮಗೂನ ಬಗ್ಗೆ ಹೇಳೋದಕ್ಕೆ ಒಂದಾದರೂ ದೊಡ್ಡ ಮಾತ ಹೊಳೆಯೋದೇ ಇಲ್ಲವ ನಿಮಗೆ?

ಶಿವಣ್ಣ : ಹೌದಲ್ಲ, ನೋಡೇ, ನಮ್ಮ ಮಗು ಮಹಾತ್ಮಾ ಗಾಂಧಿ ಇದ್ದ ಹಾಗೆ…..ಸಾಕ?

ಪಾರ್ವತಿ : ಯಾರಿಗ್ಗೊತ್ತು? ದೇಶಕ್ಕೆಲ್ಲಾ ದೊಡ್ಡೋನಾದರೂ ಆದಾನು. ಆಗಬಾರದೆಂತೇನು? ಅವನೇ ನಮ್ಮ ಭವಿಷ್ಯ ಅಲ್ಲವಾ?

ಶಿವಣ್ಣ : ಹೌದು ಆದರೆ ಹೆಣ್ಣು ಮಗು ಆದರೆ….?

ಪಾರ್ವತಿ : ಬಿಡಿ, ಏನೀಗ? ಅವಳೂ ದೊಡ್ಡೋಳಾಗಭೌದು.

ಶಿವಣ್ಣ : ರಾಣೀ, ನಿನ್ನೆ ರಾತ್ರಿ ಒಂದು ಭಯಂಕರ ಕನಸು ಬಿದ್ದಿತ್ತು, ಕಣೇ!

ಪಾರ್ವತಿ : ಹಗಲುಗನಸು ಅಲ್ಲ ತಾನೆ?

ಶಿವಣ್ಣ : ಕೇಳೇ, ಕನಸಿನಲ್ಲಿ ಒಬ್ಬ ಗಾಂಧೀಥರದ ಮುದುಕ ಇದ್ದ. ಒಬ್ಬ ಹೆಂಗಸಿದ್ದಳು.

ಪಾರ್ವತಿ : ಹೆಂಗಸು? ಯಾವೋಳ್ರಿ ಅವಳು?

ಶಿವಣ್ಣ : ಹೆಗಸು ಅಂದರೆ ಮುದುಕಿ ಕಣೇ, ಮುದುಕೀನೇ!

ಪಾರ್ವತಿ : ನಿಮಗೆ ಪರಿಚಯುದವಳ?

ಶಿವಣ್ಣ : ಅಲ್ಲ.

ಪಾರ್ವತಿ : ಹ್ಯಾಗಿದ್ದಳು?

ಶಿವಣ್ಣ : ಗುಳಿಬಿದ್ದ ಕಣ್ಣು! ಬಿಳೀ ತಲೆ-ಚೂಪು ಮೂಗು…..ನೆನೆದರೆ ಈಗಲೂ ಭಯವಾಗುತ್ತೆ!

ಪಾರ್ವತಿ : ಏನ್ರೀ ಕನಸು ಅಷ್ಟೊಂದು ಟೆರಿಬಲ್ಲಾಗಿತ್ತ? ನೆನಪಿದೆಯ?

ಶಿವಣ್ಣ : ಡೀಟೇಲ್ಸ್ ನೆನಪಿಲ್ಲ. ನೆನಪಾದಷ್ಟು ಹೇಳ್ತೀನಿ, ಬೆಳಿಗ್ಗೆದ್ದು ವಾಕಿಂಗ್ ಹೋದೆ…..

ಪಾರ್ವತಿ : ನೀವು ವಾಕಿಂಗ್ ಹೋಗೇ ಇಲ್ಲ ಅಂದ್ರೆ….

ಶಿವಣ್ಣ : ಕನಸಿನಲ್ಲಿ ಕಣೇ…. ವಾಕಿಂಗ್ ಹೋಗಿ ವಾಪಸ್ಸಾದಾಗ ನಾನು ಹೆಜ್ಜೆಯಿಟ್ಟಲ್ಲಿ ರಕ್ತದ ಕಲೆ ಇತ್ತು!

ಪಾರ್ವತಿ : ಅಬ್ಬ!

ಶಿವಣ್ಣ : ಕನಸಿಗೇ ಇಷ್ಟೆಲ್ಲ ಗಾಬರಿ ಬೀಳೋದಂದರೆ….

ಪಾರ್ವತಿ : ನೀವು ಹೇಳೊದನ್ನ ಕೇಳಿದರೆ ಅದ್ಯಾವುದೋ ಭಯಂಕರ ಕನಸೇ ಇರಬೇಕು. ಅದೇನು ಹೇಳೀಂದರೆ….

ಶಿವಣ್ಣ : ನೆನಪಿದ್ದಷ್ಟು ಹೇಳುತ್ತೇನೆ: ಆ ಹೆಂಗಸು ಅಂದರೆ ಮುದುಕಿ ಇತ್ತಲ್ಲ, ನನ್ನ ಕತ್ತು ಹಿಸುಕೋದಕ್ಕೆ ಬಂದ್ಲು! ನಾನೇ ಅವಳನ್ನ ಕೊಂದುಬಿಟ್ಟೆ!

ಪಾರ್ವತಿ : ಮೆಲ್ಲಗೆ ಮಾತಾಡ್ರಿ, ನೀವ್ಯಾಕೆ ಅವಳ್ನ ಕೊಂದಿರಿ?

ಶಿವಣ್ಣ : ಅವಳು ನನ್ನ ಕತ್ತು ಹಿಸುಕಿದಳು. ಬಿಡಿಸಿಕೊಳ್ಳೋದಕ್ಕೆ ತುಂಬ ಪ್ರಯತ್ನ ಮಾಡಿದೆ, ಬಿಡಲೇ ಇಲ್ಲ. ಕೊನೇಗೆ ನನ್ನ ಕೈಗೆ ಅವಳ ಕತ್ತು ಹ್ಯಾಗೋಸಿಕ್ತು! ದೂಕಿದೆ. ಅಲ್ಲೇ ಬಿದ್ದುಬಿಟ್ಟಳು. ತಕ್ಷಣ ಎಚ್ಚರಾಯ್ತು.

ಪಾರ್ವತಿ : ರೀ ರೀ ಇದೆಲ್ಲಾ ನಿಜ ಏನ್ರಿ?

ಶಿವಣ್ಣ : ನಿಜ ಅಲ್ಲ, ಕನಸು ಹೇಳ್ತಿದ್ದೇನೆ ಮಾರಾಯಳೇ-ಎಚ್ಚರವಾಯ್ತಲ್ಲ? ಈಗಲೂ ಎದೆ ಡಬಡಬ ಅಂತ ಪಕ್ಕೆಲುವಿಗೆ ಗುದ್ದುತಾ ಇತ್ತು! ಹೆದರಿ ನಿನ್ನನ್ನ ಎಬ್ಬಿಸೋಣ ಅಂತಿದ್ದೆ.

ಪಾರ್ವತಿ : ಮತ್ತೇ ನನಗೇನೂ ಹೇಳಲೇ ಇಲ್ಲ?

ಶಿವಣ್ಣ : ನೀನು ಗಾಢ ನಿದ್ದೆಯಲ್ಲಿದ್ದೆ, ಎದ್ದು ಲೈಟು ಹಾಕಿ ನೀರು ಕುಡಿದೆ. ಸುಧಾರಿಸಿಕೊಂಡಾದ ಮೇಲೆ ಮಲಗಿದೆ. ಆಮೇಲೆ ನಿದ್ದೆ ಬರಲೇ ಇಲ್ಲ. ಪಾರ್ವತಿ, ಬೆಳಗಿನ ಹೊತ್ತು ಬಿದ್ದ ಕನಸು ನಿಜ ಆಗುತ್ತಲ್ಲವ?

ಪಾರ್ವತಿ : ಅದೇನೋಪ್ಪ, ನಂಗೋತ್ತಿಲ್ಲ. ನನಗೇನಾದರೂ ಇಂತಹ ಕನಸು ಬಿದ್ದಿದ್ದರೆ ಕನಸಲ್ಲೇ ಸತ್ತು ಬಿಡುತ್ತಿದ್ದೆ. ಈ ಹಿಂದೆ ನೀವು ಅವಳನ್ನ ಎಲ್ಲಾದರೂ ನೋಡಿದ್ದಿರಾ?

ಶಿವಣ್ಣ : ನೋಡಿದ ಹಾಗಿಲ್ಲ. ಯಾವಳೋ ಘನವಾದ ಹೆಂಗಸೇ ಇರಬೇಕು. ಹಾಗೇನಾದರೂ ಕನಸು ನಿಜ ಆಗಿಬಿಟ್ಟೀತು ಅಂತ ಭಯ ನನಗೆ…..
*(ಅಷ್ಟರಲ್ಲಿ ಕಾಲಿಂಗ ಬೆಲ್ ಆಗುತ್ತದೆ.)*
ಹಾಲಿನವ ಬಂದ. ಹೋಗು, ಬೇಗ ಕಾಫಿ ಮಾಡು.

*(ಪಾರ್ವತಿ ಹೋಗಿ ಬಾಗಿಲು ತೆರೆಯುತ್ತಾಳೆ. ಪೊಲೀಸ್ ಇನ್ಸ್‌ಪೆಕ್ಟರ್ ಕೇಬಿ ಒಳಗೆ ಬರುತ್ತಾನೆ. ಕೇಬಿ ಜಂರ, ಯಾವುದಕ್ಕೂ ಡೋಂಟ್ ಕೇರ್ ಅಧಿಕಾರಿ. ಅವನ ಹುಬ್ಬು ಹಾಗೂ ತುಟಿಗಳಲ್ಲಿ ಬೇರೆಯವರ ಬಗೆಗಿನ ಅಸಡ್ಡೆ ಸ್ಪಷ್ಟವಾಗಿದೆ. ಕಣ್ಣುಗಳು ಕನಸಿನಲ್ಲಿ ಬರುವ ಪಾತ್ರಗಳಂತೆ ಕ್ರೂರವಾಗಿವೆ. ಅವನನ್ನು ನೋಡಿ ಇಬ್ಬರಿಗೂ ಆಘಾತವಾಗುತ್ತದೆ. ಶಿವಣ್ಣ ಎದ್ದು ನಿಂತುಕೊಳ್ಳುತ್ತಾನೆ.?)*

ಕೇಬಿ : ನಿಮ್ಮ ಹೆಸರು ಶಿವರಾಮು ತಾನೆ?

ಶಿವಣ್ಣ : ಅಲ್ಲ ಶಿವಣ್ಣ ಅಂತ.

ಕೇಬಿ : ಪಿ.ಎನ್. ಶಿವರಾಮು.

ಶಿವಣ್ಣ : ನನ್ನ ಹೆಸರು ಎಸ್. ಬಿ. ಶಿವಣ್ಣ ಅಂತ.

ಕೇಬಿ : *(ಧ್ವನಿ ಏರಿಸಿ)* ಕೇಳಿದ್ದಕ್ಕೆ ತಿಗಾ ಮೆಚ್ಚಿಕೊಂಡು ಎಸ್ಸನ್ನು, ನನ್ನನ್ನ ತಿದ್ದೋನು ಈ ದೇಶದಲ್ಲಿನ್ನೂ ಹುಟ್ಟಿಲ್ಲ. ನಂಬರ್ ಹನ್ನೆರಡು, ನಾಲ್ಕನೇ ಮೇನ್, ಮೂರನೇ ಅಡ್ಡರಸ್ತೆ- ಅಡ್ರೆಸ್ಸು ಸರಿಯೊ?

ಶಿವಣ್ಣ : ಹೌದು.

ಕೇಬಿ : ಗಾಬರಿ ಬೀಳಬೇಡ, ನಿಜ ಏಳಿದರಂತೂ ಹಪಾಯವೇ ಹಿಲ್ಲ. ನಾ ಏಳಿದ್ದು ನಿಜ ತಾನೇ? ಲೇ ಪ್ಯಾದೇ, ತಲಾಷ್ ಮಾಡು.
*(ಈ ತನಕ ಹೊರಗಡೆಯಿದ್ದ ಪ್ಯಾದೆಯೊಬ್ಬ ಸೊಕ್ಕಿನಿಂದ ಒಳಬಂದು ಒಳಗಿದ್ದ ಯಾರನ್ನೂ ಕೇರ್ ಮಾಡದೆ ಹುಡುಕತೊಡಗುವನು. ಇಬ್ಬರೂ ಗಾಬರಿಯಿಂದ ಓಡಿಹೋಗಿ ಪೊಲೀಸ್‌ನೆದುರಿಗೆ ನಿಂತು)*

ಪಾರ್ವತಿ : ನೋಡಿ, ಏನು ಹೇಳದೆ ಕೇಳದೆ ಈ ಥರ ಮನೆ ನುಗ್ಗಿದರೆ ಅಕ್ಕಪಕ್ಕದೋರನ್ನ ಕೂಗಬೇಕಾಗುತ್ತೆ.

ಪೊಲೀಸ್ : ಸಾರ್, ಸಾರ್, ಇವಳನ್ನೋಡಿ ಮಾತಾಡ್ತೀರ ಸೋಲ್ಪ. ಪ್ರೀತಿ ಮಾಡು ಅಂತ
ನನ್ನನ್ನ ಕರೀತಿದಾಳೆ. *(ಪಾರ್ವತಿಗೆ)* ಇನ್ನೊಂದ ಸಲ ಈ ರೀತಿ ಎದುರು ಬಂದರೆ ನಾನು ನಿನ್ನನ್ನ ಪ್ರೀತಿ ಮಾಡಿಬಿಡ್ತೀನಷ್ಟೆ; ಹುಷಾರ್.

ಪಾರ್ವತಿ : ರೀ ಕೇಳಿದಿರಾ ಇವನ ಮಾತನ್ನ?

ಕೇಬಿ : ಯಾರಯ್ಯಾ ಹಿವಳು?

ಶಿವಣ್ಣ : *(ಅಸಹನೆಯಿಂದ)* ನನ್ನ ಹೆಂಡತಿ, ಪಾರ್ವತಿ.

ಕೇಬಿ : ನೀವಿಬ್ಬರೂ ಗಂಡ ಎಂಡತಿ ಹನ್ನೋದಕ್ಕೆ ದಾಖಲೆಯಿದೆಯೆ?

ಶಿವಣ್ಣ : ಏನ್ಸಾರ್ ಈ ಥರ ಕೇಳ್ತೀರಿ? ಈ ತನಕ ಯಾರು ನನ್ನನ್ನ ಈ ಪ್ರಶ್ನೆ ಕೇಳಿಲ್ಲ.

ಕೇಬಿ : ನಾನು ಕೇಳಿದೆನಲ್ಲ.

ಶಿವಣ್ಣ : ನೀವು ಕೇಳೋ ಪ್ರಶ್ನೆಗೆಲ್ಲಾ ನಾನು ಉತ್ತರ ಕೊಡಬೇಕಾದ್ದಿಲ್ಲ, ಮೊದಲು ತಾವಿಲ್ಲಿಂದ ಹೊರಟರೆ ಸರಿ, ಇಲ್ಲದಿದ್ದರೆ….

ಕೇಬಿ : ಪೊಲೀಸ್ ಸ್ಟೇಷನ್ನಿಗೆ ಫೋನ್ ಮಾಡತಿ; ಸರಿ ತಾನೆ? ಪೊಲೀಸ್ ಹಿನ್ಸ್‌ಪೆಕ್ಟರ್ ನಾನೇ ಬಂದೀನಲ್ಲಯ್ಯಾ.

ಶಿವಣ್ಣ : ನೀವ್ಯಾರೋ ನಕಲಿ ಪೋಲೀಸಿನೋರಿರಭೌದು, ಯಾರೋ ರೌಡಿಗಳು ಪೊಲೀಸ್ ಡ್ರೆಸ್ಸಲ್ಲಿ ಬಂದಿರಭೌದು.
*(ಅಷ್ಟರಲ್ಲಿ ಪಾರ್ವತಿ ಓಡಿಹೋಗಿ ಪೊಲೀಸ್ ಸ್ಟೇಶನ್ನಿಗೆ ಫೋನ್ ಮಾಡುವಳು. ಇನ್ಸ್‌ಪೆಕ್ಟರ್ ಅವಳನ್ನೇ ನೋಡುತ್ತ ನಿರ್ಲಕ್ಷದಿಂದ ನಿಂತಿರುವನು.)*

ಪಾರ್ವತಿ : ಪೊಲೀಸ್…. ಪೊಲೀಸ್ ಪ್ಲೀಜ್….ನೋಡಿ ….. ನಮ್ಮನೇಲಿ ಯಾರೋ ರೌಡಿಗಳು ನುಗ್ಗಿದ್ದಾರೆ, ದಯವಿಟ್ಟು ಬೇಗನೆ ಬರ್ತೀರಾ ಪ್ಲೀಸ್….. ಏನಂದ್ರಿ? ನಾಲ್ಕನೇ ಮೇನು, ಮೂರನೇ ಅಡ್ಡರಸ್ತೆ ಮನೆ ನಂಬರ ಹನ್ನೆರಡು ಎಸ್.ಬಿ. ಶಿವಣ್ಣ ಅಂತ. ದಯವಿಟ್ಟು ಬೇಗನೇ ಬನ್ನಿಯಪ್ಪ…. ಪ್ಲೀಸ್ …… ಏನು ನಮ್ಮ ಮನೆಗೆ ಬಂದವರು ನಿಮ್ಮ ಪೈಕೀನ? ಇನ್ಸ್‌ಪೆಕ್ಟರ್ ಕೇಬಿನ?

ಕೇಬಿ : ಹಿನ್ಸ್‌ಪೆಕ್ಟರ್ ಕೇಬಿ ಹಂದರೆ ನಾನೇ ಮ್ಯಾಡಂ. ನಮಸ್ಕಾರ ಹೀವಾಗಾದರೂ ನಾನು ಹಸಲಿಪೊಲೀಸಿ ಇನ್ಸ್‌ಪೆಕ್ಟರಂತ ಗೊತ್ತಾಯ್ತೊ? ಮಿಸ್ಟರ್ ಶಿವರಾಂ…..

ಶಿವಣ್ಣ : ನನ್ನ ಹೆಸರು ಶಿವರಾಮು ಅಲ್ಲ, ಶಿವಣ್ಣ ಅಂತ, ಎಸ್.ಬಿ. ಶಿವಣ್ಣ.

ಕೇಬಿ : ಸುಳ್ಳುಬೊಗಳಬೇಡ. ಗೂಡಚಾರೀ ವಿಭಾಗದ ಪ್ರಕಾರ ನಿನ್ನ ಕೋಡ್ ಎಸರು ಶಿವರಾಂ ಅಂತ. ಒಪ್ಪಿಕೊ.

ಶಿವಣ್ಣ : ಆದರದು ನಿಜ ಅಲ್ಲ.

ಕೇಬಿ : ನಾ ಏಳ್ತೀನಂದ ಮ್ಯಾಕೆ ನಿಜ ಹಾಗಲೇಬೇಕು. ಮಿಸ್ಟರ್ ಶಿವರಾಮ ಹಿಕಾ, ನಿನ್ನ ಮ್ಯಾಕೆ ವಾರಂಟಿದೆ ನೋಡಿಕೊ. ನೋಡು, ನನ್ನ ಹೈಡಿ ಕಾರ್ಡಿದು. *(ಇಬ್ಬರಿಗೂ ಕೊಡುವನು, ನೋಡಿ ಪಾರ್ವತಿ ಹತಾಶಳಾಗಿ)*

ಪಾರ್ವತಿ : ಸಾರ್ ಇದೆಲ್ಲಾ ಯಾಕೇಂತ ಕೇಳಭೌದ?

ಕೇಬಿ : ಏಳತಿವ್ನಿ, ಏಳೋಕೇ ಬಂದಿವ್ನಿ. ನಾ ಕೇಳಿದ್ದಕ್ಕೆಲ್ಲಾ ಹೆಸ್ಸಂತ ಹುತ್ರ ಕೊಟ್ಟರೆ, ಹಾಮ್ಯಾಕೆ ಸಮಜಾಯಿಸಿ ಏಳತಿವ್ನಿ, ತಿಳೀತ? ರೈಟಿಂಗ್‌ಲ್ಲಿ ವಾರಂಟ್ ತಂದಿವ್ನಿ ಹಂದರೆ ತಮಾಶೇನ? *(ಒಳಗಿನಿಂದ ಪೊಲೀಸ್ ಪೆನ್ ತರುವನು)* ಹದನ್ನ ಯಾಕೋ ತಂದೆ?

ಪೊಲೀಸ್ : *(ಜಯದ ಹುಮ್ಮಸ್ಸಿನಿಂದ)* ತುದಿ ನೋಡಿ ಸಾರ್.

ಕೇಬಿ : ರೆಡ್ ಹಿಂಕಿದೆ.

ಪೊಲೀಸ್ : ರಕ್ತ ಸಾರದು, ಒಣಗೋಗದೆ.

ಪಾರ್ವತಿ : ಒಂದ್ನಿಮಿಷ ನಿಲ್ಲಿಸಿ ಇದೆಲ್ಲಾ ಏನಂತ ಹೇಳ್ತಿರಾ? ಇಲ್ಲದಿದ್ದರೆ ಹುಚ್ಚಿಯಾಗ್ತೀನಿ ನಾನು.

ಶಿವಣ್ಣ : ನನಗೂ ಅರ್ಥವಾಗ್ತಾ ಇಲ್ಲ. ವಾರಂಟಂತ ಹೇಳತಾರೆ. ಅದರಲ್ಲಿನ ಒಂದಕ್ಷರಾನು ತಿಳೀತಿಲ್ಲ.

ಪೊಲೀಸ್ : ನೋಡಿ ಸಾರ್, ಪ್ರೀತಿ ಮಾಡೂಂತ ಗಂಟುಬಿದ್ದವ್ಳೆ.

ಶಿವಣ್ಣ : ಯೂ ಸೆಟಪ್

ಕೇಬಿ : ನೀವಿಬ್ಬರೂ ಒಂಚೂರು ನಿಮ್ಮ ಫಿಟ್ಸ್ ಕಂಟ್ರೋಲ್ ಮಾಡಿಕೊಳ್ಳೋ ಆಗಿದ್ದರೆ ನಾನೇ ಏಳತಿವ್ನಿ. ಮಿಸ್ಟರ್ ಶಿವರಾಂ- *(ಅಂದಿನ ಪತ್ರಿಕೆ ತೋರಿಸುತ್ತ)* ಈಯಮ್ಮ ಯಾರೂಂತ ಗೊತ್ತ?

ಶಿವಣ್ಣ : ನನಗೇನು ಗೊತ್ತು?

ಕೇಬಿ : ನೋಡಿದ ಮ್ಯಾಕೇಳು.

ಶಿವಣ್ಣ : *(ನೋಡಿ)* ಗೊತ್ತಿಲ್ಲ.

ಕೇಬಿ : ತಿರಗಾ ನೋಡು.

ಶಿವಣ್ಣ : ನೋಡಿದ ಮೇಲೇ ಹೇಳಿದ್ದು.

ಕೇಬಿ : ಔದಾ? *(ಶಿವಣ್ಣ ಜುಟ್ಟು ಹಿಡಿದು ಒತ್ತಾಯದಿಂದ ಅಂದಿನ ದಿನ ಪತ್ರಿಕೆಯ ಮುಖ ಪುಟ ನೋಡುವಂತೆ ಮಾಡಿ)* ಈಗೇಳು, ಗೊತ್ತಿಲ್ಲವಾ?

ಶಿವಣ್ಣ : *(ನೋಡಿ, ಚಕಿತನಾಗಿ)* ಹೌದು-ಪಾರ್ವತಿ ನನ್ನ ಕನಸಲ್ಲಿ ಬಂದವಳು ಇವಳೇ!

ಕೇಬಿ : ನೀನು ಈಯಮ್ಮನ್ನ ಕೊಲೆ ಮಾಡೋಕೆ ಪ್ರಯತ್ನ ಮಾಡಿದ್ದು ನಿಜವೊ?

ಶಿವಣ್ಣ : ನನಗೆ ಬೇಕಾದ್ದಿಷ್ಟೆ.
*(ಸೀದಾ ಪೋನು ಮಾಡಲು ಹೋಗುವನು)*

ಶಿವಣ್ಣ : ಕನಸಿಗೂ ಕೊಲೆಕೇಸಿಗೂ ಏನ್ರಿ ಸಂಬಂಧ?

ಕೇಬಿ : ಕನಸಿನ ಲೋಕವೋ, ನಿಜ ಲೋಕವೋ- ಯಾವುದೋ ಒಂದರಲ್ಲಿ ಆಯಮ್ಮನ ಕೊಲೆ ಮಾಡೋದಕ್ಕೆ ಪ್ರಯತ್ನ ಮಾಡಿದ್ದು ನಿಜವೋ? *(ಪೋನಿನಲ್ಲಿ)* ಅಲೋ ಜಜ್ ಸಾಯೇಬರೇನು? ನಮಸ್ಕಾರ. ನಾನು ಸ್ವಾಮಿ ಹಿನ್ಸ್‌ಪೆಕ್ಟರ್ ಕೇಬಿ. ಹಪರಾದಿ ಸಿಕ್ಕಬಿದ್ದವ್ನೆ, ಬಂದಬುಡಿ ಬುದ್ದಿ.

ಶಿವಣ್ಣ : ಎಲ್ಲಿದ್ದೆಲ್ಲಿ ಸಂಬಂಧ ಹೇಳ್ತೀರಿ ಸಾರ್?-ಆ ಹೆಂಗಸು ಯಾರೂಂತ ಗೊತ್ತಿಲ್ಲ. ಒಂದು ಬಾರೀನೂ ನಾನಾಕೇ ಮುಖ ನೋಡಿಲ್ಲ. ಅಂಥವಳನ್ನ ನಾನು ಕೊಲೆ ಮಾಡೋದಕ್ಕೆ ಪ್ರಯತ್ನ ಮಾಡೋದು ಹ್ಯಾಗೆ ಸಾಧ್ಯ?

ಕೇಬಿ : ಏ ಕನಸಲ್ಲಿ ಬಂದಿದ್ದಳು ಹಂತೇಳನಿಲ್ಲವ?

ಶಿವಣ್ಣ : ಕನಸಲ್ಲಿ ಬಂದಿದ್ದಳು, ಅಷ್ಟೇ.

ಕೇಬಿ : ನಾ ಹೇಳೋದು ಅಷ್ಟೇ. ಕನಸಲ್ಲಿ ಆಯಮ್ಮನ ಕೊಲೆ ಮಾಡೋದಕ್ಕೆ ಪ್ರಯತ್ನ ಮಾಡಿದೆ ತಾನೇ?

ಶಿವಣ್ಣ : ಕನಸಲ್ಲಿ ಅಪರಾಧ ಮಾಡಿದರೂ ಶಿಕ್ಷೆ ಕೊಡತೀರ? ಅಬ್ಬ! ನಿಮ್ಮ ಕೈಯಲ್ಲಿ ಮಾತ್ರ ಇರೋ ಗುಟ್ಟಾದ ಕಾನೂನುಗಳಿರಬೇಕು.

ಕೇಬಿ : ಹಿದರಲ್ಲೇನೂ ಗುಟ್ಟಿಲ್ಲ, ನಿನ್ನ ಮೂರ್ಖತನ ಮಾತ್ರ ಇರೋದು. ಮಿಸ್ಟರ್ ಶಿವರಾಂ; ನಮ್ಮದು ಪ್ರಜಾಪ್ರಭುತ್ವ ಮತ್ತು ನಾನಿರೋದು ಪ್ರಜಾಪ್ರಭುತ್ವ ರಕ್ಷಣೆಗಾಗಿ. ಬೂಮಿತಾಯಿ ನಿನ್ನಂಥ ಪಾಪಿಗಳ ಸಂಖ್ಯೆ ಜಾಸ್ತಿ ಹಾಗಿ ಬಾರ ಎಚ್ಚಾದಾಗೆಲ್ಲಾ ಇಷ್ಣುವಿನ ಅತ್ತಿರ ಓಗಿ 'ಕಾಪಾಡೋ ಶಿವನೇಂ'ತ ಎಂಗೆ ಕೇಳತಿದ್ದಳೋ -ಅಂಗೆ ಈ ದೇಶಾನೂ ನಮ್ಮತ್ರ ಬಂದು ಪ್ರಜಾಪ್ರಭುತ್ವ ಕಾಪಾಡೋ ಅಂತ ಕೇಳ್ಕೊತವಳೆ. ಹಾವಾಗ ನಾನು ರಕ್ಷಣೆ ಮಾಡತಿವ್ನಿ. ಬೂಲೋಕದ ಪ್ರಜಾಪ್ರಭುತ್ವಕ್ಕೆ ಹಪಾಯ ಬಂದಾಗೆಲ್ಲಾ ದೇಶದ ಮ್ಯಾಕೆ ತುರ್ತು ಪರಿಸ್ಥಿತಿ ಏರಿಯಾದರೂ ರಕ್ಷಣೆ ಮಾಡಬೇಕಾಗುತ್ತೆ ಗೊತ್ತೊ? ದೇಶದಲ್ಲೀಗ ತುರ್ತು ಪರಿಸ್ಥಿತಿ ಇದೆ- ಮರೀಬೇಡ.

ಶಿವಣ್ಣ : ದೇಶದ್ರೋಹದ ಕೆಲಸ ನಾನೇನೂ ಮಾಡಿಲ್ಲವಲ್ಲ.

ಕೇಬಿ : ಹಿನ್ನೂ ಹೇನ ಮಾಡಬೇಕಂತಿದ್ದಿ? ಒರಗಡೆ ಮಾಡಲಾರದ್ದನ್ನ ಕನಸಲ್ಲಿ ಮಾಡಿದಿ; ಸಾಲದ? ಒರಗಡೆ ಕೊಲೆಮಾಡೊ ನನ್ನ ಮಕ್ಕಳು ಪೆದ್ದರು. ಸುಲಭವಾಗಿ ಸಿಕ್ಕು ಬೀಳತವ್ರೆ; ನಿಮ್ಮಂತೋರಿದ್ದೀರಲ್ಲ ಬುದ್ದಿಜೀವಿಗಳು - ಮಾಡೋ ಹೇಸ್ಗೇನ್ನ ಒಳಗೇ ಅತ್ತಿಕ್ಕಿಕೊಂಡು ಯಾರಿಗೂ ಕಾಣದಂಗೆ ಮಾಡ್ತೀರ! ದೇಶಕ್ಕೆ ನಿಮ್ಮಂತೋರೇ ಜಾಸ್ತಿ ಹಪಾಯಕಾರಿ. ಹದಕ್ಕೇ ರಾತ್ರಿ ನಿಮ್ಮ ಕನಸುಗಳನ್ನ ವಾಚ್ ಮಾಡ್ತೀನಿ, ತಿಳೀತ?

# ಹಳವಂಡಗಳು [೧]

ಪಾರ್ವತಿ : ಇದು ಯಾರಾದ್ರೂ ಒಪ್ಪೋ ಮಾತೇನ್ರಿ?

ಕೇಬಿ : ನಾನೊಪ್ಪಿಕೊಂಡಿದ್ದೇನೆ, ಸಾಲದೊ?

ಶಿವಣ್ಣ : ಈ ರೀತಿ ಕನಸು ಕಂಡವರನ್ನೆಲ್ಲಾ ಹಿಡಿದರೆ ಇಡೀ ದೇಶ ಜೇಲಾಗುತ್ತೆ.

ಕೇಬಿ : ಮಿಸ್ಟರ್ ಶಿವರಾಂ, ಜೀವನದಲ್ಲಿ ನಾನು ಎರಡನ್ನ ಪಾಲಿಸ್ತೀನಿ. ಒಂದು ನಾ ನಗೋದಿಲ್ಲ. ಇನ್ನೊಂದು ನಾನು ವಿಚಾರ ಮಾಡೋದಿಲ್ಲ. ನಾನು ಯಾವಾಗಲೂ ಹವಸರದಲ್ಲಿರುತ್ತೇನೆ. ಅದೇ ನನ್ನ ಸುದೈವ. ಯಾಕಂತಿಯೊ? ವಿಚಾರ ಮಾಡೋದಕ್ಕೆ ಟೈಮೇ ಸಿಕ್ಕಲ್ಲ. ಹಿಡೀ ದೇಶ ಜೇಲಲ್ಲಿಡೋದೊ, ಇಲ್ಲಾ ಹಿಡೀ ದೇಶಾನ್ನ ಜೇಲ್ ಮಾಡೋದೊ- ಅದನ್ನೆಲ್ಲಾ ವಿಚಾರ ಮಾಡೋಕೆ ದೊಡ್ಡೋರಿದ್ದಾರೆ. ನಿನ್ನ ಬುದ್ಧಿವಂತಿಕೆಯೆಲ್ಲಾ ಮೂರ್ಖತನ ಅಂತ ಒಪ್ಪಿಕೊ.

ಪೊಲೀಸ್ : *(ಪಾರ್ವತಿಗೆ)* ಚಂದೊಳ್ಳಿ ಉಡುಗೀರಂದ್ರೆ ನಮ್ಮ ಸಾಬ್ರಿಗೆ ತುಂಬ ಕುಸಿ. ನೀ ಓಗಿ ಸಾಬರಿಗೇಳು-ಹೇನೋ ತಪ್ಪಾಗೋಗದೆ ಸಾಮಿ ಇನ್ನೊಂದಪ ಇಂಗ್ಮಾಡಕಿಲ್ಲ. ಬುಟ್ಬುಡಿ ಅನ್ನು. ಬೇಕಾರ ರಾತ್ರಿ ಟೇಸನ್ನಿಗೂ ಬತ್ತಿನನ್ನು, ಒಂಟೋಗ್ತಾರೆ.

ಪಾರ್ವತಿ : ಅಯ್ಯಯ್ಯೊ! ಏನಿದೆಲ್ಲ! ಕೇಳೋರ್ಯಾರೂ ಇಲ್ಲವೆ? *(ಹೊರಗಡೆ ಓಡಿ ಹೋಗಿ)* ರೀ ರಾಮಕ್ಕ ನಿಮ್ಮ ಯಜಮಾನಿದ್ದರೆ ಕರಕೊಂಬನ್ನಿಯಮ್ಮ, ಯಾರೋ ರೌಡಿಗಳು ಮನೇಗೆ ಬಂದಿದಾರೆ. ದಯವಿಟ್ಟು ಬನ್ನಿ, ರೀ ಸರೋಜಾ.....

ಬನ್ನೀ …… ಯಾರಾದರೂ ಕಾಪಾಡ್ರಿ….
*(ಅಳುತ್ತ ಒಳಬರುವಳು)*

ಪೊಲೀಸ್ : ಸಾರ್, ನನ್ನನ್ನ ಬೆಡ್ ರೂಮಿಗೆಳೀತಿದಾಳೆ.

ಕೇಬಿ : ಹೀಗಲಾದರೂ ಒಪ್ಪಿಕೊಳ್ತಿಯಲ್ಲ?

ಶಿವಣ್ಣ : ಏನೊಪ್ಪಿಕೊಳ್ಳಿ?

ಕೇಬಿ : ನಾಯೇಳಿದ್ದನ್ನ,

ಶಿವಣ್ಣ : ಏನು ಹೇಳಿದಿರಿ?

ಕೇಬಿ : ನೀನು ಕೊಲೆಗಾರ!

ಪಾರ್ವತಿ : ಅಯ್ಯಯ್ಯೋ ನಾ ತಡೀಲಾರೆ!….. ಏನು ನಡೀತ ಇದೆ! ನನ್ನ ತಲೆ ಸುತ್ತಿ ಬರ್ತಾ ಇದೆ!
ಅಯ್ಯೋ…. *(ಮೂರ್ಛೆ ಬೀಳುವಳು. ತಕ್ಷಣ ಅವಳ ಸಹಾಯಕ್ಕೆ ಓಡಿಹೋಗಬೇಕಾಂದಾಗ ಕೇಬಿ ಅಡ್ಡ ಬಂದು ಕೈತಿರುವಿ ಹಿಂಗಟ್ಟು ಕಟ್ಟಿ ಹಿಡಿಯುವನು.)*

ಕೇಬಿ : ಸದ್ಯ, ಯೋ ಅ ಎಂಗಸಿನ್ನ ಒಳಾಕ ಚೆಲ್ಲಿಬಾ.

*(ಪೊಲೀಸ್ ಪಾರ್ವತಿಯನ್ನು ನಡೆಸಿಕೊಂಡು ಹೊರಟಿರುವಂತೆ ಶಿವಣ್ಣ ಮುಂದೆ ನುಗ್ಗಲು ಪ್ರಯತ್ನಿಸುವನು. ಕೇಬಿ ತಕ್ಷಣ ಕೈಗೆ ಸಿಕ್ಕ ವಸ್ತುವಿನಿಂದ ಅವನ ತಲೆಗೊಂದು ಭಯಂಕರ ಏಟು ಹಾಕುವನು)*

ನನ್ನ ಕೈ ತಪ್ಪಿಸಿ ಹೋಡಿವೋಗ್ತಿಯೋ ಲೋಫರ್.

ಶಿವಣ್ಣ

: *(ಕಣ್ಣು ತೆರೆದುಕೊಂಡು ಪರವಶನಾದಂತೆ, ನಿಂತಲ್ಲೇ ಕುಸಿದು ಕೂರುತ್ತಾನೆ, ಇನ್ನು ಮುಂದೆ ಇಡೀ ದೃಶ್ಯ ಮುಗಿಯುವ ತನಕ ಅದೇ ಭಂಗಿಯಲ್ಲಿರುತ್ತಾನೆ.)* ನೀವ್ಯಾರು! ಇಲ್ಲಿಗ್ಯಾಕೆ ಬಂದಿರಿ? ನಾ ಎಲ್ಲಿದ್ದೀನಿ! ಇದೆಲ್ಲಾ ಏನು? ಅಕ್ಕಪಕ್ಕ ಯಾರು ಇಲ್ಲವೆ? ಯಾರಾದರೂ ಮನುಷ್ಯರಿದ್ದರೆ ಕಾಪಾಡಿ….. ಕಾಪಾಡಿ…. *(ಅಷ್ಟರಲ್ಲಿ ಪೂರ್ತಿ ಡ್ರೆಸ್ಸು ಧರಿಸಿಲ್ಲದ, ಆದರೆ ಈಗಲೂ ಧರಿಸಿಕೊಳ್ಳುತ್ತಿರುವ ಜಜ್ ಬರುವನು. ವಯಸ್ಸು ೫೫ರ ಮೇಲಾಗಿದೆ. ಮಾತಿನಿಂದ ಇವನು ಉತ್ತರ ಕರ್ನಾಟಕದವನೆಂದು ಗೊತ್ತಾಗುತ್ತದೆ. ಬಾಯಲ್ಲಾಗಲಿ, ಹೃದಯದಲ್ಲಾಗಲಿ ಮೌಲ್ಯಗಳ ಅರಿವಿಲ್ಲದವನು.)*

ಜಜ್ : ಛೇ ಹೋಗೋ ನಿನ ಮಂಜಾಳ ಹೋಗ್ಲಿ. ಆ ಹೆಂಗಸು – ಅವಳಪಾ ನನ್ನ ಕೀಪಾ, ನಾ ಕೆಟ್ಟದಾಗಿ, ಚರಂಡಿ ಹಾಂಗ ನಾರತೀನಂತ ಅಪಪ್ರಚಾರ ಮಾಡುತಾಳ. ಅಲ್ಲಲೇ ಕೇಬಿ, ನಾ ಹಾಂಗ ನಾರತೀನೇನೊ? ಇಡೀ ದೇಶದಾಗ ನನ್ನಷ್ಟು ಅತ್ತರ ಎಣ್ಣಿ ಯಾರೂ ಹಚ್ಚೂದಿಲ್ಲ, ಗೊತ್ತ? ನಾ ಸುಮಕಿರತೀನ? ಮೂಗ ಕೊಯ್ತೀನಿ ಅಂತ ಹೇಳಿದೆ, ಸಿಟ್ಟ ಬಂದಾಗ. ಆ ಮ್ಯಾಲ ಕೊಯ್ಲಿಲ್ಲ ಅಂತ ಇಟ್ಟಕ. ಆಕೀ ಮಾತ ಕೇಳಿ ಕೇಳಿ ಎಲ್ಲಿ ನಾರತೀನೇನೋ ಅಂತ ಸಂಶೆ ಬರಾಕ ಹತ್ತೇತಿ, ಅದಕ್ಕ ನಾ ಇವತ್ತಿಂದ ಹೆಸರ ಚೇಂಜ್ ಮಾಡಿಕೊಂಡ ಹೊಸ ಹೆಸರ ಇಟಕೋಬೇಕಂತೀನಿ.

ಕೇಬಿ : ಹೊಸ ಹೆಸರು? ಏನಂತ?

ಜಜ್ : ಇಂದಿರಾಗಾಂಧಿ! ಹ್ಯೆಂಗೈತಿ?

ಜಜ್ : ಉಚ್ಚೀ ಕುಡೀಬೇಕಾಗತದ ಅಷ್ಟ. ನಾ ಒಂದ ಅಂದರ ಮಗಾ ತಾ ಒಂದ ಹೇಳತಾನ. ನಾ ಇಂದಿರಾಗಾಂಧಿ, ನೀ ಮೊರಾರ್ಜಿ ದೇಸಾಯಿ ಆದರ ಮಗನ ಕನ್‌ಫ್ಯೂಜನ್ ಆಗತದಷ್ಟ. ಆವಾಗ ಯಾರ ಜೋಡಿ ಯಾರ ಮಾತಾಡತಾರಂತ ಗೊತ್ತs ಆಗೋದಿಲ್ಲ. ಸುಮ್ಮನ ನೀ ಕೇಬಿ ಆಗು; ನಾ ಜಜ್ ಆಗತೀನಿ. ಮತ್ತೇನ ಕೇಸಪಾ ಕೇಬಿ? ಅವನೌನ ಜಳಕಾ ಮಾಡೋಣಂದರ ಫೋನ್ ಮಾಡಿದೆಲ್ಲೋ ಬೇಬರಿಸಿ, ಅದೇನ ಕೇಸ ಒದರು, ಕುರ್ಚಿಗಿರ್ಚಿ ಹಾಕೊ… *(ಕೇಬಿ ಕುರ್ಚಿ ಮುಂದೆ ಟೇಬಲ್ಲಿಡುವನು, ಜಜ್ ತನ್ನ ಜೇಬಿನಿಂದ ಸುತ್ತಿಗೆ ತೆಗೆದು 'ಆರ್ಡರ್ ಆರ್ಡರ್ ಎಂದು ಕೂಗಿ ಸುತ್ತಿಗೆಯಿಂದ ಟೇಬಲ್ ಗುದ್ದುವನು.)*

ಕೇಬಿ : ಯುವರ್ ಹಾನರ್…..

ಜಜ್ : ಮಂಗ್ಯಾನ ಮಗನ, ಮಿಲಾರ್ಡನ್ನಲೇ. ನಾ ಸುಪ್ರೀಂ ಕೋರ್ಟ್ ಜಜ್ಜಾಗಾವಿದ್ದೀನಿ. ಗೊತ್ತಾತೇನ?

ಕೇಬಿ : ಮಿಲಾರ್ಡ್, ಹಪರಾದಿ ಎಸರು ಪಿ. ಎನ್. ಶಿವರಾಮು –ಹಂತ.

ಜಜ್ : ಇವನs ಏನ ಶಿವರಾಮು ಅಂದರ?

ಕೇಬಿ : ಎಸ್ ಯುವರ್…..ಮಿಲಾರ್ಡ್,

ಜಜ್ : ಅಪರಾಧ ಒಪ್ಪಿಕೊಳ್ತಾನೋ ಹೆಂಗ?

ಕೇಬಿ : ಒಪ್ಪಿಕೊಳ್ತಾನೆ. ಆದರೆ ಕನಸಿನಲ್ಲಿ ಖೂನಿ ಮಾಡಿದಾನಂತೆ.

ಜಜ್ : ನಿನಾಪ್ಪನ, ಕನಸಿನಾಗs ಖೂನಿ ಖರೆ ಮಾಡಲಿ ರಕ್ತ ಬರತೈತಿಲ್ಲೊ?

ಕೇಬಿ : ಎಸ್. ಮಿಲಾರ್ಡ್.

ಜಜ್ : ಆಯ್ತು ಮತ್ತ, ರಕ್ತ ಬಂದದ್ದೆಲ್ಲಾ ಖೂನಿ ಅನಬೇಕಪ್ಪ. ಸುರು ಮಾಡು ಲಗು ಹೋಗಿ ಜಳಕಾ ಮಾಡತೀನಿ.

ಕೇಬಿ : *(ಶಿವಣ್ಣನಿಗೆ)* ಹೇನೇ ಮಾತಾಡಿದರೂ ಹೆಚ್ಚರದಿಂದ ಮಾತಾಡು. ಒಪ್ಪಿಕೊಂಡು ಮಾತಾಡು. ನಿನ್ನ ಎಸರು ಪಿ. ಎನ್. ಶಿವರಾಮು ತಾನೇ? ಎಸ್ಸಾರನ್ನು.

ಶಿವಣ್ಣ :  ………

ಜಜ್ : ಅವಗೇನ ಬೇಕೋ ಅದನ್ನೊದರು. ಮುಂದಿಂದ ನಾ ನೋಡತೀನಿ ಖರೇಕ್ಕ ಭಾರೀ ಕಿಮ್ಮತ್ತ ಕೊಡೊ ಮನಿಶಾ ನಾನು.

ಕೇಬಿ : ಎಸ್. ಬಿ. ಶಿವಣ್ಣ ಅಂತ ನನ್ನ ಹೆಸರು.

ಜಜ್ : ಹಾಂಗ ಹೇಳಿದರ ಅವ ನಿನ್ನ ಬಿಡೋದಿಲ್ಲ, ಸುಮ್ಮನ ಅವ ಹೇಳಿದಾಂಗ ಒದರಲೇ.

ಶಿವಣ್ಣ : ಎಸ್ಸಾರ್

ಕೇಬಿ : ಈ  ಯೆಂಗಸಿಗೂ ನಿಂಗೂ ಹೇನ್ಸಂಬಂದ?

ಶಿವಣ್ಣ : ಏನು ಇಲ್ಲ.

ಕೇಬಿ : ಏನು, ಭಾರತ ಮಾತೆಗೂ ನಿನಗೂ ಏನೂ ಸಂಬಂಧ ಇಲ್ಲವ? ಈ ದೇಶಕ್ಕೂ ನಿನಗೂ ಏನು ಸಂಬಂಧ ಇಲ್ಲವ?

ಶಿವಣ್ಣ : ಇದೆ.

ಕೇಬಿ : *(ಪತ್ರಿಕೆ ತೋರಿಸುತ್ತ)* ಆಂಗಿದ್ದರೆ ಈ ಯೆಂಗಸಿನ್ನಲ್ಲಿ ನೋಡಿದ್ದೆ?

ಶಿವಣ್ಣ : ಗುಡ್ಡ ಬೆಟ್ಟಗಳಲ್ಲಿ. ಹರಿಯೋ ನದಿಗಳಲ್ಲಿ, ನನ್ನವರ ಹಸಿವಿನಲ್ಲಿ, ನಿಮ್ಮ ನೀಲಿ ಕಣ್ಣುಗಳಲ್ಲಿ…..

ಜಜ್ : ಭಲೇ ಭಲೇ! ಏ ಕೇಬಿ, ಇವ ಕವಿ ಏನಲೆ?

ಕೇಬಿ : ಕವಿ ಆಗಿದ್ದರೆ ಅದು ಅವನ ಎರಡನೆ ಅಪರಾದ ಮಿಲಾರ್ಡ್.

ಜಜ್ : ಲೇ ಕೇಬಿ ಇನ್ನ ನೀ ಸುಮಕಿರೋ, ಹೇಳಪ. ಆ ಹೆಂಗಸನ್ನ ಯಾಕ ಕೊಂದಿ?

ಶಿವಣ್ಣ : ಕೊಂದಿಲ್ಲ. ನಾನವಳನ್ನ ನೋಡಿದ್ದು ಕನಸಿನಲ್ಲಿ.

ಜಜ್ : *(ಉಳಿದವರು ಗಾಬರಿಯಾಗುವಂತೆ ನಕ್ಕು)* ಕನಸಿನಾಗ? ಎಲೀ ಇವಳವ್ವನ, ನಿನ ಕನಸಿನಾಗ ಬಂದಿದ್ದಳ ಇವಳು? *(ಪತ್ರಿಕೆಗೆ ಕೈಚಾಚಿ ಚಷ್ಮ ಹಾಕಿಕೊಂಡು ನೋಡುತ್ತ)* ಲೇ ಕೇಬಿ. ಯಾರಲಾ ಇವಳು? ಇದ್ಯಾವುದೋ ರೆಡ್‌ಲೈಟ್ ಕೇಸಿದ್ಧಾಂಗೈತೆಲ್ಲ ಇದು!

ಕೇಬಿ : ಮಿಲಾರ್ಡ್ ಅವಳು ಭಾರತಾಂಬೆ! ಭಾರತಾಂಬೆ! ಜೈಹಿಂದ್!

ಜಜ್ : ಇನ್ನ ಬಾಯಿ ಮುಚ್ಚಿಕೋ. ಹೇಳಪ, ಈ ತಾಯೀನ್ನ ಕನಸಿನಾಗ ಹೆಂಗ ಕೊಂದಿ?

ಶಿವಣ್ಣ : ಕನಸಲ್ಲಿ ಆ ದಿನ ವಾಕಿಂಗ್ ಹೋಗಿದ್ದೆ. ಪಾರ್ಕಿನ ಹಸಿರಲ್ಲಿ ಅಡ್ಡಾಡಿ ಮನೆಗೆ ಬಂದೆ. ನೋಡಿದರೆ ನಾನು ಹೆಜ್ಜೆ ಊರಿದಲ್ಲೆಲ್ಲ ರಕ್ತದ ಕಲೆ ಇತ್ತು!

ಕೇಬಿ : ಮಿಲಾರ್ಡ್ ಇವ ಖೂನಿ ಅನ್ನೋದಕ್ಕೆ ಬೇರೆ ಸಾಕ್ಷಿ ಬೇಕೆ?

ಶಿವಣ್ಣ : ಕಾಲಿಗೆಲ್ಲೀ ರಕ್ತ ಅಂಟಿಕೊಂಡಿತು ಅಂತ ಹೆಜ್ಜೆಗುಂಟ ವಾಪಸ್ ಹೋದೆ. ಪಾರ್ಕಿನ ತುಂಬ ಥರಾವರಿ ಬಳ್ಳಿ. ಬಳ್ಳಿ ತುಂಬ ಥರಾವರಿ ಹೂವು-ಮುಂಜಾನೆ ಮಂಜಲ್ಲದ್ದಿ ಒದ್ದೆಯಾಗಿದ್ದವು. ಹಾಗೇ ನೋಡ್ತರಬೇಕಾದರೆ ಒಂದೊಂದು ಹೂನಲ್ಲೂ ಒಂದೊಂದು ಕಣ್ಣಿದ್ದವು! ಹೂ ಅರಳಿದ ಹಾಗೆ ಕಣ್ಣು ತೆರೆದವು, ಪೂರ್ತಿಯಲ್ಲ ಅರ್ಧ.

ಜಜ್ : ಭೇಶ್ ಭಲೆ ಕನಸಪ್ಪ ಇದು! ನಿನ್ನೆ ನನಗೂ ಒಂದುಕನಸು ಬಿದ್ದಿತ್ತು. ಅಂಧಾಂಗ ನಾ ಕನಸಿನಾಗ ಏನ ಮಾಡತಿದ್ದೆ? ಹಾ ನೆನಪಾಯ್ತು ನಿದ್ದೀ, ಮಾಡತಿದ್ದೆ!

ಶಿವಣ್ಣ : ನಾನು ಗಾಬರಿ ಆಗಲಿಲ್ಲ; ಹಾಗೇ ನೋಡಿದೆ! - ಎಲ್ಲಾ ಕಣ್ಣಲ್ಲೂ ನೀರಿತ್ತು!

ಕೇಬಿ : ಇಬ್ಬನಿ ಹನಿ ಇರಬೇಕು.

ಶಿವಣ್ಣ : ನಾನೂ ಹಾಗೇ ಅಂದುಕೊಂಡೆ. ಆದರೆ ಖಂಡಿತ ಅದು ಕಣ್ಣೀರೇ!

ಕೇಬಿ : ಕಣ್ಣಲ್ಲಿ ಬರೋದು ಕಣ್ಣೀರೇ ಆಗಬೇಕಾದ್ದಿಲ್ಲ.

ಜಜ್ : *(ಕೇಬಿಗೆ)* ಆರ್ಡರ್ ಆರ್ಡರ್. ಬಾಯ್ಮುಚ್ಚಲೇ ಬೋಳೀ ಮಗನ. ಕಣ್ಣಾಗೇನ ಉಚ್ಚಿ ಬರತಾವ? ಪ್ರೊಸೀಡ್...

ಶಿವಣ್ಣ : ಆದ್ಯಾಕೆ ಈ ಹೂ ಅಳತಾ ಇವೆ ಅಂತ ವಿಚಾರ ಮಾಡಿದೆ.

ಕೇಬಿ : ಮಿಲಾರ್ಡ್ ಈತ ವಿಚಾರ ಮಾಡಿದ್ದರಿಂದ ಬುದ್ದಿಜೀವೀನೇ! ಬುದ್ದಿಜೀವಿ ಆದ್ದರಿಂದ ದೇಶದ್ರೋಹೀನ ಇರಬೇಕು.

ಜಜ್ : ಬಾಯ್ಮುಚ್ಚತೀಯ, ಇಲ್ಲಾ ಬಾಯಾಗ ಹೇಲಂತೀಯ? ಪ್ರೊಸೀಡ್..

ಶಿವಣ್ಣ : ಹೀಗೆ ವಿಚಾರ ಮಾಡ್ತ ಮುಂದೆ ಹೋಗ್ತಿರಬೇಕಾದರೆ ವಿಚಿತ್ರೋ ವಿಚಿತ್ರಸಿಳ್ಳು ಕೇಳಿಸ್ತು. ನನ್ನನ್ನ ಯಾರೋ ಬೇಟೆ ಆಡೋದಕ್ಕೆ ಹೊಂಚಿದಾರೆ ಅನ್ನಿಸ್ತು. ಆವಾಗ ಗಾಬರಿ ಆಯ್ತು.

ಜಜ್ : ಎಲಾ ಕೇಬಿ, ನನ್ನ ಮಗನ, ಪಾಪ ಇವನ ಕನಸಿನಾಗೂ ನುಗ್ಗಿದ್ದೇನೋ?

ಕೇಬಿ : *(ಹೆಮ್ಮೆಯಿಂದ)* ಅದಕ್ಕೇ ನನಗೆ ವಿಷಯ ತಿಳಿಯೋದು ಮಿಲಾರ್ಡ್. ಮುಂದೆ ಹೇಳು.

ಶಿವಣ್ಣ : ಏನು ಮಾಡೋದು? ಓಡಿ ಬಿಡಲೇ-ಅಂತ ಆ ಕಡೆ ಈ ಕಡೆ ನೋಡಿದೆ. ಇನ್ನೇನು ಹೆಜ್ಜೆ ಇಡಬೇಕು-ಅಷ್ಟರಲ್ಲಿ ಯಾರೋ ನನ್ನ ಭುಜ ತಟ್ಟಿದರು. ತಿರುಗಿ ನೋಡಿದೆ, ಒಬ್ಬ ಬಿಳೀ ಮುದುಕಾ ನಗತಾ ನಿಂತಿದ್ದ.

ಜಜ್ : ಮುದುಕ ನಿಂತಿದ್ದ?

ಶಿವಣ್ಣ : ಹೌದು.

ಜಜ್ : ಹೆಂಗಿದ್ದ?

ಶಿವಣ್ಣ : ಸೊಂಟದ ಸುತ್ತ ಚೆಂದಿ ಬಟ್ಟೆ ಸುತ್ತದ್ದ. ಚಷ್ಮ ಇದ್ದಂಗಿತ್ತು. ಇಷ್ಟು ನೆನಪಿದೆ.

ಕೇಬಿ : ತಲೆ ಮೇಲೆ ಗಾಂಧೀಟೋಪಿ ಇತ್ತ?

ಶಿವಣ್ಣ : ನನ್ನ ತಲೆ ಮೇಲಿತ್ತು.

ಕೇಬಿ : ಮಿಲಾರ್ಡ್ ಗಾಂಧೀಟೋಪಿ ಹಾಕೋದು ಕಾನೂನು ಪ್ರಕಾರ ದೇಶದ್ರೋಹ.

ಜಜ್ : ಸುಮ್ಕಿರೋ ಮಂಗ್ಯಾನ ಮಗನ, ಏನಲೇ ನಿನ್ನ ಕನಸಿನಾಗ ಮಹಾತ್ಮಗಾಂಧೀ ಬಂದಿದ್ದನ?

ಶಿವಣ್ಣ : ಗಾಂಧಿ ಥರ ಇದ್ದ!

ಜಜ್ : ಗಾಂಧೀ ಪಿಕ್ಚರ್ ಬಂದಿತ್ತಲ್ಲ. ಆ ಗಾಂಧೀ ಹಾಂಗಿದ್ದನ? ಇಲ್ಲಾ ಹಳೀ ಪೋಟೋದಾಗಿನ ಗಾಂಧೀ ಹಾಂಗಿದ್ದನ? ಖರೇ ಹೇಳು. ನಿನ್ನ ಕನಸಿನಾಗ ಯಾವ ಗಾಂಧಿ ಬಂದಿದ್ದ? ಯಾಕಂದರ ಈಗೀಗ ಭಾಳ ಮಂದಿ ಗಾಂಧೀ ಆಗ್ಯಾರ.

ಶಿವಣ್ಣ : ಚರಿತ್ರೆ ಪುಸ್ತಕದಲ್ಲಿರೋ ಪೋಟೋ ಥರ ಇದ್ದರು.

ಜಜ್ : ಕತ್ತೀಮಗನ, ಮಹತ್ಮಾಗಾಂಧೀ ಅಂದರ ಅವನs. ಆರ್ಡರ್ ಆರ್ಡರ್. ಇನ್ನ ಮುಂದ ಮುದುಕ ಮುದುಕ ಅನ್ನಬೇಕಾದಲ್ಲಿ ಗಾಂಧೀ ಗಾಂಧೀ ಅನ್ನು. ಅಪ್ಪಿ ತಪ್ಪಿ ಮುದುಕ ಅಂದರ ಸಜೀವ ಶಿಕ್ಷಾ ಕೊಡತೀನಿ. ಹುಷಾರ್! ಮುಂದ ಹೇಳು.

ಶಿವಣ್ಣ : ಮುದುಕ ಅಂದರ ಗಾಂಧೀ ಹೇಳಿದರು: ಈ ದೇಶದಲ್ಲಿ ದಶಾವತಾರವಾದ ಕಾರಣ ಬೇಕೆ? ಹಾಗಿದ್ದರೆ ಅಲ್ಲಿಗೆ ಹೋಗು ಅಂತ ಎದುರಿಗೆ ಬೆರಳು ತೋರಿದರು. ಎದುರಿಗೊಂದು ಅರಮನೆ, ಝಗಮಗಾಂತ ಹೊಳೀತಿತ್ತು. ಆದರೆ ಹೊರಗಡೆ ಒಬ್ಬರೂ ಇರಲಿಲ್ಲ. ಸೀದಾ ಒಳಗ್ಹೋದೆ. ಒಳಗೂ ಜನ ಇರಲಿಲ್ಲ. ಅಲ್ಲೊಂದು ಸಿಂಹಾಸನ. ಅದರ ಮೇಲೊಂದು ಮುದಿಕೀ ಹೆಣ ಕೂತಿತ್ತು. ಆಕೆ ಭುಜದ ಮೇಲೆ ಒಂದು ಕಾಗೆ ಕೂತು ಕುಕ್ಕಿ ಕುಕ್ಕಿ ಅವಳ ಕಣ್ಣಿನ ಪಿಸುರು ತಿಂತಿತ್ತು!

ಜಜ್ : ಇದೊಳ್ಳೇ ಹಿಚ್‌ಕಾಕ್ ಪಿಚ್ಚರಧಾಂಗೈತಲ್ಲೊ! ನೀ ಪತ್ತೇದಾರಿ ಕಾದಂಬರಿ ಭಾಳ ಓದತೀಯೇನು?

ಶಿವಣ್ಣ : ಇಲ್ಲ ಸ್ವಾಮಿ,

ಜಜ್ : ನೀ ಮುದುಕೀ ಹೆಣದ ಮುಂದ ನಿಂತಿದ್ದೆಲ್ಲ. ಆಗ ಗಾಂಧೀ ಏನ ಮಾಡತಿದ್ದ? ಗೆಣಸ ಕೆರೀತಿದ್ದನೇನು?

ಶಿವಣ್ಣ : ಅವರು ಯಾವಾಗಲೋ ಮೌನವಾಗಿದ್ದರು ಸ್ವಾಮಿ.

ಜಜ್ : ಗಾಂಧೀಗೆ ಮಾಯಾಮಾಟದ ವಿದ್ಯೆ ಗೊತ್ತಿತ್ತ? ಮುಂದಹೇಳು.

ಶಿವಣ್ಣ : ಆ ಮುದುಕೀ ಹೆಣ ಅಂತ ಹೇಳಿದೆ-ಅದು ನನ್ನ ಕಂಡ ಕೂಡಲೇ ಚಪ್ಪಾಳಿತಟ್ಟಿ ನಗೋದಕ್ಕೆ ಸುರುಮಾಡಿತು. ನಗುತಾ ನಗುತಾ ಹೇಳಿತು; ನನ್ನ ಆತ್ಮಕ್ಕೆ ಒಂದೂ ಬಿಳಿ ಕೂದಲಿಲ್ಲ. ನಾನೀಗ ಮತ್ತೆ ಇಪ್ಪತ್ತರ ಯುವತಿ. ನಿನಗೆ ಬೇಕಿದ್ದರೆ ಮತ್ತೆ ಪಶುವಿನ ಮಾಂಸವಾಗಬಲ್ಲೆ. ಪಾಪ ಮಾಡಿದವರು ಪಾಪದ ಬಗ್ಗೆ ಹೇಸಿಕೊಳ್ಳುವಷ್ಟು ಹಾಡು ಹೇಳಬಲ್ಲೆ, ಬಾ...ರಾಜಾ ಬಾ"…. ಅಂತಂದ್ಲು.

ಜಜ್ : ಯಾರು? ಆ ಮುದಿಕೀನ?

ಶಿವಣ್ಣ : ಹೌದು ಸ್ವಾಮಿ.

ಜಜ್ : ನೀನೇನ್ ಮಾಡದಿ? ಕರದ ಕೂಡ್ಲೆ ಹೋಗಿಬಿಟ್ಟೆಯಾ?

ಶಿವಣ್ಣ : ಸಾಧ್ಯವೇ ಸ್ವಾಮಿ? ಅವಳೋ ಭಯಕಂರ ಹೆಣ. ನನಗೋ ಭಯ, ಕಿರಚಬೇಕಂದರೆ ಧ್ವನಿ ಇಲ್ಲ. ಓಡಬೇಕೆಂದರೆ ಕಾಲೇಳಲಿಲ್ಲ. ಮುದುಕಿ ಕೂತಲ್ಲಿಂದಲೇ ಕೈಚಾಚಿ ನನ್ನ ಕತ್ತು ಹಿಸುಕಿದಳು!

ಜಜ್ : ಆಮ್ಯಾಲೆ?

ಶಿವಣ್ಣ : ಕೊನೆಗೆ ನನ್ನ ಕೈಗೆ ಹ್ಯಾಗೋ ಅವಳ ಕತ್ತು ಸಿಕ್ಕಿತು. ಹಿಡಿದು ದೂಕಿದೆ. ಜೋಲಿತಪ್ಪಿ ಬಿದ್ದಳು. ತಕ್ಷಣ ಎಚ್ಚರಾಯ್ತು.

ಕೇಬಿ : ಇದೆಲ್ಲ ಸುಳ್ಳು ಮಿಲಾರ್ಡ್. ಅವಳು ಇವನ ಕತ್ತಿಗೆ ಕೈಹಾಕಿದ್ದು ಸುಳ್ಳು.

ಜಜ್ : ಲೇ ಕೇಬಿ, ಯಾಕ ಗಂಟಲಾ ಹರಕೋತಿಯೋ ಜಜ್‌ಮೆಂಟಾಗಲೇ ಬರದಾಗೇತಿ, ಯಾಕ ಗದ್ದಲಾ ಹಾಕತಿ?

ಕೇಬಿ : ಜಜ್ಮೆಂಟಾಗಲೇ ಬರದಾಗಿದೆಯೆ?

ಜಜ್ : ನಾ ಬರದಿಲ್ಲವೋ-ಮ್ಯಾಲಿನವರು ಬರದು ಸೈಕ್ಲೋಸ್ಟೈಯಿಲ್ ಮಾಡಿ ಸಾವಿರ ಕಾಪಿ ಕಳಿಸ್ಯಾರ. ಸೈಹಾಕಿ ಓದೋದಷ್ಟ ನನ್ನ ಕೆಲಸ. ಘನಶಾಣ್ಯಾ ಮಗ ನಾನು ಮತ್ತ! ಅಷ್ಟೂ ಕಾಪಿಗೆ ಆಗಲೇ ಸೈಹಾಕಿ ಬಿಟ್ಟೀನಿ.

ಕೇಬಿ : ಮಿಲಾರ್ಡ್ ಈ ಕೇಸಿನ ಬಗ್ಗೆ ಏನ ಜಜ್‌ಮೆಂಟ್ ಬರದೀರಿ?

ಜಜ್ : ಕೇಳು; ಈ ಸೂಳೀಮಗ, ಹೆಸರು ಪಿ.ಎನ್.ಶಿವರಾಮ ದೇಶದ್ರೋಹಿ ಇದ್ದಾನ. ಇವಗ ಆಜನ್ಮ ಪರ್ಯಂತ ಕಠಿಣ ಸಜಾ ಸಿಗತಕ್ಕದ್ದು. ಇವಗ ಹಿಂಗ್ಯಾಕ ಶಿಕ್ಷಾ ಕೊಟ್ಟರಿ ಅಂತ ಯಾರಾದರೂ ಕೇಳಿದರ ಅವರ ಮುಕಳ್ಯಾಗ ಗೂಟಾ ಬಡೀ ತಕ್ಕದ್ದು. ಸಾಕೇನ?
*(ಅಷ್ಟರಲ್ಲಿ ಪಾರ್ವತಿ ಒಳಗಡೆಯಿಂದ ಕಿಟಾರನೆ ಕಿರುಚುವಳು. ಪೊಲೀಸು ತಪ್ಪಿ ತಸ್ಥನಂತೆ ಹೊರಬರುವನು,)*

ಜಜ್ : ಭಾರತಾಂಬಿ ಇಲ್ಲಿಗೇ ಬಂದಳೇನ?

ಪೊಲೀಸ್ : ಅಲ್ಲ. ಇವನ ಹೆಂಡತಿ.

ಜಜ್ : ಯಾಕ ಒದರಿದಳು?

ಪೊಲೀಸ್ : ಅವಳನ್ನ ಮಾತಿನಲ್ಲಿ ಮೆಲ್ಲಗೆ ಪಾರ್ಕಿಗೆ ಕರೆದುಕೊಂಡು ಹೋಗಿದ್ದೆ. ಪಾರ್ಕಿನಲ್ಲಿ ಥರಾವರಿ ಹೂ ತೋರಿಸಿದೆ. ತೋರಿಸ್ತ ತೋರಿಸ್ತ ಅವಳು ಹಿಡಿದುಕೊಂಡಿರೋ ಹೂವನ್ನ ಅದುಮಿದೆ. ಅದು ಹರಿದ್ಹೋಗಿ ಒದರಿದಳು. ಅಷ್ಟೇ ಸ್ವಾಮಿ.

## ಬೆಂಬತ್ತಿದ ಕಣ್ಣು

## ದೃಶ್ಯ ಒಂದು

*(ಕೈ ಬಳೆಗಳ ಉಲುಹು. ಪೆಟ್ಟಿಗೆ ತೆರೆದ-ಮುಚ್ಚಿದ ಸಪ್ಪಳ. ಕುರ್ಚಿ ಆಚೀಚೆ ಸರಿಸಿದ ಪುಸ್ತಕ ಚೆಲ್ಲಿದ ಸದ್ದು. ತುಂಬ ಗಡಿಬಿಡಿ)*

ಲಕ್ಷ್ಮೀ : *(ಒಳಗಿನಿಂದ)* ಓ ಬಂದೆ…. *(ಬಳಿ ಬಂದು)* ಏನ್ರೆಮ್ಮಾ….? …. ಇದೇನ್ರೀ ಸಾಮಾನೆಲ್ಲ ಚೆಲ್ಲಾಪಿಲ್ಲಿ? ಈಗ ತಾನೇ ಸರಿಯಾಗಿ ಜೋಡ್ಸಿ ಇಟ್ಟು ಹೋಗಿದ್ದೆ.

ಧ್ವನಿ : ಕೂಡದು! ಈ ಮನೆ ಶಿಸ್ತಿನಲ್ಲಿ ಎಂದೂ ಇರಕೂಡದು!

ಉಷಾ : ನನ್ನನ್ನೇ ಆಕ್ಷೇಪಿಸುತ್ತೀ ಏನೇ? ಇರಲಿ. ಈ ಬೀಗದ ಕೈ ಯಾರೇ ಇಲ್ಲಿ ಇಟ್ಟಿದ್ದು?

ಧ್ವನಿ : ಅರಸುತಿಹ ಲತೆ ಕಾಲ ತೊಡಕಲು ಹರಿದು ಬಿಸಡುವರುಂಟೆ?

ಲಕ್ಷ್ಮೀ : ಸಾಹೇಬರೇ ಮರೆತು ಇಟ್ಟಿರಬೇಕು.

ಉಷಾ : ಸರಿ. ನೀನು ನಿನ್ನ ಕೆಲಸಕ್ಕೆ ಹೊರಟ್ಹೋಗು.
*(ಒಮ್ಮೆಲೆ ಶಾಂತ ವಾತಾವರಣ. ತನಗೆ ತಾನೇ ನುಡಿವವರಂತೆ ಉಷಾ)*

ಉಷಾ : ಬೀಗದ ಕೈ! ಅವರು ಬೇಕೆಂದೇ ಇದನ್ನಿಲ್ಲಿ ಇಟ್ಟಿರಲಾರರಷ್ಟೇ? *(ಮತ್ತೆ ತುಸು ಹೊತ್ತು ನೀರವ.)* ಲಕ್ಷ್ಮೀ… ಈ ಸೀರೆ ರವಿಕೆಗಳನ್ನೆಲ್ಲ ಸರಿಯಾಗಿ ಮಡಿಚಿ ಬ್ಯಾಗಿಗೆ ಸೇರಿಸು. ವೇಳೆ ಇಲ್ಲ. ಬೇಗ ಮುಗೀಬೇಕು.

ಲಕ್ಷ್ಮಿ : ಆಗಲ್ರಮ್ಮ. *(ಸೀರೆ ಮಡಚಿ ಬ್ಯಾಗಿಗೆ ಸೇರಿಸುವ ಸಪ್ಪಳ.)*

ಉಷಾ : ಲಕ್ಷ್ಮೀ ಅವರೇನಾದರೂ ಹೋಗುವಾಗ ಹೇಳಿದ್ದಾರೇನು?

ಲಕ್ಷ್ಮಿ : ಏನೂ ಇಲ್ರಿ. ಅಡ್ಡಾಡಿಕೊಂಡು ಬರ್ತೀನೀಂತ ಶಂಕರನ ಕೈ ಹಿಡಿದುಕೊಂಡು ಹೋದರು.

ಉಷಾ : ಸರಿ, ಸರಿ. ಈ ಸೀರೆ ನನಗೆ ಹ್ಯಾಗೆ ಒಪ್ಪುತ್ತೆ ನೋಡು?…

ಲಕ್ಷ್ಮೀ : ಏನ್ಹೇಳ್ಬೇಕ್ರೆಮ್ಮಾ? ಲಕ್ಷ್ಮಿ! -ಸಾಕ್ಷಾತ್ ಲಕ್ಷ್ಮಿ ಇಳಿದು ಬಂದ್ಹಾಗ ಕಾಣ್ತೀರಿ.

ಉಷಾ : ಶೀನೂ ಕೂಡ ಹಾಗೇ ಹೇಳ್ತಿದ್ದ ಕಣೇ- ಸ್ವರ್ಗದಿಂದ ಊರ್ವಶಿ ಇಳಿದು ಬಂದ ಹಾಗೆ ಕಾಣ್ತೀರಿ- ಅಂತ ಅಲ್ವೇನೆ?

ಲಕ್ಷ್ಮಿ : ಅದ್ಸರಿ, ಇದೇನ್ರೆಮ್ಮಾ ಈ ಹೊತ್ತಿನಲ್ಲಿ ಸೀರೀನೆಲ್ಲಾ ಗಂಟು ಕಟ್ತಾ ಇದೀರಿ?

ಉಷಾ : *(ಪೆಚ್ಚಾಗಿ)* ಓ...ಹ್... ನಾನು ಇನ್ನೆರಡು ದಿನಗಳಲ್ಲಿ ತೌರಿಗೆ ಹೋಗೋಳಿಲ್ಲವೆ? ಈಗಿನಿಂದಲೇ ಸಿದ್ಧತೆ ಮಾಡಿಟ್ಟಕೋ-ಬೇಕೂಂತ. ಹೊರಟ ದಿನವೇ ಅವಸರ ಮಾಡಿದರೆ ತುಂಬ ಕಷ್ಟವಾಗುತ್ತಲ್ಲವೆ?

ಲಕ್ಷ್ಮೀ : ಹೌದ್ರಿ.... ಆಂ. ಒಂದು ಸುದ್ದಿ ಕೇಳಿದಿರಾ ತಾಯಿ?

ಉಷಾ : ಏನು?

ಲಕ್ಷ್ಮಿ : ನಮ್ಮ ಸಾಹೇಬರಿರೋ ಸ್ಕೂಲಿನ ಹತ್ತಿರ ರತ್ನಮಾಂತ ಒಂದು ಹುಡುಗಿ ಇತ್ತು ಗೊತ್ತಾ?

ಉಷಾ : ಆ ಶಿವರಾಮರಾಯರ ಹಿರಿಯ ಮಗಳು?

ಲಕ್ಷ್ಮಿ : ಹೂಂ. ಅವಳೇ. ತನ್ನ ಗಂಡನ ಬಿಟ್ಟು ಗೌಡರ ಮಗನ್ನ ಕೂಡಿಕೊಂಡು ಓಡಿ ಹೋದಳಂತೆ!

ಉಷಾ : *(ಉದ್ವೇಗದಿಂದ)* ಲಕ್ಷ್ಮೀ *(ಬಿರುಸಾಗಿ ತೇಗುತ್ತ)* ಯಾರು ಹೇಳಿದರು ನಿನಗೀ ಸುದ್ದೀನ್ನ?

ಲಕ್ಷ್ಮಿ : ಅದ್ಯಾಕ್ರಮ್ಮಾ? ಊರ ತುಂಬ ಹಬ್ಬೇತಲ್ಲ- ಡಣಾಡಂಗುರದ್ಹಂಗ! ನೀವಾಕ್ಯಿಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಕು ಬಿಡಿ. ಯಾರದೋ ಸುದ್ದಿ- ಯಾರದೋ ಮಾತು. ನಮಗೇನು? ಸಧ್ಯ ನಮಗೆ ಸಂಬಂಧಿಸಿದ್ದೇನೊ ಅಲ್ಲಲ್ಲ, ಪಾಪ.... ಗಂಡ ಭಾಳ ಸತ್ಯ ಮನುಷ್ಯ! ಅವಳಿಗೂ ಕೈ ಕೊಟ್ಟಳು ಚಾಂಡಾಲಿನಿ.

ಉಷಾ : *(ಎತ್ತರದ ಧ್ವನಿ)* ಚಾಂಡಾಲಿನಿ? ಯಾರಿಗೆ ನೀನಂದದ್ದು ಹಾಗೆ? ಲಕ್ಷ್ಮೀ ....ಯಾರು ಚಾಂಡಾಲಿನಿ? ಯಾರಿಗೆ ನೀನಂದದ್ದು?

ಲಕ್ಷ್ಮಿ : ಇದೇನ್ರಿ ಈ ಹೊತ್ತು ಹೀಗೆಲ್ಲಾ ಆಡ್ತಾ ಇದ್ದೀರಿ? ಅವಳಿಗೆ- ಆ ಹುಡಿಗೆಗೆ ನಾನಂದದ್ದು? ಅಲ್ವೇನ್ರಿ ಮತ್ತೆ? ಆಕಳಂಥಾ ಗಂಡ. ಅಂಥವನಿಗೂ ಕೈ ಕೊಡೋದಂದ್ರೆ- ಎಂಥ ಚಾಂಡಾಲಿನಿ ಈ ಕಾಲದ ಹುಡಿಗೀರೇ ಹೀಗೆ.... ಇದೇನ್ರಿ, ನಿಮ್ಮ ಮುಖದ ಮೇಲೆ ಬೆವರು?

ಉಷಾ : *(ಚೇತರಿಸಿಕೊಂಡು)* ಓಹ್.... ಏ.... ನಿಲ್ಲ.... ತುಂಬ ಶಕೆ ಆಗ್ತಾ ಇದೆ ಅಲ್ಲವೇ? ಈ ಬೇಸಿಗೆ ಬೇರೆ ಎಂದು ಹಾಳಾಗಿ ಹೋಗುತ್ತೋ?

ಲಕ್ಷ್ಮಿ : *(ಕುಲುಕುಲು ನಕ್ಕು)* ಬಿಡ್ರಿ.... ನಮ್ಮಂಥಾ ದಡ್ಡರು ಮಾತನಾಡೋ ಹಾಂಗ ಮಾತನಾಡ್ತೀರಿ.... ಮಳೆಗಾಲ ಇದ್ದದ್ದನ್ನ ಬ್ಯಾಸ್ಗಿ ಅಂದ ಬಿಟ್ರಿ.

ಧ್ವನಿ : ಹೊರಗೆ ಮಳೆಗಾಲವಿದ್ದರೂ ಅವಳು ಮಾತ್ರ ಇನ್ನೂ ಸುಡುವ ಬೇಸಿಗೆಯಲ್ಲೇ ಇದ್ದಾಳೆ.

ಉಷಾ : ಓಹ್.... ಮರೆತುಹೋಗಿತ್ತು. ಸೀರೆ ಇಟ್ಟಾಯ್ತೇನು? ಸರಿ ಸರಿ ನೀನಿನ್ನು ಹೊರಟ್ಹೋಗು.

ಲಕ್ಷ್ಮಿ : ... ಹೂಂನ್ರಿ *(ಹೋಗುವಳು)*

*(ತುಸು ಸಮಯ ನೀರವ. ಆ ಮೇಲೆ ಬೀಗದ ಕೈ ಸದ್ದು, ಪೆಟ್ಟಿಗೆ ತೆರೆದು ಆಭರಣ, ದುಡ್ಡು ತೆಗೆದುಕೊಂಡ ಸಪ್ಪಳ.)*

ಲಕ್ಷ್ಮಿ : *(ಒಳಗಿನಿಂದ)* ಅಮ್ಮಾವ್ರs.... ಬಿಳೀ ರವಿಕೆ ಒಳಗೇ ಇದೆ. ಅದನ್ನು ತರಲೇನು?
*(ಗಡಬಡಿಸಿ ಒಮ್ಮೆಲೆ ಪೆಟ್ಟಿಗೆ ಮುಚ್ಚಿದ ಸಪ್ಪಳ. ಕೆಲ ಹೊತ್ತು ನೀರವ.)*

ಉಷಾ : ಅಡಿಗಡಿಗೂ ನನ್ನನ್ನು ಈ ಮನೆ ತಡೆಯುತ್ತಿದೆ. ಇಂಥ ಕಟುಕರಿಂದ ದೂರ- ಅತಿ ದೂರ- ನನ್ನ ಸುಖಕ್ಕೆ ಯಾರಿಂದಲೂ ಬಾಧೆ ಬಾರದಷ್ಟು ದೂರ- ಓಡಿಹೋಗಬೇಕೆಂದರೆ ನನ್ನ ಮಟ್ಟಿಗೆ ನನ್ನನ್ನು ಈ ಜಗತ್ತು ಬಿಡುತ್ತಿಲ್ಲ! ಓಹ್- ನಾನು ಇರಲಾರೆ- ಖಂಡಿತ ಇರಲಾರೆ- ನನ್ನಂಥವರು ಈ ಮನೆಯಲ್ಲಿ ಖಂಡಿತ ಇರಬಾರದು!

ಧ್ವನಿ : ಖಂಡಿತ ಇರಬಾರದು. ಸುರೆ ಇದ್ದೂ ಹಾಲಿನ ಭ್ರಾಂತಿ ಹುಟ್ಟಿಸುವ ಜನ, ಈ ಮನೆಯಲ್ಲಿ ಖಂಡಿತ ಇರಬಾರದು!

ಉಷಾ : *(ಕೇಳಿದವರಂತೆ)* ಯಾರು? ಯಾರದು ಹಾಗೆ ಮಾತನಾಡಿದವರು? ಲಕ್ಷ್ಮೀ... ಏ ಲಕ್ಷ್ಮೀ....

ಲಕ್ಷ್ಮಿ : *(ಓಡಿ ಬಂದ ಸದ್ದು)* ಏನ್ರಮ್ಮ?

ಉಷಾ : ಅವರು ಬಂದಿದ್ದಾರೆಯೇ?

ಧ್ವನಿ : ಅವರೂ ಎಂದಾದರೂ ನಿನ್ನ ದಾರಿಗೆ ಅಡ್ಡ ಬಂದುದುಂಟೆ?

ಉಷಾ : *(ಉದ್ರಿಕ್ತವಾಗಿ)* ಲಕ್ಷ್ಮೀ! ಲಕ್ಷ್ಮೀ! ಕೇಳಿದೆಯಾ? ಯಾರೋ ಹೀಗೆ ಹಿಂದೆ ನಿಂತು ನನ್ನನ್ನು ಅಣಕಿಸಿ ಮಾತನಾಡುತ್ತಿದ್ದಾರೆ! ಕೇಳಲಿಲ್ಲ ನಿನಗೆ?

ಲಕ್ಷ್ಮಿ : ಇದೇನ್ರಮ್ಮಾ ಹೀಗೆ ಹುಚ್ಚುಚ್ಚಾರ ಆಡ್ತಾ ಇದೀರಿ?

ಧ್ವನಿ : ಅಹುದು- ನಿಜವಾಗಿಯೇ ಹುಚ್ಚು!

ಉಷಾ : ಕೇಳಿದೆಯಾ? ನೀನು ಹುಚ್ಚಳೆಂದರೆ ಅದೂ ಹುಚ್ಚಳೆನ್ನುತ್ತಿದೆ. ನೀವಿಬ್ಬರೂ ಮಾತನಾಡಿಕೊಂಡಂತೆ ಆಡುತ್ತಿದ್ದೀರಿ! ಹಿಂದೆ ನೀನು ಯಾರನ್ನೋ ಬಚ್ಚಿಟ್ಟು ಬಂದಿರಬೇಕು! ಲಕ್ಷ್ಮೀ.... ಯಾರವನು? ಯಾರನ್ನು ನೀನು ಬಚ್ಚಿಟ್ಟು ಬಂದದ್ದು?

ಧ್ವನಿ : ಯಾರನ್ನು ನೀನು ಬಹುದಿನಗಳಿಂದ ಮರೆತಿರುವೆಯೋ ಅವನನ್ನು!

ಉಷಾ : ಕೇಳಿದೆಯಾ? ಏನಂತಾನೆ ಈ ಪಾಪಿ? *(ಬಿಕ್ಕುತ್ತ)* ಹೋಗು- ಹೊರಟ್ಹೋಗು... ನಿನ್ನ ಮನೆಗೆ
ಹೊರಟ್ಹೋಗು.... *(ಬಿಕ್ಕು ಅಸ್ಪಷ್ಟವಾಗುತ್ತಿರುವಾಗ.)*

ಲಕ್ಷ್ಮಿ : ಅಮ್ಮಾವ್ರ ನಾಳಿನ ದಿನ ಸ್ವಲ್ಪ ತಡಮಾಡಿ ಬರ್ತೀನ್ರಿ.... *(ನಿಷ್ಕ್ರಮಣ, ಕೆಲಹೊತ್ತು ನೀರವ.)*

ಶಂಕರ : *(ಪ್ರವೇಶಿಸಿ)* ಕಳ್ಳನ ಜೀವ ಹುಳ್ಳುಳ್ಳಗಂತ....

ಉಷಾ : *(ಚೀರಿ)* ಯಾರವನು?

ಶಂಕರ : ನಾನು ಶಂಕರ ಅಕ್ಕವರ, ನೋಡಿ... ಆ ಶಾರಿ ಸ್ಕೂಲಿನಲ್ಲಿ ಈ ಹೊತ್ತು ನನ್ನ ಪುಸ್ತಕ ಕದ್ದುಕೊಂಡು ಇಲ್ಲಾಂತ ಹೇಳ್ತಾ ಇದ್ಳು. ನಾನು ಗುರುಗಳ ಹತ್ರ ಹೋಗಿ ಹೇಳಿದ ಕೂಡಲೇ ಅಳಲಿಕ್ಕೆ....

ಉಷಾ : *(ನಡುವೇ ತಡೆದು)* ಸತ್ತು ಹೋಗಲಿ ನಿನ್ನ ಶಾರಿ... ಶಂಕರ.... ನೀನೇನಾದರೂ ಇದೀಗ ಹಿಂದೆ ನಿಂತು ಮಾತನಾಡಿದೆಯಾ?

ಶಂಕರ : ನಾನು? ಇಲ್ಲಾಂದ್ರೆ. ಈಗ ತಾನೇ ಸಾಹೇಬರನ್ನ ಕ್ಲಬ್ಬಿನಲ್ಲಿ ಬಿಟ್ಟು ಬಂದೆ. ತಿರುಗಾಡಿಕೊಂಡು ಇನ್ನೊಂದು ತಾಸಿನ ಮೇಲೆ ಬಾಂತ ಹೇಳಿದರು. ಬಂದೆ.... ಯಾಕ್ರೀ ಅಕ್ಕಾವರ ಹೀಗಿದ್ದೀರಿ?

ಉಷಾ : .... ಅ.... ಹ್.... ಯಾಕಿಲ್ಲ. ಚೆನ್ನಾಗೇ ಇದ್ದೀನಲ್ಲ. ಚೆನ್ನಾಗೇ ಇದ್ದೀನಲ್ಲ- ಅದೇನೋ ಕೈಯಲ್ಲಿ?

ಶಂಕರ : ಈ ಫೋಟೋ ಕೆಳಗೆ ಬಿದ್ದಿತ್ತು. ಕುರ್ಚಿಯ ಮೇಲೆ ಇಡ್ತಾ ಇದೀನಿ.

ಉಷಾ : ಯಾರದು?.... *(ಚಿಟ್ಟನೆ ಚೀರಿ)* ಹೊರಟ್ಹೋಗು ಶಂಕರಾ ಹೊರಟ್ಹೋಗು!.... ಓ ನಾನು ಹೋಗಲಾರೆ.... ಹೋಗಲಾರೆ.... ನಾನು ಎಲ್ಲಿಯೂ ಹೋಗಲಾರೆ!.... ಎಲ್ಲಿಯೂ ಹೋಗಲಾರೆ *(ಬಿಕ್ಕುತ್ತ)* ಇನ್ನೂ ನಿಂತಿರುವಿಯಲ್ಲ ಹಾಗೇ, ಅವರ ಹತ್ತಿರ ಹೊರಟ್ಹೋಗು *(ಶಂಕರ ಹೋಗುತ್ತಾನೆ.)*

ಶೀನೂ ಧ್ವನಿ : ಏನು ಮಾಡಲು ಉಷಾ? ನಿನ್ನನ್ನು ಬಿಟ್ಟು ಒಂದುಕ್ಷಣ ಕೂಡ ಬಾಳಲಾರೆ. ಕ್ಷಣಕ್ಷಣವೂ ನಿನ್ನ ಈ ಮೋಹಭರಿತ ಮುಖವನ್ನು ನೋಡುತ್ತಿರಬೇಕು, ಸ್ಪರ್ಶಿಸುತ್ತಿರಬೇಕು! ಬಾರಿಬಾರಿಗೂ ಈ ಕರುಳುಗಳನ್ನು ನೇವರಿಸುತ್ತಿರಬೇಕು! ದಿನದ ಇಪ್ಪತ್ತನಾಲ್ಕು ತಾಸುಗಳೆಲ್ಲಾ ನಿನ್ನ ಸೆರಗಿನ ಮರೆಯಲ್ಲಿರಬೇಕು- ನಿನ್ನ ಧ್ವನಿ ಕೇಳುತ್ತಿರಬೇಕು- ನಿನ್ನ ಓರೆ ನೋಟಕ್ಕೆ ಪಕ್ಕಾಗಬೇಕು.... ಓಹ್.... ನಿನ್ನ ತೋಳಿನಲ್ಲಿ ತೃಪ್ತಿ ಎಂಬುದು ಭ್ರಾಂತಿ ಉಷಾ, ತೃಪ್ತಿ ಎಂಬುದು ಭ್ರಾಂತಿ!.... ... ಉ... ಷಾ! ನಿನ್ನನ್ನು ಬಿಟ್ಟು ನಾನು ಖಂಡಿತ ಬಾಳಲಾರೆ! ಎಲ್ಲಿಯಾದರೂ ದೂರ ಹೋಗೋಣ. ಈ ಜನ- ಈ ಸಮಾಜ ಎಲ್ಲವನ್ನೂ ಬಿಟ್ಟು ದೂರ- ಅತೀದೂರ ಹೋಗೋಣ. ಇಂದು ರಾತ್ರಿ ಟಿಕೆಟ್ಟು ಕೊಂಡು ಇಟ್ಟಿರುತ್ತೇನೆ. ಅವಶ್ಯವಾಗಿ ಬರಬೇಕು. ಬರುತ್ತೀಯಾ? ನಮ್ಮಿಬ್ಬರದು ನಿಜವಾದ ಪ್ರೇಮವೇ ಆಗಿದ್ದರೆ ಖಂಡಿತ ಬರುತ್ತಿ. ಖಂಡಿತ ಬರಬೇಕು. ಹಾಂ.... ಹೋಗುವಾಗೊಂದು ಟಾಂಗಾ ಹೇಳಿ ಹೋಗು.... ಸಿಕ್ಕಷ್ಟು ದುಡ್ಡು, ಆಭರಣ ತರಲು ಮಾತ್ರ ಮರೆಯಬೇಡ. ನಾನೂ ತರುತ್ತೇನೆ. ಬರುತ್ತೀಯಾ ಉಷಾ?

ಉಷಾ : *(ಬಿಕ್ಕುತ್ತ)* ನನಗೆ ಭಯವಾಗುತ್ತಿದೆ. ನಾವು ಮಾಡುತ್ತಿರುವುದು ಅನ್ಯಾಯವೆನಿಸುತ್ತದೆ. ನಾನು ಬರಲಾರೆ.... ಬರಲಾರೆ....
*(ಮನೆಯ ಮುಂದೆ ಟಾಂಗಾ ನಿಂತ ಸಪ್ಪಳ)*

ಉಷಾ : *(ಅಳುತ್ತ)* ನಾನು ಬರಲಾರೆ.... ಬರಲಾರೆ....

ಟಾಂಗಾವಾಲಾ : *(ಪ್ರವೇಶಿಸಿ)* ಮೇಮ್‌ಸಾಬ್ ಟಾಂಗಾ ತಯಾರ ಹೈ.

ಶೀನೂ ಧ್ವನಿ : ನಿನ್ನ ತೋಳಿನಲ್ಲಿ ತೃಪ್ತಿ ಎಂಬುದು ಭ್ರಾಂತಿ ಉಷಾ ತೃಪ್ತಿ ಎಂಬುದು ಭ್ರಾಂತಿ!

ಉಷಾ : ಹೊರಗೆ ಯಾರೂ ಇಲ್ಲವೇ?

ಟಾಂಗಾವಾಲಾ : ನಹೀಂ

ಉಷಾ : ಈ ಬ್ಯಾಗು ತೆಗೆದುಕೊ....
*(ಬಿಕ್ಕು.... ತೇಗು.... ಬರಬರುತ್ತ ಅಸ್ಪಷ್ಟವಾಗುತ್ತಲೂ ಟಾಂಗಾ ಹೊರಟ ಸಪ್ಪಳ....)*

# ದೃಶ್ಯ ಎರಡು

*(ನೀರವ ವಾತಾವರಣ. ಅಷ್ಟು ಎತ್ತರವಲ್ಲದ- ಕೆಳಮಟ್ಟದ್ದಲ್ಲದ ಸ್ವರದಲ್ಲಿ ಉಷಾ)*

ಉಷಾ : ಶೀನೂ…. ಶೀನೂ…. ಇದೇನು ಹೀಗೆ ನಿಂತಿದೀಯೆ? ಟ್ರೇನ್ ವೇಳೆ ಸಮೀಪಿಸಿತು. ಎಲ್ಲಿ ನಿನ್ನ ಬ್ಯಾಗು? ಓಹೋ…. ಆಗಬೇಕೇನೋ ಎಲ್ಲಾ ಸಿದ್ಧತೆ. ಬೇಗನೇ ಏಳಬಾರದೇ? ಇಷ್ಟರಲ್ಲೇ ನಾನು ಬಂದದ್ದು ಆ ಕುರುಡನಿಗೆ ಗೊತ್ತಾಗಿ ಹೋದರೆ….?

ಧ್ವನಿ : ಎಲಾ, 'ಕುರುಡು' ಎಂಬ ಶಬ್ದ ಇವಳ ಕೆಂದುಟಿಗಳಿಂದ ಬಂದಾಗ ಎಷ್ಟು ಮಧುರವಾಗಿ ಕೇಳಿಸುತ್ತದೆ!

ಉಷಾ : ಇದೇನು ಕೈಯಲ್ಲಿ ಪಿಸ್ತೂಲು?… ಓಹೋ ನಮ್ಮ ರಕ್ಷಣೆಗೋ? ಒಳ್ಳೆಯದೇ ಆಯ್ತು. ಇದೇನು ಹೀಗೆ ನಿಂತಿದೀಯೇ ಬೆಪ್ಪು ಬಡಿದವರ ಹಾಗೆ? ಅವಸರ ಮಾಡಬಾರದೇ?

ಶೀನು : *(ಗಂಭೀರ ಸ್ವರದಲ್ಲಿ)* ಉಷಾ-

ಉಷಾ : ಉಂ?

ಶೀನೂ : ಬರುವಾಗ ನಿನ್ನ ಮನಸ್ಸಿಗೇನಾದರೂ ಕೆಡುಕೆನಿಸಿತೆ?

ಉಷಾ : ಓ… ಅದೆಲ್ಲಾ ಟ್ರೇನಿನಲ್ಲಿ ಹೇಳುತ್ತೇನೆ. ಬೇಗನೆ ಏಳಬಾರದೆ?

ಶೀನು : ಇಲ್ಲ. ನಾನಿಲ್ಲಿಯೇ ಕೇಳಬೇಕು. ಟ್ರೇನಿಗಿನ್ನೂ ಸಮಯವಿದೆ. ಏನೂ ಅನ್ನಿಸಲಿಲ್ಲವೆ?

ಉಷಾ : ಅನ್ನಿಸದೇನು? ತುಂಬ ಪಶ್ಚಾತ್ತಾಪವಾಯಿತು. ಒಂದು ಸಲ ನಮ್ಮ ಪ್ರಯಾಣವನ್ನು ರದ್ದು ಮಾಡಬೇಕೆಂದೂ ಇಚ್ಛೆಸಿದೆ. ಅಷ್ಟರಲ್ಲಿ ಏನಾಯ್ತು ಗೊತ್ತೆ?

ಶೀನು : *(ನಿರುತ್ಸಾಹದಿಂದ)* ಏನಾಯ್ತು?

ಉಷಾ : ನಿನ್ನೆ ರಾತ್ರಿ ನೀನು ಹೇಳಿದ ಮಾತುಗಳನ್ನೆಲ್ಲಾ ನೀನು ಮತ್ತೆ ನನ್ನೆದುರಿಗೆ ಆಡಿದ ಹಾಗಾಯ್ತು. ಧೈರ್ಯ ಬಂತು. ಸುದೈವಕ್ಕೆ ಟಾಂಗಾವಾಲಾ ಬಂದಾಗ ಯಾರೂ ಇರಲಿಲ್ಲ. ಓಡಿ ಬಂದೆ. ಮತ್ತೆ ಏನೇನು ತಂದಿದೇನೆ ಗೊತ್ತೆ?

ಶೀನು : *(ನಿರುತ್ಸಾಹ)* ಏನೇನು?

ಉಷಾ : ನೀನು ಹೇಳಿದ್ದನ್ನೆಲ್ಲಾ! ಆಭರಣ! ದುಡ್ಡು! ನಮ್ಮ ಸುದೈವ ಶೀನೂ… ಎಂದೂ ಬೀಗದ ಕೈ ಇಡದ ಕುರುಡ, ಇಂದು ಮೇಜಿನ ಮೇಲೆ ಅದನ್ನು ಇಟ್ಟು ಹೋಗಿತ್ತು. ತಿಜೋರಿ ನನ್ನ ಕೈಗೆ! ಓಹ್… ಇನ್ನು ನಮ್ಮಿಬ್ಬರನ್ನು ಅಗಲಿಸೋದು ಯಾರಿಂದಲೂ ಸಾಧ್ಯವಿಲ್ಲ ಶೀನೂ, ನಮ್ಮಿಬ್ಬರನ್ನು ಅಗಲಿಸೋದು ಯಾರಿಂದಲೂ ಸಾಧ್ಯವಿಲ್ಲ.

ಶೀನು : ಸಾವಿಗೂ…?

ಉಷಾ : ಓಹೋ…ಸಾವು ಎಂದೊಡನೆ ನನಗೆ ಭಯವಾಗುತ್ತೇಂತ ಗೊತ್ತಿದ್ದೂ ನನ್ನನ್ನು ನೀನು ಕೆಣಕುತ್ತಿದ್ದೀಯೇ.

ಶೀನು : ಉಷಾ.

ಉಷಾ : ಉಂ?

ಶೀನು : ನಾವು ಮೊದಲ ರಾತ್ರಿ ಸಂಧಿಸಿದ ನಂತರ ಏನೆನ್ನಿಸಿತ್ತು ನಿನಗೆ?

ಉಷಾ : ಈಗ ಅದನ್ನೆಲ್ಲ ಹೇಳಲು ಸಮಯವಿದೆಯೆ? ನಾನು ಬಂದದ್ದು ಆತನಿಗೆ ಗೊತ್ತಾಗಿ ಹೋದರೆ... ಬೇಗ ಏಳೊಂದ್ರೆ.

ಶೀನು : ಆತ ಇಲ್ಲಿಗೆ ಎಂದೂ ಬರಲಾರ- ಅದರ ಬಗೆಗೆ ನಿಶ್ಚಿಂತಳಿರು. ಟ್ರೇನಿಗಿನ್ನೂ ಸಾಕಷ್ಟು ಸಮಯವಿದೆ. ಹೇಳು, ಏನು ಅನಿಸಿತ್ತು ನಿನಗೆ?

ಉಷಾ : ನನಗೆ? ನಿನಗೆನ್ನಿಸಿದ ಹಾಗೆ. ರಾತ್ರಿ ಹನ್ನೆರಡು ಗಂಟೆಗೆ ಹೋಗುತ್ತಲೂ ನನಗೆ ತುಂಬ ಪಶ್ಚಾತಾಪವಾಯಿತು. ಸುತ್ತಲೆಲ್ಲಾ ಕತ್ತಲೆ. ಬೆಳಗಿನವರೆಗೂ ಅತ್ತು ಅತ್ತು ಎದೆ ಹಗರು ಮಾಡಿಕೊಂಡೆ. ಎಂದೂ ನಿನ್ನ ಮುಖ ನೋಡಬಾರದೆಂದೂ ಪ್ರತಿಜ್ಞೆ ಮಾಡಿದೆ. ಬೆಳಿಗ್ಗೆ ಅವರ ಮುಖ ನೋಡತ್ತಲೂ ಮತ್ತೆ ಅಳು ಬಂತು. ಮತ್ತೊಮ್ಮೆ ಪ್ರತಿಜ್ಞೆ ಮಾಡಿದೆ. ಏನೋ
ಸಮಾಧಾನವಾಯ್ತು *(ಸುಯ್ದು)* ರಾತ್ರಿ ನೀನು ಮತ್ತೆ ಬಂದಾಗ ನನ್ನ ದುರ್ಬಲತೆಯ ಅರಿವಾಯ್ತು.

ಶೀನು : ನನಗೂ ಹಾಗೇ ಆಯ್ತು. ಸಂಜೆಯವರೆಗೆ ಪಶ್ಚಾತ್ತಾಪಗೊಂಡು ಕುದಿದೆ. ಮತ್ತೆ ರಾತ್ರಿಯಾಗುತ್ತಲು ನನ್ನ ದುರ್ಬಲತೆಯ ಅರಿವಾಯ್ತು. ದೇವರು ನಮ್ಮಿಬ್ಬರಲ್ಲಿ ಆಸೆಯೊಂದನ್ನು ಹಾಕಿ ದೊಡ್ಡ ಅನ್ಯಾಯ ಮಾಡಿದ ಉಷಾ- ದೊಡ್ಡ ಅನ್ಯಾಯ ಮಾಡಿದ?

ಉಷಾ : ಹಳೇ ಕತೆಯಿಂದೇನು ಪ್ರಯೋಜನ? ಟಿಕೇಟು ಕೊಂಡೆಯಾ? ಯಾವ ಸ್ಟೇಷನ್ನಿನಲ್ಲಿ ಇಳಿಯೋದು?

ಶೀನು : ನರಕದಲ್ಲಿ!

ಉಷಾ : ನೀನು ಮತ್ತೆ ನನ್ನನ್ನು ನೋಯಿಸುತ್ತಿದ್ದೀಯೆ. ನರಕಕ್ಕಂತೂ ನಮ್ಮಿಬ್ಬರ ಸ್ನೇಹವಾದಾಗಲೇ ಇಳಿದುದಾಗಿದೆ. ಇನ್ನು ಹೋಗುವದೆಲ್ಲಿ?

ಶೀನು : ನಿನಗೆ ಈ ನರಕದಿಂದ ಹೊರಬರಲು ಆಸೆಯಾಗುವುದಿಲ್ಲವೇ ಉಷಾ?

ಉಷಾ : ನಿನ್ನ ಜೊತೆಗಿದ್ದ ನರಕ ನನಗೆ ಸ್ವರ್ಗವಾಗುತ್ತದೆ ಶೀನೂ! ಇದು ನರಕವಲ್ಲ! ಖಂಡಿತ ನರಕವಲ್ಲ! ನಕರವೆಂದವರಾರು? ಇದು ನರಕವೇ ಎನ್ನುವುದಾದರೆ ಇಂಥ ನರಕ ನನಗೆ ಸಾವಿರ- ಸಾವಿರ ಸಲ ಬರಲಿ! ಓ... ನರಕದಲ್ಲಿ ಎಂಥ ಸೊಗಸಿದೆ! ಈ ಪ್ರೇಮ ಜೀವಿಗಳೆರಡೂ ನರಕದ ದೇವತೆಗಳು!!

ಧ್ವನಿ : ನರಕದಲ್ಲಿ ದೇವತೆಗಳೆಂದೂ ಇರಲಾರರು! *(ಪ್ರತಿಧ್ವನಿಯಂತೆ)*

ಉಷಾ : *(ಕೇಳಿದವರಂತೆ)* ಯಾರದು? ಯಾರು ಹಾಗೆ ಅಂದವರು? ಶೀನೂ ನನ್ನನ್ನು ಉಪೇಕ್ಷಿಸುತ್ತಿದ್ದೀಯೆ. ನಾಚಿಕೆಯಾಗುವುದಿಲ್ಲವೇ ನಿನಗೆ – ಹಾಗೆನ್ನಕ್ಕೆ?

ಶೀನು : ನಿನ್ನ ಹುಚ್ಚುತನವೇ ನಿನ್ನಿಂದ ಹಾಗೆ ಅನ್ನಿಸುತ್ತಿದೆ.... ಕೇಳು ಉಷಾ, ನನ್ನ ಪಾಲಿನ ಕೊನೆಯ ಹವೆಯನ್ನು ನಾನೀಗ ಉಸಿರಾಡುತ್ತಿದ್ದೇನೆ. ನನ್ನ ನಾಲಗೆಯ ಕೊನೆಯ ಚಪಲವನ್ನು ನಾನೀಗ ತೀರಿಸುತ್ತಿದ್ದೇನೆ.

ಉಷಾ : ನಿನ್ನ ಮಾತು ನನಗೆ ಅರ್ಥವಾಗುತ್ತಿಲ್ಲಾಂದ್ರೆ.

ಶೀನು : ಅರ್ಥವಾಗುವ ಹಾಗೆ ಹೇಳುತ್ತೇನೆ ಕೇಳು: ನನ್ನ ನಿನ್ನ ನಡುವಿನ ಸಂಬಂಧ ಪ್ರೇಮವಲ್ಲ. ನಿನ್ನತ್ತ ನನ್ನನ್ನೆಳೆದುದು ನಿನ್ನ ಪ್ರೇಮವಲ್ಲ- ಈ ನಿನ್ನ ರೂಪರಾಶಿ!

ಧ್ವನಿ : ನರಕದಲ್ಲಿ ಪ್ರೇಮವೆಂದಿಗೂ ಇರದು!

ಶೀನು : ನೀನೀಗ ಓಡಿ ಬಂದುದೂ ಪ್ರೇಮಕ್ಕಾಗಿ ಅಲ್ಲ. ಸಾವಿತ್ರಿ ಸತ್ಯವಾನರು ನುಡಿದ ಸಂಸ್ಕೃತ ಶಬ್ದ "ಪ್ರೇಮ" ನಮ್ಮ ನಡತೆಯ ಹೇಸಿಕೆಯನ್ನು ಮುಚ್ಚಲು ಅದನ್ನು ಅಪಭ್ರಂಶಿಸಿ ಪೈಶಾಚಿಕ ಭಾಷೆಯಲ್ಲಿ ಕರೆದವರು ನಾವು!

ಉಷಾ : *(ಕಪಾಳಕ್ಕೆ ಬಿಗಿದು)* ಪಾಪಿ ಚಾಂಡಾಲ!

ಧ್ವನಿ : ಎಲಾ ಇವಳು ಈ ಶಬ್ದಗಳನ್ನು ಎರಡನೆಯವರಿಗೂ ಬಳಸಬಲ್ಲಳು!

ಶೀನು : ಪಾಪಿ! ಚಂಡಾಲ! ಹೌದು. ಪಾಪಿಯೂ ಹೌದು, ಚಾಂಡಾಲನೂ ಹೌದು- ನಾನು ಮೊದಲಿನಿಂದಲೂ ಸುಶೀಲನಿದ್ದು ಆಗ ಈ ಶಬ್ದಗಳು ನನ್ನ ಕಿವಿಯ ಮೇಲೆ ಬಿದ್ದಿದ್ದರೆ, ಅಲ್ಲಮಪ್ರಭು ಮಾಯೆಯನ್ನು ಕಂಡು ನಕ್ಕ ಹಾಗೆ ಗಹಗಹಿಸಿ ನಗುತ್ತಿದ್ದೆ. ದುರ್ದೈವ. ನಾನೀಗ ಆ ಶಬ್ದಗಳಿಗೆ ಯೋಗ್ಯನಾಗಿದ್ದೇನೆ. ತನ್ನ ಪ್ರಾಣಕ್ಕಿಂತ ಪ್ರಿಯವಾಗಿ ಪ್ರೀತಿಸಿದ ಗೆಳೆಯನ ಧರ್ಮಪತ್ನಿ ಎಂಬುದನ್ನು ಮರೆತು ನಿನ್ನ ಜೊತೆ ಸೇರಿದೆ. ನೀನೂ ಹಸಿದಿದ್ದೆ. ನೀನಾಗ ನಿರಾಕರಿಸಿದ್ದರೆ ಸರಿಯಾದ ದಾರಿ ತುಳಿಯಬಹುದಿತ್ತು. ಆಗಲಿಲ್ಲ. ಸದಾಶಿವನ ಬಗೆಗೆ ಕೀಳುದೃಷ್ಟಿ ಇಬ್ಬರಲ್ಲೂ ಬೆಳೆಯುತ್ತ ಬಂದು, ಅವನಿಗೆ ನಾವು ಕೊಟ್ಟದ್ದು ತಿರಸ್ಕಾರವನ್ನು. ಆತ ಮಾತ್ರ ಸ್ನೇಹವನ್ನೇ ಕೊಟ್ಟ. ಸದಾಕಾಲ ಈ ಪೀಡೆ ತೊಲಗಲೆಂದು ಕಣ್ಣು ಬೇನೆಯಾದ ಸಂಧಿ ಸಾಧಿಸಿ ಔಷಧದ ಬದಲು ಅಂಜನವಿಕ್ಕಲು ಹೇಳಿದೆ. ನೀನದನ್ನು ಕಾರ್ಯ ರೂಪಕ್ಕಿಳಿಸಿದೆ. ಅಂಜನವಿಕ್ಕಿಸಿಕೊಂಡಾತ ಆತನಾದರೂ ಕಣ್ಣು ಕಳೆದುಕೊಂಡವರು ನಾವು ಉಷಾ! ಅವನ ಎರಡು ಕಣ್ಣಿಗೆ ಪ್ರತಿಯಾಗಿ ನಮ್ಮ ನಾಲ್ಕು ಕಣ್ಣು ಕುರುಡಾದವು! *(ಉಷಾ ಅಳುವ ಧ್ವನಿ.)* ಆಸ್ಪತ್ರೆಗೆ ಹೋದ. ಕಣ್ಣು ಸರಿಯಾದರೂ ನಮ್ಮನ್ನು ಪರೀಕ್ಷಿಸಬೇಕೆಂದು ಮತ್ತೆ ಕುರುಡರಂತೆಯೇ ನಟಿಸುತ್ತ ಮನೆ ಸೇರಿದ!

ಉಷಾ : ಆಂ? ಏನಂದಿ?

ಶೀನು : ಕಣ್ಣು ಸರಿಯಾದರೂ ನಮ್ಮನ್ನು ಪರೀಕ್ಷಿಸಬೇಕೆಂದು ಮತ್ತೆ ಕುರುಡರಂತೆಯೇ ನಟಿಸುತ್ತ ಮನೆ ಸೇರಿದ. ಆ ದಿನ ನೆನಪಿದೆಯೇ? ಆತ ಹಾಸ್ಪಿಟಲ್‌ನಿಂದ ಬಂದ ದಿನ- ನೆನಪಿದೆಯೇ? ಆ ದಿನ?

ಉಷಾ : ಉಂ?

ಶೀನು : ನೆನಪಿದೆಯೇ?

*(ಒಂದು ಬಗೆಯ ಸಂಗೀತ. ಪುಸ್ತಕದ ಪುಟ ತಿರುವಿದ ಸಪ್ಪಳ. ನಂತರ ಸ್ತಬ್ಧ. ಪಿಸುಧ್ವನಿ ಅಸ್ಪಷ್ಟವಾಗಿ ಬರುಬರುತ್ತ ಸ್ಪಷ್ಟವಾಗುತ್ತದೆ.)*

ಉಷಾ : ಶೀನೂ.

ಶೀನು : ಉಂ?

ಉಷಾ : ಕುರುಡ ಬರುತ್ತಿದೆಯಲ್ಲ.

ಶೀನು : ಕಣ್ಣು ಕೊನೆಗೂ ಸರಿಯಾಗಲಿಲ್ಲವಂತಲ್ಲ?

ಉಷಾ : ನಮ್ಮ ಸುದೈವ ಶೀನೂ, ಅದಿನ್ನು ಕೊನೆಯವರೆಗೂ ಕೈಯಾಡಿಸಿಯೇ ಸಾಯಬೇಕು! ಎಲ್ಲಿ ಹೊರಟೆ?- ಈಗಲೇ ಮನೆಗೆ ಹೋಗಬೇಕೇನೋ. ಬಿಡೋಲ್ಲಾಂದ್ರೆ-ಬಿಡೋಲ್ಲ. ಹ್ಯಾಗೆ ಬರ್ತ್ರಾ ಇದೆ ತುಸು ಮೋಜು ನೋಡಬಾರದೆ?
*(ಕುಲು ಕುಲು ಕುಲು ನಗುವಳು. ಸ್ವಲ್ಪ ಸಮಯದ ನಂತರ ಬೂಟು ಮತ್ತು ಕೋಲಿನ ಸಪ್ಪಳ ಮೊದಮೊದಲು ದೂರದಿಂದ ಅಸ್ಪಷ್ಟವಾಗಿ ಬರಬರುತ್ತಾ ಸ್ಪಷ್ಟವಾಗಿ ಕೇಳಿ ಬರುತ್ತದೆ.)*

ಸದಾಶಿವ : ಉಷಾ….

ಉಷಾ : ಬಂದೆ. *(ಪಿಸು ಧ್ವನಿ)* – ಹಾಳು ಸಹವಾಸ- ಸ್ಪಷ್ಟವಾಗಿ ಅಲ್ಲೆ- ಅಲ್ಲೆ ಕುರ್ಚಿ ಇದೆ ಕೂತ್ಕೊಳ್ಳಿ... ಶಂಕರ ಅಲ್ಲೇ ಕುರ್ಚಿಯಲ್ಲಿ ಕೂಡ್ರಿಸು. ಹೂಂ…. ಸರಿ ನೀನು ಹೋಗು. *(ಶಂಕರ ಹೋಗುತ್ತಾನೆ)*

ಸದಾಶಿವ : ಶೀನ ಬಂದಿದ್ನೆ?

ಉಷಾ : ಇಲ್ಲ. ಇನ್ನೂ ಬಂದಿಲ್ಲ. ಸಂಜೆಗೆ ಬರುತ್ತಾರೇನೋ... ಕಾಫಿ ತರಲೇ?

ಸದಾಶಿವ : ಕಾಫಿ ತರುತ್ತೀ? ತಗೊಂಬಾ….

ಶೀನು : *(ಪಿಸು ಧ್ವನಿ)* ಉಷಾ...!! ಸದಾಶಿವನ ಮುಖ ಈ ಹೊತ್ತು ಎಷ್ಟು ಸುಂದರವಾಗಿ ತೋರುತ್ತಿದೆ ನೋಡು! ಏನೋ ಭವ್ಯವಾದ ಗುಡಿಯಲ್ಲಿ ಹೊಕ್ಕ ಹಾಗೆ-

ಉಷಾ : ಇದೇನು ಮತ್ತೆ ಹಗಲು ವೈರಾಗ್ಯ?

ಶೀನು : *(ಪಿಸು ಧ್ವನಿ)* ಉಷಾ... ಸದಾಶಿವನ ಮಂದಹಾಸ ನೋಡು ಆ ಮುಗ್ಧ ಮುಖ ನೋಡು! ನಮ್ಮ ಸಂಬಂಧವಿನ್ನು ಸಾಕು ಉಷಾ! ತೀರ ಸುಖಿಗಳೆಂದು ಕೊಂಡ ನಮಗೆ ಅಂಥದೊಂದು ಮುಗುಳು ನಗೆ ನಗಲು ಬರುತ್ತದೆಯೇ? ಆ ಮಂದಹಾಸಕ್ಕೆ ಯಾವ ಬೆಲೆ ತೆತ್ತರೆ ನಮ್ಮದಾದೀತು. ನಾನವನ ಕಾಲು ಹಿಡಿದು ಕ್ಷಮೆ ಕೇಳಿಕೊಳ್ಳುತ್ತೇನೆ... ನಾನಿನ್ನು ಹಾಗೇ ಇರಲಾರೆ... ಉಷಾ...

ಉಷಾ : *(ಗಡಸು ಧ್ವನಿ)* ಏನ್ಹಾಗೆ ಹುಚ್ಚುಚ್ಚು ಆಡಿದರೆ?

ಸದಾಶಿವ : ಯಾರದು ಉಷಾ?

ಉಷಾ : *(ಸಾವರಿಸಿಕೊಂಡು)* ಯಾರಿಲ್ಲ... ಒಳಗೆ ಶಂಕರ ಏನೇನೋ ಅಂದುಕೊಂಡು ನಗ್ತಿದ್ದಾನೆ... ಅವನಿಗಂದೆ
ಅಷ್ಟೆ. *(ಪಿಸುಧ್ವನಿಯಲ್ಲಿ)* ಶೀನೂ ತುಸು ಹೊರಗೆ ನಡೆ... *(ಹೋಗುವರು.)*

ಶಂಕರ : ಸರ್ ಸರ್... *(ಪ್ರವೇಶಿಸಿ)* ಸರ್...

ಸದಾಶಿವ : ಏನದು ಶಂಕರ?

ಶಂಕರ : ಬೆಕ್ಕೇನಾದ್ರೂ ಇಲ್ಲಿ ಬಂದಿತ್ತೆ ಸಾರ್?

ಸದಾಶಿವ : ಎಂಥ ಬೆಕ್ಕೊ?

ಶಂಕರ : *(ಗಹಗಹಿಸಿ ನಗುತ್ತ)* ಕಣ್ಮುಚ್ಚಿಕೊಂಡು ಹಾಲ್ಕುಡೀತಾ ಇತ್ತು ಸಾರ್... ಹಿಂದಿನಿಂದ ಏಟು ಹಾಕಬೇಕೆನ್ನೋದರಲ್ಲೇ ಸಪ್ಪಳವಾಗಿ ಗಡಬಡಿಸಿತು. ಮುಂದೆ ಏನಾಯ್ತು ಗೊತ್ತೇ ಸಾರ್? ಪಾತ್ರೆ ಅದರ ಮೊಗಕ್ಕೆ ಹಾಗೇ ಸಿಕ್ಬಿಟ್ತು! ಏಟು ಹಾಕಬೇಕೆಂದರೆ ಇತ್ತ ಕಡೆಗೇ ಓಡಿ ಬಂತು!... ತುಂಬ ತಮಾಷೆ ಸಾರ್! ಪಾತ್ರೆ ಅದರ ಮುಖಕ್ಕೆ ಹಾಗೇ ಇದೆ! *(ಮತ್ತೆ ನಗು)* ಅಲ್ನೋಡಿ! ಸಾರ್!...

*(ನಗು ಅಸ್ಪಷ್ಟವಾಗುತ್ತದೆ. ಒಂದು ಬಗೆಯ ಸಂಗೀತ. ಪುಸ್ತಕ ಮುಚ್ಚಿದ ಸಪ್ಪಳ)*....

ಶೀನು : ನೆನಪಿದೆಯೇ? *(ನೀರವ)* ನಿಜವಾಗಿಯೂ ಕುರುಡರಂತೆಯೇ ನಟಿಸುತ್ತ ಮನೆ ಸೇರಿದ! ಆತ ನಮ್ಮಿಬ್ಬರನ್ನು ನೆಮ್ಮದಿಯಿಂದ ಇರಿಸಬೇಕೆಂದು ತಾನೇ ಮನೆ ಬಿಟ್ಟು ಹೋಗುತ್ತಿದ್ದ. ನಾವೇ ಓಡಿಹೋಗುವುದು ಅವನಿಗೆ ಗೊತ್ತಾಯ್ತು. ಬ್ಯಾಂಕಿನಿಂದ ತಾನೇ ದುಡ್ಡು ತರಿಸಿ ಪೆಟ್ಟಿಗೆಯಲ್ಲಿಟ್ಟು ಬೀಗದ ಕೈ ಬೇಕೆಂದೇ ಮೇಜಿನ ಮೇಲಿಟ್ಟ. ನೀನು ದುಡ್ಡು ತೆಗೆದುಕೊಂಡು ಬಂದೆ!

ಉಷಾ : ನಿನಗಿದೆಲ್ಲ ಹೇಗೆ ಗೊತ್ತಾಯ್ತು?

ಶೀನು : ಗೊತ್ತಾಯ್ತು. ಆದರೂ ಸುಳ್ಳಲ್ಲ. ಹೇಳು... ಈಗಲೂ ನಿನಗೆ ಓಡಿಹೋಗಲು ಮನಸ್ಸಾಗುತ್ತಿದೆಯೇ?

ಉಷಾ : *(ಅಳುತ್ತ)* ನಾನು ಪಾಪಿ ಶೀನೂ... ನಾನು ಪಾಪಿ! ಇನ್ನು ಯಾವ ಮುಖ ಹೊತ್ತು ಅವರೆದುರು ಹೋಗಲಿ? ನಾನಲ್ಲಿ ಹೋಗಬಾರದು.... ಎಲ್ಲಿಯಾದರೂ ಹೋಗೋಣ. ನನ್ನ ಕೈ ಬಿಡಬೇಡ ಶೀನೂ.

ಶೀನು : ಸಾಯಲಿಕ್ಕೆ ಮನಸ್ಸಿದೆಯೇ?

ಉಷಾ : *(ಆರ್ತಳಾಗಿ)* ಸಾಯುವುದಕ್ಕೆ ನನಗೆ ಭಯವಾಗುತ್ತದೆ! ನಾನು ಸಾಯಲಾರೆ... ಎಲ್ಲಿಯಾದರೂ ಓಡಿ ಹೋಗೋಣ!

ಶೀನು : ಇನ್ನೂ ಪಾಪ ಮಾಡುವ ಮನಸ್ಸು ನನಗಿಲ್ಲ ಉಷಾ. ನಿನ್ನ ಗಂಡನ ಬಳಿಗೆ ಹೋಗಿ ಅವನ ಸೇವೆ ಮಾಡಿ ಪಾಪ ಕಳೆದುಕೊ. ನಾನು ಮಾತ್ರ ಅವನ ಮುಖ ನೋಡಲಾರೆ. ನನ್ನ ಪಾಪಗಳಿಗೊಂದು ಕ್ಷಮೆ ಸಿಗಬಾರದು. ಅವಕ್ಕೆ ಪರಿಹಾರ ದೊರೆಯಬಾರದು. ನಾನು ಬಹಳ ಬಳಲಬೇಕು- ಅತೀ ಬಳಲಬೇಕು... ನರಕದಲ್ಲಿಯೂ ನನಗೆ ಸ್ಥಾನ ಸಿಗಬಾರದು. ಅಂತೆಯೇ ಇದೀಗ ಸಾವನ್ನಪ್ಪುತ್ತಿದ್ದೇನೆ.

ಉಷಾ : ನನ್ನ ಕೈ ಬಿಡಬೇಡ *(ಅಳುತ್ತ)* ಅವರು ಮತ್ತೆ ನನ್ನನ್ನು ಸ್ವೀಕರಿಸಲಾರರು.

ಶೀನೂ : ಗಂಗೆ ಹರಿಯುವುದು ಪಾಪಿಗಳಿಗಾಗಿ ಉಷಾ, ಹೋಗು. ಆತ ಖಂಡಿತ ಸ್ವೀಕರಿಸುತ್ತಾನೆ. ಹಾಗೇ ನಾನೂ ಕ್ಷಮೆ ಕೇಳಿದ್ದೇನೆಂದು ಹೇಳು.

ಉಷಾ : *(ಅಳುತ್ತ)* ನಿಲ್ಲು ಶೀನೂ... ನನ್ನನ್ನೂ ಕೊಲ್ಲು... ಸಾಯಲು ನಾನೂ ಸಿದ್ಧಳಿದ್ದೇನೆ... ಶೀನೂ...! ಶೀನೂ...!!!

*(ಗುಂಡು ಹಾರಿಸಿದ ಸಪ್ಪಳ)*

# ದೃಶ್ಯ ಮೂರು

*(ಬಿಸಿಯುಸಿರ –*
*ಜೊತೆಗೆ ಉಸಿರಾಟದ ಅಸ್ಪಷ್ಟ ಸಪ್ಪಳ.... ತುಸು ಹೊತ್ತು ಹೀಗೇ ಸಾಗಿದ ಬಳಿಕ ರಗ್ಗು ಸರಿಸಿದ– ಕುರ್ಚಿಗೆ ತಡವರಿದ ಸಪ್ಪಳ).*

ಸದಾಶಿವ : ಯಾರವರು?

ಶಂಕರ : ನಾನು ಶಂಕರ ಸಾರ್.

ಸದಾಶಿವ : ನಿದ್ದೆ ಬರಲಿಲ್ವೇನೋ ಇನ್ನೂ?

ಶಂಕರ : ಅಕ್ಕವರು ಇನ್ನೂ ಬರಲಿಲ್ಲ ಸಾರ್, ಹನ್ನೆರಡು ಹೊಡೀತು.

ಸದಾಶಿವ : ಅವಳಿನ್ನು ಎಂದಿಗೂ ಬರಲಿಕ್ಕಿಲ್ಲ ಶಂಕರ- ಎಂದಿಗೂ ಬರಲಿಕ್ಕಿಲ್ಲ. ಎಂದೂ ತಿರುಗಿ ಬಾರದಷ್ಟು ದೂರ ಹೋಗಿದ್ದಾಳೆ.

ಶಂಕರ : *(ಅಳುತ್ತ)* ನೀವು ಏನೇ ಹೇಳಿ ಸಾರ್. ಅಕ್ಕಾ ಖಂಡಿತ ಬರುತ್ತಾರೆ.

ಸದಾಶಿವ : ಎಲಾ ಅಳ್ತಾ ಇದ್ದೀಯಲ್ಲೊ? ನಿನ್ನಕ್ಕನ ಮೇಲೆ ನಿನಗೆ ತುಂಬ ಪ್ರೀತಿಯೇನೊ?

ಶಂಕರ : ನಿಮಗೆ ಸಂಬಂಧಿಸಿದ ಎಲ್ಲದರ ಮೇಲೂ ನನಗೆ ತುಂಬ ಪ್ರೀತಿ ಸಾರ್. ನೀವು ಉಪಯೋಗಿಸುವ ಈ ದಾಡಿ ಸೆಟ್ಟಿನ ಮೇಲೂ ನನಗೆ ತುಂಬ ಅಭಿಮಾನ! ನಮ್ಮಂಥ ಅನಾಥರ ದೇವರು ಸಾರ್….

ಸದಾಶಿವ : ಶಂಕರ, ಒಂದು ಪ್ರಶ್ನೆ ಕೇಳಲೇ?

ಶಂಕರ : ಕೇಳಿ ಸಾರ್….

ಸದಾಶಿವ : ಜನರೆಲ್ಲಾ ನನಗೆ ಕುರಾಡಾಂತ ಹೇಳ್ತಾರೆ. ನಿನಗೂ ಹಾಗೇ ಅನ್ನಿಸುತ್ತೇನೋ?

ಶಂಕರ : ಏನು ಮಾತು ಸಾರ್? ಹಾಸ್ಪಿಟಲ್‌ಗೆ ಹೋಗಿ ಬಂದಾಗಿನಿಂದ ಒಬ್ಬರೇ ಅಡ್ಡಾಡ್ತೀರಿ, ಬರೀತೀರಿ,- ಓದ್ತೀರಿ–

ಸದಾಶಿವ : ನಿನ್ನಕ್ಕ- ಶೀನೂ-

ಶಂಕರ : *(ತಡೆದು)* ಹೌದು ಸಾರ್. ಶ್ರೀನಿವಾಸರಾಯರು-ಅಕ್ಕಾವರು ಇಬ್ಬರೇ ಸಾರ್ ನಿಮಗೆ ಕುರುಡಾಂತನ್ನೋದು. ಆ ಸೊಕ್ಕಿನ ಶ್ರೀನಿವಾಸರಾಯರು….

ಸದಾಶಿವ : ಛೀ ಛೀ…. ಈ ಜಗತ್ತಿನಲ್ಲಿ ನಾವು ಯಾರನ್ನೂ ದ್ವೇಷಿಸಬಾರದು.

ಶಂಕರ : ನಮಗೆ ಅನ್ಯಾಯ ಮಾಡಿದವರನ್ನೂ….?

ಸದಾಶಿವ : ಅವರನ್ನೂ ದ್ವೇಷಿಸಬಾರದು. ನಾವು ಹುಟ್ಟಿರೋದು ತಿರಸ್ಕರಿಸಲಿಕ್ಕಲ್ಲ ಶಂಕರ್, ಪ್ರೇಮಿಸೋದಕ್ಕೆ!

ಶಂಕರ : ಸರ್ ಸರ್….

ಸದಾಶಿವ : ಹೂಂ-

ಶಂಕರ : ಈ ಫೋಟೋ ಯಾರದು ಸಾರ್….?

ಸದಾಶಿವ : ಯಾವದು? ಆ ಕುರ್ಚಿಯ ಮೇಲಿನದೋ?

ಶಂಕರ : ಹೌದು ಸಾರ್.

ಸದಾಶಿವ : ಅಹಲ್ಯೆಯದು. ಅದ್ಯಾಕೋ ಬೇಕಿತ್ತು ನಿನಗೆ?

ಶಂಕರ : ಅಕ್ಕಾವರು ಈ ಫೋಟೋನ್ನ ನೋಡಿದ ಕೂಡಲೇ ಚೀರಿ "ನಾನು ಹೋಗಲಾರೆ ಹೋಗಲಾರೇಂತ…" ಅಳತೊಡಗಿದರು. ಯಾರು ಸಾರ್ ಈ ಅಹಲ್ಯಾ ಅಂದರೆ-?
*(ಬಾಗಿಲು ಬಡೆಯುವ ಸಪ್ಪಳ.)*

ಸದಾಶಿವ : ಯಾರವರು?
*(ತುಸು ಹೊತ್ತು ನೀರವ. ಮತ್ತೆ ಬಾಗಿಲು ಬಡೆದ ಸಪ್ಪಳ.)*

ಶಂಕರ : ನಾನು ತೆಗೀತೇನಿ ಸರ್….

ಸದಾಶಿವ : ನಿನಗೆ ಕೊಂಡಿ …. ನಿಲುಕುವದಿಲ್ಲಲ್ಲೋ?

ಶಂಕರ : ಅಂದ ಹಾಗೇ ಈ ಅಹಲ್ಯಾ ಅಂದರ ಯಾರಂತ ಹೇಳಲೇ ಇಲ್ವಲ್ಲ ಸಾರ್….
*(ಬಾಗಿಲು ಕೊಂಡಿ ಬಿಡಿಸಿ- ಬಾಗಿಲು ತೆರೆದ ಸಪ್ಪಳ…. ತುಸು ಹೊತ್ತು ನೀರವ).*

ಶಂಕರ : *(ಉತ್ಸಾಹದಿಂದ)* ನೋಡಿ ಸಾರ್! ನಾನು ಹೇಳಿರಲಿಲ್ವೆ ಅಕ್ಕಾ ಖಂಡಿತ ಬರ್ತಾರೇ-ಅಂತ. ಅಕ್ಕಾ ಬಂದರು!…. ಲೈಟ್ ಹಚ್ತೇನಿ ಸಾರ್….!
*(ಲೈಟ್ ಸ್ವಿಚ್ಚು ಒತ್ತಿದ ಸಪ್ಪಳ.)*

## ನಾರ್ಸಿಸಸ್

### (೧)

*(ಅನೇಕ ಹೆಣ್ಣು ಧ್ವನಿಗಳ ನರಳುವಿಕೆಯೊಂದಿಗೆ ತೆರೆ ಸರಿಯುತ್ತದೆ. ಮೇಳವಾಗಿ ಹೂ ಹೂ ಹೂ ಎಂದು ಸಣ್ಣಗೆ ಸುರುವಾಗಿ, ಸ್ಪಷ್ಟವಾಗುತ್ತ ಒಮ್ಮಿಂದೊಮ್ಮೆ ಉದ್ರೇಕಗೊಂಡ ಹೆಣ್ಣು ಧ್ವನಿಯೊಂದು ಚೀರಿ "ಅಯ್ಯೋ ಬಿಡಸರ್ಯೋ ಗಂಡ್ಸಾದರ ಅಪ್ಪಾ ಅಂತೇನು, ಹೆಂಗಸಾದರ ಅವ್ವಾ ಅಂತೇನು ಬಿಡಸರ್ಯೋ"- ಎಂದು ಅಳಲಾರಂಭಿಸಿದಾಗಲೂ ಉಳಿದ ಧ್ವನಿ ಹಿಮ್ಮೇಳದಂತೆ ಮೊದಲಿನ*

*ಸ್ವರದಲ್ಲಿಯೇ ಮುಂದುವರಿಯುತ್ತವೆ. ರಂಗದ ಮುಂಭಾಗದಲ್ಲಿ ಸ್ಟೂಲಿನ ಮೇಲೆ ಭೀಮ್ಯಾ ಮೊಳಕಾಲಿಗೆ ಕೈ ಸುತ್ತಿ ನಿಶ್ಚಿಂತವಾಗಿ ಕೂತಿದ್ದಾನೆ. ರಂಗದ ಹಿಂಭಾಗದ ಆಳದಲ್ಲಿ ಅಸ್ಪಷ್ಟ ಕತ್ತಲೆಯಿದ್ದು ಆ ಮೂಲಕ ರಂಗ ಇಬ್ಭಾಗವಾಗದಂತೆ ಕಾಣಿಸಬೇಕು. ಆ ಭಾಗದಲ್ಲಿಯೇ ಅಸ್ಪಷ್ಟವಾದ ಸ್ತ್ರೀಯರ ನೆರಳಿನ ಚಲನವಲನ ಕಾಣಿಸುತ್ತದೆ. ಕೆಲಹೊತ್ತು ಹೀಗೇ ನಡೆದ ಬಳಿಕ ಬಾಗಿಲು ಹಾಕಿದ ಸಪ್ಪಳವಾಗಿ ನಾಣಿ, ತಲೆಕೆದರಿ, ಅಸ್ತವ್ಯಸ್ತ ಉಡುಪಿನಲ್ಲಿ ನಿಧಾನವಾಗಿ ಬಂದು ಭೀಮ್ಯಾನ ಎದುರಿಗಿರುವ ಕುರ್ಚಿಯಲ್ಲಿ ಉಸ್ಸೆಂದು ಕುಕ್ಕರಿಸಿ ಹೊಕ್ಕಳಿನ ಮೇಲೆ ಕೈಯಾಡಿಸುತ್ತಾನೆ)*

ನಾಣಿ : ಈ ಹೊಕ್ಕಳೊಂದು ಎಷ್ಟು ನೋಯತದ ಅಂದರ, ಇದ ನನ್ನ ಹೊಕ್ಕಳಂತ ನಂಬಾಕಾಗೋದಿಲ್ಲ.

ಭೀಮ್ಯಾ : ವಯಸ್ಸ ಹ್ವಾಧಾಂಗ- ಹ್ವಾಧಾಂಗ ನನಗ ಈಗೀಗ ನೆನಪಾಗಕ ಹತ್ತೇತ್ರಿ- ನೀವ್ ಏರೋ ಕುದುರಿ ಸಿಕ್ಕೀತೇನಾ- ಅಂತ. ನಿಮಗ ಬ್ಯಾಸರ ಬರಾಣಿಲ್ರಿ?

ನಾಣಿ : ಬರದೇನೋ? ಬ್ಯಾಸರ್ಯಾಕ ಬರೋದಿಲ್ಲಂದಿ?

ಭೀಮ್ಯಾ : ಇಷ್ಟ ತಲೀ ಕೆಡಿಸಿಕೊಳ್ತೀರಿ- ತಿನ್ನೋದ ಬ್ಯಾರೇ ಅಲ್ಲಾ, ವಿಚಾರ ಮಾಡೂದ ಬ್ಯಾರೇ ಅಲ್ಲಾ: ಒಮ್ಮೊಮ್ಮೆ ತಲೀಲೆ ತಿಂದ ಬಾಯಿಲೆ ವಿಚಾರ ಮಾಡತೇರಿ, ಅದಕ್ಕ ಬ್ಯಾಸರ ಬರಾಣಿಲ್ಲೇನ್ರಿ ಅಂದೆ.

ನಾಣಿ : ಬರತ ಬರತ ನೀ ದುಶ್ಚಟಧಾಂಗ ಕಾಣತಿ, ಹಸನ ಅಂಗಿ ಹಾಕೊಬಾರದ?

ಭೀಮ್ಯಾ : ತಗೊ, ಕೇಳಿ ನೋಡಿದರ ಒಂದು ಮಾತು, ನನಗ ನಿಮಗ ಎಷ್ಟ ಫರಕ ಮಾಡತೈತಿ ನೋಡ್ರಿ. ಸಾಹೇಬರ ನನ್ನ ಎಂದ ಬಿಡತೇರಿ? ಒಮ್ಮಿ ಹೇಳಿ ಬಿಡ್ರಿ.

ನಾಣಿ : ಅವ ಸಿಕ್ಕಮ್ಯಾಲ ಒಂದು ತಾಸ ಇರಬ್ಯಾಡಂತ ಹೇಳಿಲ್ಲಾ
ನಿನಗ? *(ರಂಗದ ಎಡಬದಿಗೆ ಗೀತಾ ಬಂದು ಬಾಗಿಲು ಬಡಿದಂತ ಕೈ ಮಾಡಿದಾಗ ಸಪ್ಪಳವಾಗುತ್ತದೆ. ಇಬ್ಬರೂ ಕ್ರಿಯಾಶೀಲರಾಗಿ)* ಬಂದಳಂತ ಕಾಣತದ. ಹೋಗು, ಮರೀಗಿ ನಿಂತಕೋ, ಹೊತ್ತ ನೋಡಿ ಮುಖಾ ಹಾಕು.

ಭೀಮ್ಯಾ : *(ಎದ್ದು ಮೈ ಮುರಿದು)*

ಈಗ ಹೋಗಿ ಜೋಗತೀನರೇ ಕರಕೊಂಬರಲೇನ್ರಿ?

ನಾಣಿ : ಮತ್ತ ಯಾವ ಜೋಗತಿನೊ? ಸುಮ್ಮನ ಹೋಗಬಾರದ?

ಭೀಮ್ಯಾ : *(ಹೋಗುತ್ತ)*

ನಾ ಕರಕೊಂಬರಾವ
ನೋಡ್ರಿ. *(ಭೀಮ್ಯಾ ಮಾಯವಾಗುತ್ತಲೂ ನಾಣಿ ಹೋಗಿ ಅವಳೆದುರು ನಿಂತು ಬಾಗಿಲು ತೆಗೆದಂತೆ ನಟಿಸುವನು. ಗೀತಾ ಒಳ ಬಂದು ಅವಸರದಿಂದ ಬಾಗಿಲು ಹಾಕಿದಂತೆ ಮಾಡಿ ಬೆವರು ಒರೆಸಿಕೊಳ್ಳುತ್ತ)*

ಗೀತಾ : ಏನ ಬಿಸಿಲೂ, ಏನ ಬಿಸಿಲೂ, ಏನ ಬಿಸಿಲೂ ಅಂತೀನಿ-

ನಾಣಿ : ಹೌದ, ಹೌದ: ಹೊರಗ ನೋಡಬಾರದ? ಜಗತ್ತೆಲ್ಲಾ ಬಿಸಲಗುದರ್ಯಾಗಿ ಥೈ ಥೈ ಕುಣುಕೋತ ಓಡಿಧಾಂಗ. ಹಿಡೀಬೇಕಂದರ ನನ್ನಂಥಾ ಸ್ಪೋರ್ಟ್ಸ್‌ಮನ್ ಬಿಡು, ಬಸ್ಸಿಗಿ ಕೂಡಾ ಸಿಗಾಣಿಲ್ಲ,

ಗೀತಾ : ನಿನ್ನ ಸಲುವಾಗಿ ಏನೆಲ್ಲಾ ಸುಳ್ಳಸುಳ್ಳ ಒಂದಕ್ಕ ಒಂಬತ್ತ ಹೇಳಿ, ನಮ್ಮತ್ತಿ- ಅದೊಂದು ಎಂದ ಬೆಂಕೀ ಕಾಣತದನೋ *(ಅಣಿಕಿಸುತ್ತ)* 'ಗೀತಾ, ಜೋಡೀ ಚಿತ್ರಾನ ಕರಕೊಂಡ್ಹೋಗು' ಅಂದ್ಲು. ಹಿಂಗ್ಹೋಗಿ ಹಾಂಗ್ಬರಾಕ ಹುಡಿಗೀನ್ಯಾಕ ಸಾಲೀ ಬಿಡಸ್ತೇರೆಂತ ಅಂದ ಓಡಿ ಓಡಿ ಬಂದೆ,

ನಾಣಿ : ನನ್ನ ಕುದರೀಮ್ಯಾಲ ಇಷ್ಟ್ಯಾಕ ದುಡ್ಡು ಕಟ್ಟಾಕ ಹೋಗಿದ್ದೆ? ಥಕ್ಕನ ಕಾಲಮುರದರ ಏನ ಮಾಡತಿ?

ಗೀತಾ : ನಮಗ ದುಃಖದಾರ ನಿಮಗ ಭಾಳ ಸಂತೋಷೇನೋ.

ನಾಣಿ : ಸಣ್ಣದೊಂದ ನಗಚೇರಿಕಿ ಸುದ್ದಾ ತಡ್ಯಾಣಿಲ್ಲಲ್ಲ ನೀನು?

ಗೀತಾ : ಕಣ್ಣಾಗ ನೀರ್ಬರ್ತಾರ್ವೇನ ನೋಡೂಣು- ಅಂತ ಬೆರಳ ಚುಚ್ಚಿ ಚೇಷ್ಟಾ ಮಾಡಂತದ ಏನೊ.

ನಾಣಿ : ಮಾರಾಯಳ ನಮೋ ಅಂತೇನಾಯ್ತು? ಕಿವಿಗೆ ಹಳ್ಳಾ ಹಚ್ಚಿಕೊಳ್ಲಾ? ದೀಡ ನಮಸ್ಕಾರ ಹಾಕಲ್ಯಾ? (ಮಾತು ಮುಗಿಯುತ್ತಿರುವಂತೆ ಸ್ತ್ರೀ ಧ್ವನಿಯೊಂದು ನರಳುತ್ತದೆ. ಗೀತಾ ಹೆದರಿ, ಥಟ್ಟನೆ ಹೋಗಿ ನಾಣಿಯ ರಟ್ಟೆ ಹಿಡಿದುಕೊಂಡು)

ಗೀತಾ : ಯಾರೋ ನರಳಿಧಾಂಗ ಕೇಳತದ, ಯಾರದು?

ನಾಣಿ : ಅದ?

ಗೀತಾ : ಯಾರದು?

ನಾಣಿ : ಪಕ್ಕದ ಮನ್ಯಾಗ ಒಬ್ಬ ಎಳೀ ಹುಡುಗ ಇದ್ದಾನ.

ಗೀತಾ : ಯಾರೋ ಹೆಂಗಸರು ನರಳಿಧಾಂಗಿತ್ತು.

ನಾಣಿ : ಅವಂದ ಈ ಮನಿ.

ಗೀತಾ : ಹೆಂಗಸರು ನರಳಿಧಾಂಗಿತ್ತಂದರ.

ನಾಣಿ : ಘನ ಚೆಲುವ. ಬಟ್ಟಮುಖಾ, ಚಿಗರ ಮೀಸಿ...

ಗೀತಾ : ಅಯ್ಯ ಹೆಂಗಸ ನರಳಿಧಾಂಗಿತ್ತಂದರ....

ನಾಣಿ : ಹೂ ಅನ್ನ, ಅದನ್ನ ಹೇಳತೇನ. ಅದರಾಗ ಮುಗುಳನಗಿ ಕಲತ್ತಾನು: ಎಷ್ಟಂದರೂ ಎಳೀ ಹರೆ. ಮಗನ ಹುಳಿಮುದಾ ತುಳುಕಿ ಕೊಡದ ತಳಾ ಕಾಣ್ಸಾಣಿಲ್ಲ. ಯೋಳೆಂಟ ಮಂದಿ ಹೆಂತಾ ನೋಡಿದರ ನದರ ಜಾರಬೇಕಂಥಾ ಹುಡಿಗೇರ್ನ ಎಲ್ಲೆಲ್ಲೆವರ್ನೋ, ಪೋಲೀಸು ಪೋಜುದಾರ ಹೆಂಡರನೆಲ್ಲಾ ಓಡಿಸಿಕೊಂಡ ಬಂದ ಇಟ್ಟಕೊಂಡಾನ. ಅವರು ಇಲ್ಲಿ ಬಂದ ಕೂಡ್ಲೆ ಕಣ್ಣ ಕಳಕೊಳ್ತಾರ, ಇನ್ನ ಮುಗೀತ ನಿಮ್ಮ ಮನೀಗಿ ಹೋಗರೆಂದರ ನೀ ಅಂದಾಂಗ ಆಡಿಕೋತ ಇಲ್ಲೇ ಇರತೇವಂತಾರ ಅವರು! ಅವ ಕೊಡದಾಗ ಮುಖ

ನೋಡಿ ತಲೀ ಹಿಕ್ಕೋಬೇಕಂದರ, ಇವರು ಅವನ ಸುತ್ತಮುತ್ತ ನಿಂತ ಅತ್ತಗೋತ, ಇಲ್ಲಾ ನಕ್ಕೋತ ಅದನ್ನಳಿಗ್ಯಾಡಸ್ತಾರ. ಅದಕ್ಕೆ ಅವರು ಹಗಲ ಸಂಜೀತನಕಾ ನಗತಾರ. ರಾತ್ರಿ ಬೆಳತನಕಾ ಅಳತಾರ. ತಲೀ ಚಿಟ್ಟ ಹಿಡದೈತಿ ನಂಗಂತೂ.

ಗೀತಾ : ಪೋಲೀಸರಿಗಿ ಕಂಪ್ಲೇಂಟ ಯಾಕ ಕೊಡಬಾರದು?

ನಾಣಿ : ನಾಲ್ಕೈದು ಸಲ ಹೋಗಿದ್ದೆ. ಹ್ವಾದಾಗೊಮ್ಮಿ ಆಫೀಸಿನ್ಯಾಗ ನಿನ್ನ ಗಂಡs ಕುಂತಿರತಾನ ಏನ್ಹೇಳ್ತಿ?

ಗೀತಾ : ಅಕ್ಕಪಕ್ಕದವರಿಗಿ ತ್ರಾಸ ಆಗತದ, ಹಿಂಗ ಮಾಡಬ್ಯಾಡ್ರಂತ ಹೇಳಬೇಕು.

ನಾಣಿ : ಅದೂ ಆಯ್ತು. ಒಂದಿನ ಸಿಟ್ಟಿಗೆದ್ದ ಆಜೂಬಾಜು ನೋಡಿ ಗುದಮುರಗಿ ಹಾಕಬಾರದ? ತಲೀ ಎಲ್ಲಿಟ್ಟಿದೇರೇಂತ ಟಬರಲೆ ಹೋಗಿ ನೋಡತೇನು, ಒಬ್ಬರಿಗೂ ತಲೀ ಇಲ್ಲ: ಯೋಳೆಂಟೂ ಮಂದಿ ಸಾಲಕ ನಿಂತ ಸೀರಿ ಎತ್ತೆತ್ತಿ ನಿಂತಾರಲಾ! ಅವರವರ ತಲಿ ಅವರವರ ತೊಡ್ಯಾಗ ನಗತಿದ್ದವು!

ಗೀತಾ : *(ಮತ್ತೆ ತಬ್ಬಿಕೊಂಡು)*

ಅವಯ್ಯ ಈ ಮನಿ ಯಾಕ ಬಿಡವೊಲ್ಲಿ?

ನಾಣಿ : ನೀ ಸಿಗೋತನಕ ಇರಲೆಂತ ಸುಮ್ಮಕಿದ್ದೆ.

ಗೀತಾ : ಖರೇನ?

ನಾಣಿ : ಖರೆ. ನೀ ನನಗ ಸಿಕ್ಕ ದಿನಾ ಈ ಮನ್ಯಾಗ ನಾ ಇರೋದಿಲ್ಲಂತ ಜೋತಿಷ್ಯ ಹೇಳ್ಯಾರ.

ಗೀತಾ : ಅದೆಲ್ಲಾ ಖರೆ. ಸರಕಾರದವರು ನನ್ನ ಗಂಡಗ ಏನು ಗುಂಡಿನ ಪಿಸ್ತೂಲ ಕೊಟ್ಟಾರ.

ನಾಣಿ : ಅವೇನ ಕೊಲ್ಲತಾನ? ನೆಟ್ಟಗೊಂದ ತಗಣಿ ಒರದ ಗೊತ್ತಿಲ್ಲ.

ಗೀತಾ : ತಗಣೀಗಿ ಬಾಳ ಹೆದರತಾನ ಖರೆ, ಮನ್ಯಾಗಿದ್ದಾಗೆಲ್ಲ ಅದರ ಗುರಿ ನನ್ನ ಕಡೇನ ಮಾಡಿ ಇಟ್ಟಿರತಾನ.

ನಾಣಿ : ಚಿಂತಿ ಮಾಡಬ್ಯಾಡ, ಒಂದ ಒಳಗುಟ್ಟ ಹೇಳಿರತೇನ, ಯಾರ ಮುಂದ ಹೇಳಬ್ಯಾಡ. ಪೋಲೀಸ, ಪೋಜುದಾರ ಇವರ್ಯಾರಿಗೂ ಗುರಿ ಹಿಡದ ಗೊತ್ತಿಲ್ಲ.

ಗೀತಾ : ಗೊತ್ತಿಲ್ಲಾ?

ನಾಣಿ : ಗೊತ್ತಿಲ್ಲ. ಈ ಪಕ್ಕದ ಮನಿ ಹುಡುಗ ಇದ್ದಾನಲ್ಲ. ಪೋಜದಾರ ಹೆಂತೀನs ತಂದಾನ.

ಗೀತಾ : ಅವಯ್ಯಾ

ನಾಣಿ : ಪೋಲೀಸರೆಲ್ಲಾ ಅವನ ತಲಾಸದಾಗ ಅದಾರ. ಅವ ಅಂತ ತಿಳಕೊಂಡ ಇಲ್ಲೀತನಕ ಹತ್ತ ಹದಿನೈದ ಮಂದೀನ್ನ, ಪಾಪ ಯಾರ್ಯಾರ್ನೋ ಕೊಂದು ಒಗದರು.

ಗೀತಾ : ಅವಯ್ಯಾ ನನಗಿಲ್ಲಿ ಅಂಜಿಕಿ ಬರ್ತದ. ನಾ ಹೋಗ್ತೇನಿ.

ನಾಣಿ : ಅಷ್ಟ್ಯಾಕ ಅವಸರಾ ಮಾಡ್ತೀ? ಓಡಿ ಬಂದೀದಿ. ದಣದ್ದಿ ಅಂತ ತಿಳಕೊ. ನೋವ ಗೀವ ಆಗಿದ್ದರ ಹೇಳು ಬ್ಯಾಂಡೇಜ ಕಟ್ಟತೀನಿ. ನನಗ ನೀಕಟ್ಟು. ನಿಮ್ಮ ಹಿತ್ತಲದಾಗ ಕದ್ದ ಓಡಾಡಿ ಕಾಲೆಷ್ಟ ನೋಯ್ತಾವ ಗೊತ್ತದೇನ?

ಗೀತಾ : ಹಿತ್ತಲದಾಗ?

ನಾಣಿ : ಹೂ, ದಿನಾ ಬಂದ ಸಿಳ್ಳ ಹೊಡೀತೇನ, ಕೇಳ್ಸಾಣಿಲ್ಲ?

ಗೀತಾ : ಇಲ್ಲಾ ಯಾ ಮಗ್ಗಲಾ ಹಚ್ಚಿದರೂ ನನ್ನ ಗಂಡ ಗೊರಕಿ ಹೊಡಿಯೂದs ಕೇಳತದ. ಅಬ್ಬಬ್ಬ! ಎಂಥಾ ಕೆಟ್ಟ ನಿದ್ದೆಂತಿ? ಮದಿವ್ಯಾದಗಿನಿಂದ ಅವ ಎಚ್ಚರಿದ್ದಾಗ ಒಮ್ಮಿಯೂ ಅವನ್ನೋಡೇ ಇಲ್ಲಾನು.

ನಾಣಿ : ಮತ್ತ ರಾತ್ರಿ ಏನ್ಮಾಡ್ತಿ?

ಗೀತಾ : ಇನ್ನೇನ್ಮಾಡ್ಲಿ? ಅವರ ಗೊರಕಿ ಜೋಡಿ ಆಟಾ ಆಡಿಕೋತ ಮಲಗೋದು.

ನಾಣಿ : ನಾ, ಸಿಳ್ಳ ಹೊಡದದ್ದ ಕೇಳಿಸಲಿಲ್ಲ ಅನ್ನಬಾರದ?

ಗೀತಾ : ಇಲ್ಲ.

ನಾಣಿ : ನಾ ಸುಧಾ, ಸುಧಾ, ಸುಧಾ ಅಂತ, ನಾಗಿನ ಸಿನಿಮಾ ಧಾಟಿ ಹಚ್ಚಿ ನಾಕೈದ ಹಾಡು ಬರೆದು, ಹಿಂದ ಹಿತ್ತಲಾಗ ಹಾಡಿಕೋತ, ನಡನಡವ ಸಿಳ್ಳಹೊಡೆದು, ಪುಂಗಿ ಮ್ಯೂಸಿಕ್ ಕೊಟ್ಟು ಹಾಡತಿದ್ದೆ. ಕೇಳಿಸಲಿಲ್ಲಾ?

ಗೀತಾ : ಸುಧಾ?

ನಾಣಿ : ಸುಧಾ ಅಲ್ಲ, ಸುಧಾ ಸುಧಾ. ಈಗೊಂದು ಸ್ಯಾಂಪಲ್ ಹೇಳಲೇನು? ಗುಡ್ ಐಡಿಯಾ
- *(ಎರಡು ಕೈ ಪುಂಗಿಯಂತೆ ಮಾಡಿ, ಗಲ್ಲ ಉಬ್ಬಿಸಿ, ನಾಗಿನ ಚಿತ್ರದ ಪುಂಗಿಯ ಧಾಟಿಯಲ್ಲಿ ಸುಧಾ ಸುಧಾ ಸುಧಾ, ಎಂದು ಹೇಳುತ್ತ, ಅವಳ ಮುಖದ ಸುತ್ತ ಅದು ಹಾವಿನ ಹೆಡೆಯೆಂಬಂತೆ ಸುತ್ತುವನು. ಅವಳು ಅವನ ಕೈ ತಿವಿದೀತೆಂದು ಮುಖ ಅತ್ತಿತ್ತ ತಪ್ಪಿಸಿಕೊಳ್ಳುವಾಗ, ಅದು ಹಾವಿನ ಹೆಡೆಯಂತೇ ಚಲಿಸುವುದು. ಅದನ್ನು ನೋಡಿ ಗೆಲುವಿನಿಂದ)* ಹೆಂಗ ಬಂದಿ. ಹೆಂಗ ಬಂದಿ? ಕೇಳಿಸ್ತಿಲ್ಲ? ನನ್ನ ಮೈಗಿ ಸಿಂಬಿ ಸುತ್ತಿ ಏರಬೇಕನ್ನಸ್ತದಲ್ಲ?

ಗೀತಾ : ನನ್ಹೆಸರು ಸುಧಾ ಅಲ್ಲಾ ಅಂದೆ.

ನಾಣಿ : ಹಿಂಗ್ಯಾಕ ಮುಟ್ಟುವಾಟ ಆಡ್ತೀನ ಸುಧಾ? ಕಾಲೇಜ ಹಿಂದ ಹೊಂಡದ ಹತ್ತರ ನೀ ನಿಂತಾಗ, ನಾ ಹಿಂದಿಂದ ಬಂದ- ನೆನಪೈತಿ? ನೀರಿನ್ಯಾಗ ನೋಡಿದ್ರ ಮೈ ತುಂಬ ಹೂ ಬಿಟ್ಟ ತೆರಕೊಂಡ ನಿಂತಿದ್ದಿ. ಕೆಟ್ಟ ಮಳೀಗಾಳ್ಯಾಗ ಕ್ರಾಪ ಕೆಟ್ಟೈತೇನ ನೋಡಿಕೊಳ್ಳೋಣಂತ ಬಂದರ- ನನ್ನ ಬದಲಿ ನೀ ಕಂಡಿ- ನಾ ಸುಧಾ ಅಂತ ಕರೆದಾಗ ಏನಂದಿ ನೆನಪೈತಿ?

ಗೀತಾ : ಇಲ್ಲ.

ನಾಣಿ : ಯಾಕ ಸುಳ್ಳ ಹೇಳತೀಯೇ ಸುಧಾ-

ಗೀತಾ : ನನ್ನ ಹೆಸರು ಸುಧಾ ಅಲ್ಲಾ, ಅಂದೆ. ನನ್ನ ಹೆಸರು ಗೀತಾ ಗೀತಾ ಗೀತಾ. ಅವ್ವ ಅಪ್ಪ ಕರೆದದ್ದು ಗೀತಾ ಅಂತ. ನನ್ನ ಗಂಡ ಮದಿವ್ಯಾಗ ಹೆಸರು ಹೇಳಿದ್ದು 'ಹಗ್ಗಲೆ ಬಡದರ ಮಗ್ಗಲಾಗ ಬರತಾಳ ಗೀತಾ' ಅಂತ.

ನಾಣಿ : ಅವ್ವ ಅಪ್ಪಾ ಇಟ್ಟ ಹೆಸರ ಕರ್ಯಾಕ ನಾ ಏನ ಹಾಜರಿ ಬುಕ್ಕೇನ? ಮದಿವ್ಯಾದ ಮ್ಯಾಲ ಹುಟ್ಟೆಸರು ಬಿಟ್ಟು ಇನ್ನೊಂದು ಹೆಸರಿಡತಾರ ಗೊತ್ತದಿಲ್ಲೋ? ನಾ ಹೇಳಿದ್ದು ಆ ಹೆಸರು ಸುಧಾ ಅಂತ. ನಿನ್ನ ಗಂಡ ಇನ್ನ ಆ ಹಳೇ ಹೆಸರಿನಿಂದ ಕರೀತಾನಂತs ನಿನಗದು ಕೇಳ್ಸಾಣಿಲ್ಲ ಹೌದು? ಕೇಳಿಸಿದರೂ ಅವ್ವಾ ಅಪ್ಪಾ ಕರಧಾಂಗ ಕೇಳತದ. ನನಗ ನಿರಾಸೆ ತಡಕೊಳ್ಳಾಕ ಆಗಾಣಿಲ್ಲ. ಇನ್ನಷ್ಟ ಹೇಳತೇ ನ್ನೋಡು, ನೀ ಈಗೊಂದ ಸರಳರೂಪ ಲೆಕ್ಕಾ ಕಲೀತೀ ಅಂತ ತಿಳಕೋ. ಅದರ ಸೂತ್ರ ಏನಂದರ: ಅಷ್ಟಕ್ಕ ಇಷ್ಟಾದರ ಇಷ್ಟಕ್ಕ ಎಷ್ಟ? ಹಡದವರಿಗೆ ಮಗಳಾದರ ಗಂಡಗ ಏನದ್ಲಾ? ಹೆಂಡತಿ. ಅದರಂತೆ, ಗಂಡಗ ಹೇಂತ್ಯಾದರ ಹಾದರಕೇನಾದ್ಲು? ಉತ್ತರ: ಸುಧಾ! ನಾವು ಹಿಂಗ ಬ್ಯಾರೇ ಹೆಸರ ಇಟ್ಟಗೊಳ್ಳದಿದ್ದರ ಊರ ಮಂದಿಗೆಲ್ಲಾ ನಮ್ಮ ಗುಟ್ಟ ಗೊತ್ತಾಗಿ ಆಮ್ಯಾಲ ಏನ ಮಾಡ್ತೀ ಹೇಳು? ಇದನ್ನ ತಿಳಿದs ನಾ ನಿನ್ನ ಬೆನ್ನ ಕೂಡ್ಲೆ ಹೆಸರ ಬದಲಿ ಇಟಗೊಂಡೆ. ತಿಳೀತ?

ಗೀತಾ : ನನ್ನ ಹೆಸರು ಸುಧಾ ಅಲ್ಲಾ ಅಂದೆ.

ನಾಣಿ : ಮತ್ತ ನನ್ನ ಹೆಸರೇನ ನಾಣೀ ಏನ? ಸುಮ್ಮನ ಹೆಸರ ಇರೋದ್ಯಾಕ? ಅನುಕೂಲಕ. ಈಗ ಸುಧಾ ಅಂತ ಕರದರ ಅನುಕೂಲಾಗತೈತಿ, ಅದನ್ನ ಕರೀತೇನೆ.

ರೆಡಿ? ಎಲ್ಲಿ?- ಸುಧಾ ಅಂತ ಕರೀತೇನೆ, ಓ ಅನ್ನಬೇಕು ಹಾ? ಸುಧಾ....
*(ಗೀತಾ ನಗುತ್ತಾ ಓ ಎನ್ನಲು ತುಟಿ ತೆರೆಯುತ್ತಿರುವಂತೇ ಹೆಣ್ಣು ಧ್ವನಿಗಳು ಕಿರುಚಲಾರಂಭಿಸುತ್ತವೆ. ಗೀತಾ ಹೆದರಿ ಓಡಬೇಕೆಂದು ನಾಲ್ಕೈದು ಹೆಜ್ಜೆ ಇಟ್ಟಿರುವಷ್ಟರಲ್ಲೇ ಭೀಮ್ಯಾ ಬಾಗಿಲಲ್ಲಿ ನಿಂತಿರುತ್ತಾನೆ. ಗೀತಾ ಮತ್ತೆ ಅವಸರದಿಂದ ಮತ್ತೆ ನಾಣಿಯನ್ನು ತಬ್ಬಿದಾಗ ಅವನು 'ಹೆದರಬ್ಯಾಡ ಹೆದರಬ್ಯಾಡ ನಾ ಇಲ್ಲಾ?' ಎಂದು ಸಂತೈಸುತ್ತ ಕುರ್ಚಿಯಲ್ಲಿ ಕುಳ್ಳರಿಸುತ್ತಾನೆ)* ನೀ ಹಾಂಗೆಲ್ಲಾ ಓಡಿಹೋಗಲಾರೆ ಸುಧಾ,

ಭೀಮ್ಯಾ : *(ಒಮ್ಮೆಲೆ ಬಾಗಿಲ ಬಳಿಕಾಣಿಸಿಕೊಂಡು)*

ಸಾಹೇಬರ ಏನ್ರೆ ಕೆಲಸೈತ್ರಿ?

ನಾಣಿ : ಈಗ ಬಂದ್ಯಾ ಮಗನ? ಆ ರಂಡೇರ ಸತ್ತರೇನ ನೋಡ.
*(ಭೀಮ್ಯಾ– ಒಳಗಡೆ ಹೋಗಿ ಮತ್ತೆ ಸ್ವಸ್ಥಾನಕ್ಕೆ ಬಂದು)*

ಭೀಮ್ಯಾ : ಇನ್ನೂ ಹಾಂಗ ಅದಾರ್ರಿ.
*(ಎನ್ನುತ್ತ ಪಿಸ್ತೂಲ ಗುರಿ ಗೀತಾಳ ಕಡಗೇ ಹಿಡಿದು ಬಾಗಿಲಲ್ಲಿ ನಿಲ್ಲುತ್ತಾನೆ)*

ನಾಣಿ : ನೀನು ಹಾಂಗೆಲ್ಲಾ ಓಡಿ ಹೋಗಲಾರೆ ಸುಧಾ, ಯಾಕ ಗೊತ್ತಾ?

ಗೀತಾ : ಊಹೂ.

ನಾಣಿ : ಎಷ್ಟು ಬೇಕ ನಿನಗ ಕಾಣ? ಒಂದು: ನಾನೊಬ್ಬ ಮಹಾ ಆರ್ಟಿಸ್ಟು, ಆರ್ಟಿಸ್ಟು ಪ್ರಪಂಚದ ಕಚ್ಚಾ ವಾಸ್ತವಿಕತೆಯಲ್ಲಿ ಹೊಸ ಹೊಸ ಜೀವಚೇತನಗಳನ್ನು ಸೃಷ್ಟಿಸಿ ಅವುಗಳಿಗೆ ಹೊಸ ಹೆಸರು ಕೊಡುತ್ತಾನೆ. ಪ್ರತಿಯಾಗಿ ಅವುಗಳಿಗೆ ತನ್ನ ಹೆಸರು ಕಲಿಸುತ್ತಾನೆ. ನಿನ್ನ ಬ್ರಹ್ಮನ್ನ ಬಿಟ್ಟ ನೀ ಹೆಂಗ ಹ್ವಾದೀ, ಎಲ್ಲಿ ಹ್ವಾದೀ, ಯಾಕ ಹ್ವಾದೀ ಹೇಳು? ಎರಡು : ಭೀಮ್ಯಾ.

ಭೀಮ್ಯಾ : ಓರಿ ಸಾಹೇಬರ.

*(ನಾಣಿ ಗೀತಾಳನ್ನು ನೋಡುತ್ತಲೇ ಕೈ ಒಡ್ಡುವನು, ಭೀಮ್ಯಾ ಅವನ ಕೈಗೆ ಪಿಸ್ತೂಲು ಕೊಟ್ಟು ಸ್ವಸ್ಥಾನಕ್ಕೆ ಹೋಗುವನು)*

ನಾಣಿ : ಪಿಸ್ತೂಲಂದರ ಇದs

*(ಅವಳಿಗೆ ಗುರಿ ಹಿಡಿದು)* ಓಡಿ ಹೋಗ್ತೀ?

ಗೀತಾ : ನಾಣಿ, ನಮಗಿಂತಾ ಚೇಷ್ಟೆಯೇನೂ ಸರಿ ಬರಾಣಿಲ್ಲ. ಚೆಂದ ಚೆಂದ ಪತ್ರಾ ಬರೆದು ಕರೀತಿ, ಹಿಂಗೆಲ್ಲಾ ಚುಚ್ಚಿ ಚುಚ್ಚಿ ಮೋಜಾ ನೋಡ್ತಿ.

ನಾಣಿ : ಅದನ್ನ ಬ್ಯಾರೇ ಥರಾ ಹೇಳಬೇಕಂದರ ಈ ಪಿಸ್ತೂಲ ನೀ ತಗೋ, ಹಿಡಕೋ. ಇದು ಅದರ ಕುದರಿ.

*(ಪಿಸ್ತೂಲು ಅವಳ ಕೈಗಿತ್ತು ಅವಳ ಬೆರಳನ್ನು ಅದರ ಕುದರಿಯಲ್ಲಿ ಸೇರಿಸಿ ಅದರ ಗುರಿ ತನ್ನ ಎದೆಗೆ ಹಿಡಿದುಕೊಂಡು)*

ನೀ ನನ್ನ ಕೊಲ್ಲು, ಕುದುರಿ ಹಿಂದ ಜಗ್ಗಿದರಾಯ್ತು. ಗುಂಡ ಹಾರತದ, ಅಯ್ಯೋ ಅಂತ ಸತ್ತ ಬೇಳ್ತೇನ ನಾ. ಎಲ್ಲಿ ಹಾರಸು *(ಗೀತಾ ಪಿಸ್ತೂಲು ಚೆಲ್ಲುವಳು)* ಯಾಕ ಕೊಲ್ಲಲಿಲ್ಲ ಹೇಳು? ಯಾಕಂದರ ನೀ ಓಡಲಾರೆ. ಯಾಕ ಓಡಲಾರೆ ಹೇಳು? ಯಾಕಂದರ ನೀನ ನನ್ನ ಸೃಷ್ಟಿ, ಸುಧಾ.

ಗೀತಾ : ನಾಣಿ ನಾ ಹೇಳಲಾ? ಖರೇನ ನನಗೇನ ಇದ ಚೆಂದ ಕಾಣ್ಸಾಣಿಲ್ಲ, ತಗಿ. ಜೀವ ಪಣಕ್ಕ ಹಚ್ಚಿ ಬಂದರ ಏನಕೇನರ ಹೊಯ್ಕಾ ತಗೀತಿ. ಮಾಡಿಕೊಂಡ ಹೇಂತಿ ಸುದ್ದಾ ಹೇಳಿಧಾಂಗ ಕೇಳಾಣಿಲ್ಲ. ಶಾಣ್ಯಾ ಅದಿ, ಆ ಶನಿ ಹಾದಿ ಬಿಡಸ, ನಾವ ಹೋಗತೇವ. ಸುಧಾ ಅಂತ. ಹೊಸ ಹೆಸರಂತ, ಆಕಿ ಯಾವಾಕಿ ಸುಧಾ ಸುಧಾ ಅಂತ ಹಾಡ ಕಟ್ಟೇದಿ ಆಕಿ ಬೆನ್ಹತ್ತಿ ಹೋಗು. ನಿನ್ನ ಸಹವಾಸ ಸಾಕ್ನಮಗ. ಅಷ್ಟಕ್ಕ ಮುಗೀತೇನ ಅಂದರ ಮತ್ತೆ ತನ್ಹೆಸರೂ ಬದಲ ಮಾಡಿದಾನಂತ.

ನಾಣಿ : ಮೋಸ ವಂಚನೆ ಇದರಾಗೇನದ?

ಗೀತಾ : ಅಪ್ಪ ಅಂದ ಕಾಲ ಬೀಳತೇನಾಯ್ತು? ಮೊದಲಿನ್ಹಾಂಗ ನೀ ನಾಣೀ ಆಗಿ ಗೀತಾ ಅಂತ ಬಾ, ಓ ಅಂದೇನ.

ನಾಣಿ : ಮಾರಾಯಳ ಒಂದ ಅಂದರ ಹತ್ತ ಕರಾರ ಹಾಕತಿ.

ಗೀತಾ : ತಣ್ಣಗ ಗೀತಾ ಅಂತಂದರ ಕರಾರ್ಯಾಕ ಬೇಕ ನಡುವ? ಹುಳಾ ಕಡದ ಹಗಣಾ ಮಾಡತಿ, ಅದಕ್ಕ ಕಾಗದ, ಕರಾರ ಪತ್ರ ಬೇಕ.

ನಾಣಿ : ಹೋಗಲಿ, ನಾ ನೀ ಕೂಡಿ ಕಾಲೇಜ ಕಲ್ತದ್ದಾದರೂ ಹೌದ?

ಗೀತಾ : ಅಲ್ಲಂದಿನಿ?

ನಾಣಿ : ಕ್ಲಾಸಿನ್ಯಾಗ ಈ ಹುಡುಗನ್ನ ನಾಣಿ ಅಂತ ಕರದಿ?

ಗೀತಾ : ಇಲ್ಲಾ?

ನಾಣಿ : ಅಂದ ಸಿನಿಮಾಕೆ ಹೋಗಿದ್ವಿ. ಎಷ್ಟು ಮಜಾ, ನೋಡಿದರ ಗಲಗುಚ್ಚಿ ಆಗ್ತದಲ್ಲಾ, ಅಂದಾಗ ನಾಣಿ ಅಂದಿ?

ಗೀತಾ : ಹೂ, ಹೂ, ಹೂ, ಕ್ಲಾಸಿನ್ಯಾಗ ಹಿಂದಿನ ಬೆಂಚಿದಾಗ ಕುಂತ ಜಡೀ ಜಗ್ಗತ್ತಿದ್ದಾ, ನಾಣೀ ಅಂದೆ ಸುಮ್ಮನಾದ. ಸಿನಿಮಾ ನೋಡೋವಾಗ ಟೊಂಕದಾಗ ಕೈಯಾಡಸಾಕ ಬಂದ- ನಾಣೀ ಅಂದೆ ಕೈ ತೆಗೆದ. ಸಿಕ್ಕಸಿಕ್ಕಾಗ ಹಲ್ಲ ಕಿಸೀತಿದ್ದ, ತೊಳಕೊಂಡ ಕಿಸೀಬಾರದ ನಾಣೀ, ಅಂದೆ. ಟೂಥ್ ಪೇಷ್ಟು ಬ್ರಶ್ಯು ಕೊಂಡ. ನಾ ಪತ್ರದಾಗ ಒಂದು ಸಲ ನಾಣೀ ಅಂದರ ಮೂರಸಲ ಉತ್ತರಾ ಕೊಡತಿದ್ದಾ. ಅಬ್ಬಬ್ಬ ಈ ಕೂಡೋಣ ಬಾ, ಕೆಡಿಸೋಣ ಬಾ- ಸಾಕ ನನಗ. ಪತ್ರದಾಗ ಗೀತಾ ಗೀತಾ ಅಂತ ಹಲಬತಿದ್ದಿ. ನೀ ಒಮ್ಮಿ ಕರದರ ರಾತ್ರಿ ಕನಸಿನಾಗ ಓ ಓ ಓ ಅಂತ ಉಟ್ಟ ಸೀರಿ ಉಂಗುಟಕ ಸಿಕ್ಕ ಹರದರೂ ಖಬರಿಲ್ಲದ ಕುಣೀತಿದ್ದೆ ಗೊತ್ತಾ? ಬೆಳಗ್ಗಿ ಎದ್ದ ನೋಡಿದರ ಜಗತ್ತಿನ ತುಂಬ ನನ್ನ ಬಿಟ್ಟ ಉಳಿದವರೆಲ್ಲಾ ಗಂಡರ ಆಗಿ, ರೋಮರೋಮೆಲ್ಲಾ ಗವೀ ಆಗಿ, ಗವಿಗೊಬ್ಬೊಬ್ಬ ಬ್ರಹ್ಮಚಾರಿ ಕುಂತ ನನಗಾಗೇ ತಪಸ್ಸ ಮಾಡಿಧಾಂಗ ಅನ್ನಸ್ತಿತ್ತು. ನಾಣೀ ಅಂತ ಒಬ್ಬನ್ನ ಕರದರ ಎಲ್ಲರೂ ಓ ಅಂತಿದ್ದರು...

ನಾಣಿ : ಸುಳ್ಳು.

ಗೀತಾ : ಏನ್ಸುಳ್ಳು?

ನಾಣಿ : ಆ ಬ್ರಹ್ಮಚಾರಿಗೆ ನೀ ನಾಣೀ ಅಂದದ್ದು ಸುಳ್ಳು.

ಗೀತಾ : ಮತ್ತೇನ ಏ ಅಂದೆ?

ನಾಣಿ : ಊಹೂ, ನಕಾರದಿಂದ ಸರುವಾಗಿ ಎರಡನೇ ಅಕ್ಷರಕ ಮುಗೀತದ ಹೇಳ್ನೋಡೋಣ.

ಗೀತಾ : *(ನಗುತ್ತ)* ನಮ ನಾಮ ನಕ ನಳ.

ನಾಣಿ : ಊಹೂ, ಮತ್ತೆ ನಕಾರದೊಳಗs ಮುಗೀತದ.

ಗೀತಾ : ನಾ ನೀನೀ ನೂನೂ ನೇನೇ.

ನಾಣಿ : ಊಹೂ ನಾ ದಿಂದ ಸುರುವಾಗಿ ನು ದಾಗ ಮುಗೀತದನ.

ಗೀತಾ : ನಾ ನಾನಾ ನಾನೂ?

ನಾಣಿ : ಹಾ ನೋಡ ನನ್ನ ಸುಧಾ ಸುಧಾ ಸುಧಾ. ನನ್ಸುಧಾ, ಏನ್ಚೆಂದ ಹೇಳತಿ? ಒಂದ ಸಲ ನಾನೂ ಅಂತ ಕರೀ ಸುಧಾ.

ಗೀತಾ : ನಾನೂ.
*(ಅವಳು ಬಾಯಿ ತೆರೆದು ನಗುತ್ತ ಧ್ವನಿ ಹೊರಡಿಸುವಷ್ಟರಲ್ಲಿ ಧ್ವನಿಗಳು ಕಿರುಚಲಾರಂಭಿಸುತ್ತವೆ. ನಾಣಿ ತಲೆ ತಲೆ ಚಚ್ಚಿಕೊಂಡು)*

ನಾಣಿ : ಏ ಭೀಮ್ಯಾ.

ಭೀಮ್ಯಾ : ಬನ್ರಿ ಧಣೇರ.

ನಾಣಿ : ಹೋಗಿ ಆ ರಂಡೇರ್ನ ಗುಂಡ ಹಾಕಿ ಕೊಂದ ಬಾರೋ. ಯಾರಾದರೂ ಯಾಕಂದರ, ಸರಕಾರದ ಹೆಸರ್ಹೇಳು ಹೋಗು. ತಗೋ ಈ ಪಿಸ್ತೂಲ.

*(ನಾಣಿ ಎಸೆದ ಪಿಸ್ತೂಲನ್ನು ಭೀಮ್ಯಾ ಹಿಡಿದುಕೊಂಡು ಒಳಗೆ ಹೋಗುವನು*

ಈ ರಂಡೇರೊಂದ ಎಂದ ಸಾಯತಾರೋ, ಯಾಕೋ? ಹಂಗs ಬಂದಿ?

*(ಭೀಮ್ಯಾ ಹೊರ ಬಂದು ಸ್ವಸ್ಥಾನಕ್ಕೆ ಹೋಗುತ್ತ)*

ಭೀಮ್ಯಾ : ಕೊಲ್ಲಬೇಕಂದರ ಅವರ ನಡುವ ಆ ಹುಡುಗ ಕುಂತಾನ್ರಿ. ಎಲ್ಲರೆ ಗುರಿ ತಪ್ಪಿ ಅವಗ ತಾಗೀತು ಅಂತೇನ್ನಾ.

ಗೀತಾ : ನಾಣೀ, ಬಂದದಕ್ಕ ಚಂದ ಹೂವ ಏರಿಸಿದಿ, ನಾ ಹೋಗತೇನಿನ್ನ. ನಿನಗ ಗೊತ್ತದ, ಆದರೂ ನೆನಪಿರಲೆಂತ ಹೇಳಿರತೇನ- ನನಗ ಗಂಡಗ ಸರಕಾರದವರು ಹೊಸದಾಗಿ ಏಳು ಗುಂಡಿನ ಪಿಸ್ತೂಲ ಕೊಟ್ಟಾರ. *(ಎದ್ದು ಹೊರಡುವಳು)*

ಭೀಮ್ಯಾ : ಸಾಹೇಬರ ಹೊರಗ ಪೋಲೀಸರು ನಿಂತಾರ್ರೀ...

ನಾಣಿ : ಪೋಲೀಸರಾ?

ಗೀತಾ : ಪೋಲೀಸರಾ?

*(ನಡಗುತ್ತಾ ಗೀತಾ ಅಲ್ಲೆ ನಿಲ್ಲುವಳು)*

ನಾಣಿ : ಅವ ಹೆಂತಾವದಾನೋ?

ಭೀಮ್ಯಾ : ಕ್ವಾರಿಮೀಸಿ, ಲಂಡಚಣ್ಣಾ, ಟೊಂಕದಾಗ ಯೋಳಗುಂಡಿನ ಪಿಸ್ತೂಲೈತಿ. ಎರಡೂ ಕೈಲೆ ಮೂಗು ತಿಕ್ಕೋಂತ ಸುಂಬಳ ಒರಿಸಿಕೊಳ್ಳಾಕ ಹತ್ಯಾನ್ರಿ.

ಗೀತಾ : *(ಅಳುತ್ತ ಕುರ್ಚಿಯಲ್ಲಿ ಕೂತು)*

ಅಯ್ಯಯ್ಯೋ ಇನ್ಹೆಂಗ ಮಾಡ್ಲಿ? ಅವರs ನನ್ನ ಯಜಮಾನ್ರು. ಬರಬಾರದ ಬಂದ ಶಗಣೀ ತಿನ್ನೂ ಕಾರಭಾರ ಆಯ್ತು ಎವ್ವಾ.

ನಾಣಿ : ನಾ ಇರೋತಕ ನೀ ಯಾಕಳತಿ? ಸುಮ್ಕಿರ. ನಾನ್ಯಾನ ಹಿಡ್ಯಾಕ ಓಡ್ಯಾಡತಾರ ಅವರು.

ಗೀತಾ : ಯಾ ನಾನ್ಯಾ?

ನಾಣಿ : ಅದ, ಆ ಪಕ್ಕದ ಮನೀ ಹುಡುಗ. ಪೋಲೀಸ ಪೋಜದಾರರ ಹೆಂಡರನ್ನೆಲ್ಲಾ ಓಡಿಸಿಕೊಂಡ ಬಂದಾನಂತ ಹೇಳ್ಲಿಲ್ಲ?

ಗೀತಾ : ಅವನ್ಯಾಕ ಪೋಲೀಸರಿಗಿ ಹಿಡಿಕೊಡವೊಲ್ಲಿ?

ನಾಣಿ : ನೀ ಬ್ಯಾರಿ ಇಲ್ಲಿ ಬಂದೀದಿ. ಹೆಂಗ ಹೋಗಿ ಹೇಳ್ಲಿ?

ಗೀತಾ : ಹಂತಾವನ ಹೆಸರ ಬೇಕಾತ ನಿನಗ?

ನಾಣಿ : ನಾ ಹೇಳಿಧಾಂಗ ನೀ ಸುಧಾ ಆಗಿದ್ದರ ಎಷ್ಟ ಸರಳ ಆಗ್ತಿತ್ತೀಗ! ರೋಬಾರೋಬ ಅವನ ಮುಂದ ಹಾದಹೋಗಿದ್ದರೂ ಗುರುತ ಹಿಡೀತಿರಲಿಲ್ಲ.

ಗೀತಾ : ನಾ ಹೆಂಗ ಪಾರಾಗಲಿ?

ನಾಣಿ : ಎಷ್ಟ ಹೊತ್ತ ನಿಂತಾನ? ಕಾಲಸೋತಮ್ಯಾಲ ತಾನs ಹೋಗತಾನ.

ಗೀತಾ : ತಡಮಾಡಿ ಅತ್ತಿಗೇನುತ್ತರಾ ಹೇಳ್ಲಿ?

ನಾಣಿ : ಏನಾರ ಕವನ ಕಟ್ಟಬಹುದs?

ಗೀತಾ : ಅಯ್ಯಯ್ಯೋ ಅತ್ತೀ ಉಗುಳ ದಾಟಿಬನ್ನೇ ಎವ್ವಾ.

ನಾಣಿ : ಅಳೋವಾಗ ಎಷ್ಟ ಚಂದ ಕಾಣತೀನ ಸುಧಾ.

ಗೀತಾ : ಹೌದ, ನಾವಳೋವಾಗs ನಿನಗ ಚಂದ ಕಾಣ್ಸೋದು.

ನಾಣಿ : ಕಣ್ಣೀರಿದ್ದರ ಭಾಳ ಅನುಕೂಲ. ನಿನಗೊತ್ತಿಲ್ಲ. ತುಂಬಿದ ಸರವೋರಧಾಂಗ ಅಷ್ಟ ದೂರಿಂದ ನೋಡಿದರೂ ಪ್ರತಿಬಿಂಬ ಕಾಣತದ. ನಾ ನಕ್ಕರ ಅವನೂ ನಗತಾನ. ನಾ ನಾನೂ ಅಂತ ಕರದರ ಅವನೂ ನಾನೂ ಅಂತ ಕರೀತಾನ. ಎಲ್ಲಾ ಡಬ್ಬಲ್. ನಿನ್ನ ಮುಂದಂತ ಹೇಳತೇನೆ. ದಯಮಾಡಿ ಇನ್ಯಾರ ಮುಂದ ಹೇಳಬ್ಯಾಡ. ಸಣ್ಣಂದಿರತ ನಾನಾ, ಅವಾ ಸಾಲೀತಪ್ಪಿಸಿ ಹೊಳೀಗಿ ಯಾರಿಲ್ದಲ್ಲಿ ಈಸ್ಯಾಡಾಕ ಹೋಗಿ, ತಿಳೀತಿಲ್ಲ? ಎಷ್ಟ ಮಜಾ ಮಾಡತಿದ್ದುವಂತಿ? ಒಂದಿನಾ ಹಲ್ಕಟ್ಟ ನನ್ನ ಗಲ್ಲಾ ಕಡಿದಿದ್ದಾ.

(೭)

ಗೀತಾ : ಗಲ್ಲಾ?

ನಾಣಿ : ಹಾಂ ಗಲ್ಲಾ *(ತೋರಿಸಿ)* ಇಲ್ಲೆ. ದಾಡೀ ಮಾಡ್ಕೋವಾಗ ಈಗಲೂ ಅಲ್ಲಿ ನೋಯತದ. ಕಡಿದಿದ್ದಾ ಏನಾಗೆತೆಲೇ ಗೌಡ ಗಲ್ಲಕ? ಅಂತ ಮಾಸ್ತರ ಜಬರಿಸಿದರು. ಎಡವಿಬಿದ್ದ ಕಟಿಗಿ ಚುಚ್ಚೇತಿರಿ ಮಾಸ್ತರ ಅಂತೇಳಿ ಪಾರಾಗಬೇಕಾದರ ರಗಡ ಗಮ್ಮಾತ, ನಾ ನಾನ್ಯಾನ ಹೆಸರ ಹೇಳತೇನಂತ ಅವ ತಿಳಕೊಂಡಿದ್ದಾ. ನಾ ಹೇಳ್ಲಿಲ್ಲಾ. ಅವಗ ಒಳ್ಳೆ ಖುಷಿ ಆಗಿ ಮ್ಯಾಲಿಂದ ಮ್ಯಾಲ ಹೊಳೀಗಿ ಜಳಕಕ್ಕ ಕರಕಂಡ್ಹೋಗಿ ಮಜಾ ಮಾಡುತ್ತಿದ್ದ.

ಗೀತಾ : ಹೂ ಪೂರಾ ತಿಳೀತೀಗ. ಈಗ ಕರಕೊಂಡ ಹೋಗತಾನಿಲ್ಲೊ?

ನಾಣಿ : ಆ ಮ್ಯಾಲ ಮುಲ್ಕಿ ಪರೀಕ್ಷೆ ಆಗಿ ಅಗಲಿದ ಮ್ಯಾಲ ಅವಾ ನಾನು ಕೂಡೇ ಇಲ್ಲ.

ಗೀತಾ : ಇಲ್ಲೇ ಪಕ್ಕದ ಮನ್ಯಾಗ ಇದ್ದಾನಂತೀ ಕೂಡಿಲ್ಲಾ?

ನಾಣಿ : ಆ ರಂಡೇರ ಅವನ್ನ ಬಿಡಾಣಿಲ್ಲ ಹುಚ್ಚಿ. ನೋಡಿದಿಲ್ಲೋ, ಧೋ ಧೋ ಜೋಗ ದಬದಬಿ ಹಾಂಗ ಬೋರ್ಯಾಡತಾರ

ಗೀತಾ : ಅವ ನಿನ್ನ ಗೆಣ್ಯಾ ಹೌದಲ್ಲ?

ಭೀಮ್ಯಾ : ಗೆಣ್ಯಾರ ಅಂದರ ಲಂಗೋಟೀ ಗಣೀತನಾನ್ರಿ ಮತ್ತ, ನಾ ಸ್ವಥಾ ನೋಡಿದೇ ನಲ್ಲಾ: ಒಂದರಾಗ ಯಾಡ್ಡಿದ್ಧಾಂಗ ಇದ್ದರ ಬಿಡ್ರಿ. ಇಬ್ಬರೂ ಒಂದs ಬಾಯಾಲೆ ಉಂಡ ಒಂದs ಮುಖಳೀಲೇ ಹೇತವರಂದರ.

ಗೀತಾ : ನೀನೂ ಇವರ ಜೋಡಿ ಈಸ್ಯಾಡ್ಯಾಕ ಹೋಗತಿದ್ದಿ?

ಭೀಮ್ಯಾ : ಯಾವಾಗರ ಒಮ್ಮೊಮ್ಮಿ. ಇಬ್ಬರೂ ಅಗಲಿದ ಮ್ಯಾಲ ನನಗ ಈಸ ಕಲಿಸಬೇಕಂತ ನಮ್ಮ ಸಾಹೇಬರ ರಗಡ ಖಟಪಟಿ ಮಾಡದರ ಖರೆ, ನನ್ನ ಕೈಯ ಹೊಳ್ಳಲಿಲ್ಲಿ, ಒಮ್ಮೊಮ್ಮೆ ಮರತ ನನಗs ನಾನೂ ಅಂತ ಕರೀತಾರ್ರಿ. ನಾಣಿ : ಆ ದಡ್ಡ ನನಮಗನ ಮಾತೇನ ಕೇಳ್ತೀನ?

ಗೀತಾ : ತಾತ್ಪರ್ಯ, ನಾ ನಿನಗ ನಾನೂ ಅನ್ನಬೇಕ ಹೌದಲ್ಲೊ?

ನಾಣಿ : ಹೂಂ ಹೂಂ.

ಗೀತಾ : ನನಗ ನೀ ಸುಧಾ ಅಂತಿ.

ನಾಣಿ : ಹೂ ಹೂ.

ಗೀತಾ : ಆ ಮ್ಯಾಲ ನೀ ನನಗ ನಾನೂ ಅಂತೀ.

ನಾಣಿ : ಹೌದ್ಹೌದ. ಹೌದಂದೇನ ಹುಡುಗೀ.

ಗೀತಾ : ಆ ಮ್ಯಾಲ ನಾನೂ ನಾನು, ನೀನು ನಾನು.

ನಾಣಿ : ಆಹಾ ಸುಧಾ ಸುಧಾ.
*(ಗೆಲುವಿನಿಂದ ಎದೆ ಮುಟ್ಟಿಕೊಂಡು ರಂಗದ ತುಂಬ ಓಡಿಯಾಡಿ ಭೀಮ್ಯಾನ ಹತ್ತಿರ ಬಂದು)*

ಭೀಮ್ಯಾ ಭೀಮ್ಯಾ ಕೇಳಿದೇನೋ ಮಗನ? ನಾ ಹೇಳಿದ್ದಿಲ್ಲಾ, ಈಕಿ ಒಳಗ ಕನಿಷ್ಠ ಯೋಳ ಕೊಪ್ಪರಗಿ ಹೊನ್ನ ತುಂಬೇತಿ ಹೆಡಿ ಆಡಿಸಿ ಅದನ್ನ ಕಾಯತಾಳಂತ.

ಭೀಮ್ಯಾ : ಸಾಬರ, ಕೊಪ್ಪರಿಗಿ ಮುಚ್ಚಳಾ ಸಾವಕಾಶ ತಗೀರಿ, ಆ ಬಿಕನೇಸಿ ಪೋಲೀಸೊಬ್ಬ ಇಲ್ಲೆ ನಿಂತಾನ.

ನಾಣಿ : ಹೇಳು ಸುಧಾ, ನಾನೂ ನಾನು. ನೀನೂ ನಾನು.

ಆ ಮ್ಯಾಲ–

ಗೀತಾ : ನಾಣೀ ಮುಂಬೈದಾಗ ನಾನೂ ಅಂತ ಯಾರಿಗಂತಾರ ಗೊತ್ತದನ?

ನಾಣಿ : ಯಾರಿಗಿ?

ಗೀತಾ : ಪೌನೇ ಆಠಗ.

ನಾಣಿ : ಏನಂದಿ?

ಗೀತಾ : ಅವ ಏನ ಮಾಡತಾನ ಗೊತ್ತಾ?

ಭೀಮ್ಯಾ : ಅವ್ವಗೋಳ ಏನ ಮಾಡತಾನ್ರಿ?

ಗೀತಾ : ಪಡ್ಲಿಗಿ ಹೊತ್ತಕೊಂಡ ಜೋಗಾಡತಾನ.

ಭೀಮ್ಯಾ : ಅಡ! ಯಾಕೋ ಜೋಗವ್ವ ಇನ್ನೂಬರ್ಲಿಲ್ಲಲ್ಲ.

ನಾಣಿ : ನಾ ಹೇಳಿದ್ದ ಅದಲ್ಲಂದರ.

ಗೀತಾ : ಇನ್ನೇನ ಹೇಳಿದಿ ಹೇಳು?

ನಾಣಿ : ಹೆಂಗೂ ಹೊರಗ ನಿನ್ನ ಗಂಡ ನಿಂತಾನ ಅಲ್ಲೀತನಕ ನಿನ್ನ ಕಣ್ಣೀರ ಒರಸಲೇನಂತ.

ಗೀತಾ : *(ದುಃಖದಿಂದ)*

ಏನ ತಿಳಿದ ಎಲ್ಲಿಗೆ ಬಂದೆ? ಕಾಲೇಜಿನಾಗಿದ್ದಾಗ ಗೀತಾ ಗೀತಾ ಅಂತ ಹಲಬಿದಿ. ಆದರ ನಿನ್ನs ಮದಿವ್ಯಾಗಬೇಕಂತ ಡಬಲ್ ಗಾದೀ ದರಾ ಕೇಳಿ ಬಂದಿದ್ದೆ. ನನ್ನ ಯಜಮಾನರನ್ನ ಮದಿವ್ಯಾಗೋವಾಗ ಒಲ್ಲೆ ಅಂತ ಹಟ ಹಿಡಿದೆ. ಅತ್ತೆ ಕರದೆ, ಮಾಡಿಕೊಳ್ಳು ಚಲುವ ಬಂದು, ಒಂದು ಮಾತು ಕೇಳಲಿ ಅಂತ ತಾಯಿ ಹೇಳಿತು. ನೀ ಎಲ್ಲಿ ಸಿಗತಿ? ಆಗೋದೆಲ್ಲಾ ಚೆಲೋದಕ ಆಗತದಂತ, ಮತ್ತ ಆಕೀನ ನೋವಿಗಷ್ಟ ಮದ್ವಾಕಿ ಕಟ್ಟಿದಳು. ಹೋಯಿತಂತ ಕೈ ತೊಳಕೊಂಡರ ಮತ್ತ ಉರಕೋತ ಬಂದಿ. ಹೋದ ಬಂದಲ್ಲೆಲ್ಲಾ ಬೆನ್ನ ಹತ್ತಿ ಕದ್ದ ಕದ್ದ ಕಾಗದಾ ಕೊಟ್ಟ ಹೋದಿ. ನೋವ ಹೆಚ್ಚಾಗಿ ಹಾಸಿಗೆಲ್ಲಾ ಹೊರಳ್ಯಾಡಿ, ಗಾದಿ ಸಾಲಾಣಿಲ್ಲಾ ಇನ್ನೊಂದ ತರಸರೀ ಅಂತ ಗಂಡಗ ತಕರಾರು ಕೊಟ್ಟೆ. ನಿನ್ನ ಹೆಸರಿನಿಂದ ಕಾಡಿಗೀ ಹಚ್ಚಿದ್ದೇನು, ತುರಬಾ ಬಿಚ್ಚಿ ಬಿಚ್ಚಿ ಕಟ್ಟಿದ್ದೇನು. ಉಬ್ಬುಬ್ಬಿ ಎದೀ ಅಳತಿ ಮಾಡಿಕೊಂಡದ್ದೇನು! ಕುದರಿ ಹತ್ತೋ ಮದುಮಗಳ್ಹಾಂಗ ಹೂ ಮುಡದದ್ದೇನು, ಒಂದು ದಿನ ನೀರಡಕಿ ಜಾಸ್ತಿ ಆಗಿ ಧೈರ್ಯ ಮಾಡಿ ಸುಳ್ಳ ಹೇಳಿ ನಿನ್ನ ಅದ್ದೂರಿ ನೋಡಾಕ ಬಂದ್ರ– ನೀ ಬಿಸಲಗುದುರಿ:

*(ಕಣ್ಣ ಹನಿ ಒರಿಸಿಕೊಂಡು)* ನಾ ಹೋಗಬೇಕಿಗ *(ಏಳುವಳು)*

ಭೀಮ್ಯಾ : ಸಾಹೇಬರ, ಇನ್ನೂ ಆ ಪೋಲೀಸ ಹಾಂಗ ನಿಂತಾನ್ರಿ.

ಗೀತಾ : ಎಚ್ಚರಿದ್ದಾರ ಅನ್ನೊದಕ್ಕೆ ಸಾಕಷ್ಟಾಯ್ತು.

ನಾಣಿ : ಹೋಗೋದ ಹೋಗ್ತಿ. ಕಡೀಸಲ ನನ್ನ ಕಡೆ ನೋಡಬಾರದ ಸುಧಾ

ಗೀತಾ : ಅದೆಲ್ಲಾ ನಂಗೊತ್ತಿಲ್ಲ.

ನಾಣಿ : ದಯಮಾಡಿ ಸುಧಾ, ಒಂದ ನಿಮಿಷ, ಸ್ವಲ್ಪ ಕಣ್ಣ ತೆರೆದ ಈ ಕಡೆ ನೋಡು.
*(ಹೋಗಿ ಅವಳ ಭುಜ ಹಿಡಿದು ಕುರ್ಚಿಯಲ್ಲಿ ಕೂಡಿಸಿ ಅವಳ ಮುಖವನ್ನು ತನ್ನ ಕಣ್ಣೆದುರಿಗೆ ತರುತ್ತಾನೆ)*

ಗೀತಾ : ಅಬ್ಬಬ್ಬ, ಇದ್ದುಂಬಾ ಆಯ್ತು.

ನಾಣಿ : ದಯಮಾಡಿ ಸುಧಾ.

ಗೀತಾ : ಕಣ್ಣಗ ಬೆರಳ ಚುಚ್ಚೀತಂದರ?

ನಾಣಿ : ಸುಧಾ ಕೈ ಮುಗೀತೇನೆ, ಕಣ್ಣತಗೀ.

ಗೀತಾ : ಇನ್ನೇನ ದುರಗವ್ವನಾಂಗ ಕಣ್ಣ ಕಿಸೀಬೇಕೇನ?

ನಾಣಿ : ನನ್ನ ಕಡೆ.

ಗೀತಾ : ಮತ್ತ ಯಾರ ಕಡೆ ನೋಡ್ತಾ ಇದ್ದೇನೀಗ?

ನಾಣಿ : ರೆಪ್ಪಿ ಬಡೀಬ್ಯಾಡ.

ಗೀತಾ : ರೆಪ್ಪಿ ಬಡೀದ ಹೆಂಗಿರೋದಿನ್ನ?

ನಾಣಿ : ಒಂದು ನಿಮಿಷ.

ಗೀತಾ : ಕಣ್ಣ ಕೀಳಬೇಕಂತೀಯೇನ?

ನಾಣಿ : ಕಾಲ ಬೀಳತೇನ ಸುಧಾ.

ಭೀಮ್ಯಾ : ಸಾಹೇಬರ ಚೆನ್ನಾ ಬೆಳ್ಳೀ ನಿಮಗ ಎತ್ತಲಿಕ್ಕೆ ಆಗದಿದ್ದರ ಕರೀರಿ ಇಲ್ಲೆ ಕುಂತಿರತೇನ.

ಗೀತಾ : ಸಾಕಾತ್ತನಗ.
*(ಏಳುವಳು. ನಾಣಿ ಅಂಗಲಾಚಿ ಅವಳ ಕಾಲು ಹಿಡಿಯುತ್ತಲೂ ಗೀತಾ ಬೇಸತ್ತು ಕೂತು ಅವನು ಹೇಳಿದಂತೆ ಅವನು ಮುಖಕ್ಕೆ ಮುಖ ತಂದು, ಕಣ್ಣು ಕಿಸಿದು ನೋಡುತ್ತಿರುವಂತೆ ಧ್ವನಿಗಳು ನರಳಲಾರಂಭಿಸುತ್ತವೆ. ಗೀತಾ ಹೆದರಿ ಹಿಂದೆ ಸರಿಯಬೇಕೆನ್ನುವಷ್ಟರಲ್ಲಿ ಅವಳ ಮುಖವನ್ನ ಗಪ್ಪನೆ ಎರಡೂ ಕೈಯಿಂದ ಹಿಡಿದುಕೊಂಡು ಜಗ್ಗಿ ನೋಡಲಾರಂಭಿಸುವನು. ನೋಡನೋಡುತ್ತಿರುವಂತೆ ಧ್ವನಿಗಳು ಕರುಚಲಾರಂಭಿಸುತ್ತವೆ. ಬರಬರತ್ತ ನಾಣಿಯ ಮುಖ ಗಂಭೀರವಾಗಿ ಕ್ರೂರವಾಗಿ ಅವಳ ಮುಖವನ್ನು ದೇಹದಿಂದ ಕೀಳುವಂತೆ ಎಳೆಯತೊಡಗುತ್ತಾನೆ. ಗೀತಾ ಕುರ್ಚಿಯಿಂದ ಕೆಳಬಿದ್ದು ಅಯ್ಯೋ ಅಯ್ಯೋ ಎಂದು ಚೀರಿದಾಗ ಧ್ವನಿಗಳ ಚೀರುವಿಕೆಯೊಂದಿಗೆ ಬೆರೆಯುತ್ತದೆ. ಗೀತಾ ನಿಸ್ಸಹಾಯಕಳಾಗಿ ಕೈ, ಮುಖ ಪರಚಿದರೂ ಕಡೆಗೆ ಅವಳನ್ನು ಬಿಟ್ಟೊಡನೆ ಧ್ವನಿಗಳ ಚೀರುವಿಕೆ ಒಮ್ಮೆಲೆ ಇಲ್ಲವಾಗಿ ಗೀತಾ ನರಳುವದು ಮಾತ್ರ ಕೇಳುತ್ತದೆ. ಅವಳು ಎದ್ದು ಸೀರೇ ಸರಿಪಡಿಸಿಕೊಳ್ಳುತ್ತ)*

ಗೀತಾ : *(ಅಳುತ್ತ ಚೀರುತ್ತ)* ಗಂಡಿಗ್ಯಾ ಭ್ಯಾಡ್ಯಾ. ನನ್ನ ಗಂಡಗ ಹೇಳಿ ಹೆಂಗ ಮಾಡಸ್ತೇನ. ನಿನ್ನ ಚರ್ಮ ಸುಲಿಸಿ ಚಪ್ಪಲಿ ಮಾಡಿಸದಿದ್ದರ ನನ್ನೆಸರ ಗೀತಾ ಅಲ್ಲಂತ ತಿಳೀಯೊ.

ನಾಣೀ : ಶನೀ

ಭೀಮ್ಯಾ : ಓ ಸಾಹೇಬರ.

ನಾಣಿ : ಹೆಣಾ ಹೊತ್ತಹಾಕಬಾ.

ಗೀತಾ : ಹೆಣ್ಣ ಹೆಂಗಸಿನ ಮ್ಯಾಲ ಕೈ ಮಾಡಿ ಭಾಳ ಪುಂಡತನ ಮೆರದೀ ನೀ. ನಿನ್ನ... ನಿನ್ನ... ಎಲ್ಲಿ ಅದಾರವರ?
*(ಹೊರಡುವಳು. ಭೀಮ್ಯಾ ಅಡ್ಡಬಂದು ಅವಳ ಕೈ ಹಿಡಿಯುವನು)*

ಭೀಮ್ಯಾ : ಬಾಯ್ಮುಚ್ಚ ಭೋಸಡೆ.

ಗೀತಾ : *(ಕೊಸರಿಕೊಳ್ಳುತ್ತ)* ಬೋಸಡೆ?

ಭೀಮ್ಯಾ : ರಂಡೆ, ಹಾದರಗಿತ್ತೆ.

ಗೀತಾ : ಎಪ್ವಾ ಎಪ್ಪಾ ಯಾರರೇ ಬಿಡಸಬರ್ಯೋ. ಗಂಡಸಾದರ ಅಪ್ಪಾ ಅಂತೇನು ಹೆಂಗಸಾದರ ಅವ್ವಾ ಅಂತೇನು ಬರ್ರ್ಯೋ.
*(ಚೀರುತ್ತ ಕೈ ಬಿಡಿಸಿಕೊಂಡು ರಂಗದ ತುಂಬ ಓಡಾಡುವಳು. ಹೋದ ಹೋದಲ್ಲೆಲ್ಲ ನಾಣಿ ಇಲ್ಲವೆ ಭೀಮ್ಯಾ ಅವಳಿಗೆ ಅಡ್ಡ ಬಂದು ಬಲೆಯ ಪ್ರಾಣಿಯ ಹಾಗೆ ಅವಳು ಸಂಕಟಪಡುವುದನ್ನು ನೋಡಿ ಸಂತೋಷಪಡುತ್ತಾರೆ. ಆಮೇಲೆ ಅವಳನ್ನು ಹಿಡಿದು ಭೀಮ್ಯಾ ಕೆನ್ನೆಗೆ ಎರಡೇಟು ಬಿಗಿದು)*

ಭೀಮ್ಯಾ : ನೀ ಎಷ್ಟು ಚೀರಿದರೂ ಯಾರೂ ಬರೋದಿಲ್ಲನ್ನೋದ ಖಾತ್ರಿ ಆತಿಲ್ಲ?
*(ಚೀರುತ್ತಿದ್ದರೂ ಅವಳ ಬಾಯಿಗೆ ಬಟ್ಟೆ ಕಟ್ಟಿ ಕೈ ಹಿಂದಕ್ಕೆ ಕಟ್ಟಿ ಕುರ್ಚಿಯಲ್ಲಿ ನೂಕುವರು. ಗೀತಾ ನರಳುತ್ತ ಬುಸುಗುಡತ್ತ ಇರುವಾಗ)*

ಭೀಮ್ಯಾ : ನಾ ನಿನ್ನ ಗಂಡಂತ ತಿಳಕೊ.

ನಾಣಿ : ನಾ ನಿನ್ನ ಅತ್ತೆಂತ ತಿಳಕೊ.
*(ನಾಣಿ ಮುದುಕಿಯರು ಕೂಡ್ರುವಂತೆ ಕೈ ಮೇಲೆ ಕೆನ್ನೆಯನ್ನೂರಿ ಕೂರುವನು. ಇಬ್ಬರೂ ಈಗ ಧ್ವನಿ ಬದಲಿಸಿ ಮಾತನಾಡುತ್ತಾರೆ)*

ಭೀಮಾ : *(ಇಲ್ಲದ ಮೀಸಿ ತಿದ್ದುತ್ತ)*

ಅಲ್ಲವೇ ಹಿಂಗ ಹೋಗಿ ಹಾಂಗ ಬರತೇನಂತ ಆ ನಾನ್ಯಾನ ಬುಡುಕ ಬೀಳಾಕ ಹೋಗಿದ್ದಿ?

ನಾಣಿ : ನನ್ನ ಮಗನs ಆ ಬಿದ್ದಾಡಿ ಮನಿತನಕ ಬಟ್ಟಾ ಹಚ್ಚಿದಳೋ. ನೀ ಹೆಂತಾದೊ ಊರ ಪೋಲೀಸಂತ ಭಾಡ್ಯಾ ಸ್ವಂತ ಮನೀದ ಬಿಟ್ಟ ಊರಗಾರಿಕಿ ಆಗ ಹೋಗೆಲ್ಲಾ ಅಳದ ಸುರೀತಿ.

ಭೀಮ್ಯಾ : ನೀ ಒಮ್ಮೆರೆ ಹಿಂತಾ ಮಾತ ಹೀಗಂತ ಹೇಳಿದಿ?

ನಾಣಿ : ಲಡದೂ, ಮದಿವ್ಯಾದಾಗಿಂದ ನೀ ಎಚ್ಚರೆಲ್ಲಿ ಅದಿ? ಆಕಳಿಸಿಕೋಂತ ಬರತೀ. ನಿದ್ದಿಗಣ್ಣಾಗ ಹೊಂಟೆದ್ದ ಹೋಗತಿ. ಬೆಳೆದ ಗಂಡಸಾಗಿ, ಹೆಂಗಾ, ಏನಾ ಕೇಳಿದಿ? ಈ ಹಲಮಾಲಿ ಹಾ ಅನ್ನದೊರಳಗ ಬೆದೀಗಿ ಬಂದ ಕೋಳಿ- ಯೋಳ ಓಣಿ ಹಾರ್ಯಾಡಿ ಬರತಾಳ. ಮದಿವ್ಯಾಗೋವಾಗ ನನ್ನ ಮಗನ ಎಟ್ಟಂದರೂ ಕಾಲಿಸಿ ಕಟ್ಟಿ ಏರಿದಾಕಿ. ಇದ ನೀ ಹತ್ತೂ ಕುದರಿ ಅಲ್ಲಂದರ ಜೋಡ ಹೆಣಾಲಕ ಮುಳ್ಳಾಗಿ- ಮದಿವ್ಯಾದಿ, ಕಾಲೀಜ ಹುಡುಗೋರೆಲ್ಲಾ ಮಲ್ಲಿಗಿ ಮಾಲೀತಂದ ತಂದ ಹಿಂದ ಹಿತ್ತಲದಾಗ ದೊಡ್ಡ ಅಡೀ ಬಿದ್ದೈತಿ, ಹರೇದ ಹುಡುಗಾಗಿ ಮನೀ ಹೇಂತಿ, ದಿನಾ ನಿನಗ ಕೈ ಕೊಡತಾಳೋ ಕಾಲ್ಕೊಡ್ತಾಳೋ ತಳೀಬ್ಯಾಡ?

ಭೀಮ್ಯಾ : ಹೌಂದೇನ?

ನಾಣಿ : ಆಕಿನೇನ ಕೇಳ್ತಿ? ಹೇಳವಾಕಿ ನಾ ಮನಿಶಾಳಲ್ಲಾ? ಹೆಣಾಲ ಹಿಡಕೊಂಡ ಮಾವಾ ಅಂದರ ಸಾಕ್ಷಿನಗ- ಈ ಹುಚಮಾವ ಹಾರಲಿ ಗಗನಕೆ ನಮ್ಮ ಧ್ವಜಾ ಅಂತ ಬಾಯ್ತುಗೀತಿ.

ಭೀಮ್ಯಾ : ಹೂ, ಬಂದ ಮಾಡ ನಿನ್ನ ಬೀಸೂಕಲ್ಲ. ಈಗ ನನಗೇನ ಮಾಡಂದಿ?

ನಾಣಿ : ಅದನೂ ನಾನ ಹೇಳಬೇಕನ? ಮೋತಿಗಿ ಮಸೀ ಹುಚ್ಚು. ನೆಲಬಾವರದಾಗ ಚೆಲ್ಲಿ ಬಾ. ಬುದ್ಧಿ ಬರಲಿ.

ಭೀಮ್ಯಾ : ನೆಲಬಾವರದಾಗ?

ನಾಣಿ : ಮತ್ತೆಲ್ಲಿ ಹೋಗಿ ಮುನಸಿ ಪ್ಯಾಟ್ಯಾಗ ಇಡು. ಹುಡಗೋರದಾಯ್ತು ಇನ್ನು ಊರ ಗಂಡಸರದಷ್ಟ ಮಂಡಾಗಲಿ. ಪಕ್ಕಾ ಕಿತ್ತ ಮಸಾಲೀ ಹಾಕಿ ಸಿವಿಮಾಡಿ ತಿನ್ನೋದ ಬಿಟ್ಟೇದಿ. ನೀ ತಗೋ, ನೀ ತಗೋ ಅಂತ ಊರ ತುಂಬ ತಿರಗತಿ. ನಿನ್ನ ಕೈಲಿ ಆಗದಿದ್ದರ ತತಾ ಇಲ್ಲಿ.
*(ಎದ್ದು ಗೀತಾಳನ್ನು ಹೊತ್ತುಕೊಂಡು ರಂಗದ ಹಿಂಭಾಗಕ್ಕೆ ಕತ್ತಲಿರುವಲ್ಲಿಗೆ ಸ್ತ್ರೀಯರ ನೆರಳುಗಳ ಚಲನವಲನವಿರುವಲ್ಲಿಗೆ ಒಯ್ಯುತ್ತಾನೆ. ಅವಳೂ ನೆರಳಾಗುತ್ತಾಳೆ. ಇಳಿಸಿ ಅಲ್ಲಿಯೇ ಇದ್ದ ಕುರ್ಚಿಯಲ್ಲಿ ಕೂತಾಗ ನೆರಳುಗಳೆಲ್ಲ ಅವನ ಸುತ್ತ ಹೊಕ್ಕಳಿನ ಮೇಲೆ ತಮ್ಮ ತಲೆಗೂದಲನ್ನು ಆಡಿಸತೊಡಗುತ್ತವೆ. ಬಹಳ ಸಣ್ಣಾಗಿ ನರಳುವಿಕೆಯೂ ಕೇಳಿಸುತ್ತದೆ. ಇತ್ತ ಬೆಳಕಿನ ಭಾಗದಲ್ಲಿ ಭೀಮ್ಯಾ ಸ್ಟೂಲಿನ ಮೇಲೆ ಮತ್ತೆ ಕೈ ಕಟ್ಟಿ ಕುಳಿತುಕೊಳ್ಳುತ್ತಿರುವಂತೆ ಬಾಗಿಲ ಕಡೆಯಿಂದ ರಂಗದ ಮೇಲೆ ಬಂಡಾರ ಹಾರುತ್ತದೆ. ಭೀಮ್ಯಾ ಹಾಗೆ ನೋಡುತ್ತ ಕುಳಿತಾಗ ಇನ್ನೊಮ್ಮೆ ಹಾರುತ್ತದೆ. ಎದ್ದು ಬಂದು ಬಾಗಿಲಲ್ಲಿ ನೋಡುತ್ತಿರುವಂತೆ ಇನ್ನೊಮ್ಮೆ ಬಂಡಾರ ಹಾರಿ, "ಯಾಕುಂದ ಜೋಗಬಾ" ಎಂದು ಪಡ್ಲಿಗಿ ಹೊತ್ತ, ಕೈಯಲ್ಲಿ ದೀವಟಿಗೆ ಹಿಡಿದ ಕೊರಳ ಬಂಡಾರ ಚೀಲದ ಜೋಗತಿ ಹಾಜರಾಗುತ್ತಾಳೆ. ಭೀಮ್ಯಾ "ಬಾರವಾ ಜೋಗವ್ವಾ ಎಷ್ಟ ಹಾದೀ ಕಾಯಬೇಕ, ಬಗತರನ ಮರೀಬ್ಯಾಡ್ವಾ ಅಂದ್ನಿ" ಎಂದು ಹೇಳುತ್ತ ಅವಳ ಕೈಯ ದೀವಟಿಗೆ ಇಸಿದುಕೊಂಡು ಒಂದು ಮೂಲಿಗೆ ಚುಚ್ಚುತ್ತಾನೆ. ಅಷ್ಟರಲ್ಲಿ ಜೋಗತಿ ಪಡ್ಲಿಗಿಯನ್ನು ಸ್ಟೂಲಿನ ಮೇಲಿಟ್ಟು ನಿವಳ ಒಯ್ಯಾರ ಮಾಡುತ್ತ ನಿರಿಗೆ ಹೊಡೆದು ಕೂಡ್ರುತ್ತಾಳೆ. ಭೀಮ್ಯಾ ದೇವರಿಗೆ ನಮಸ್ಕರಿಸಿ ಜೋಗತಿಯ ಅನತಿ ದೂರದಲ್ಲಿ ಕೂಡ್ರುತ್ತ)*

ಭೀಮ್ಯಾ : ಭಗತರನ್ನ ಮರೀಬ್ಯಾಡವಾ ಅಂದ್ನಿ.

ಜೋಗತಿ : *(ಉಟ್ಟರದಲ್ಲಿಯ ಸಣ್ಣ ಅತ್ತರೆಣ್ಣೆ ಬಾಟ್ಲಿ ತೆಗೆದು ಮೈಗೆ ಹಚ್ಚಿಕೊಳ್ಳುತ್ತ)* ಬೇಬರಿಸಿ ಇದೇನ ಪ್ಯಾಟಿ ಅವ್ವಾ ಅನ್ಯಾಕ?

ಭೀಮ್ಯಾ : ಎಲೀ ಇದರ.

ಜೋಗತಿ : ಅಯ್ಯ ನೋಡಿ ಕಣ್ಣ ಕಿಸ್ಯಾಕ ಕರಕೊಂಬಂದೇನ?

ಭೀಮ್ಯಾ : ಛೇ ಹೋಗೊ ನಿನ, ನಿಂದೂ ಘನ ಕೆಟ್ಟ ದರಾನ.

ಜೋಗತಿ : ಗಂಡಸ ತೂಗಿ ಮಾತಾಡ. ಮಲಗಿ ಎದ್ದ ಮ್ಯಾಲ ಎಂಟ ದಿನಾ ಮೈ ನಾರಿದರ ರೊಕ್ಕ ಕೊಡ.

ಭೀಮ್ಯಾ : ಕೊಳೆತ?

ಜೋಗತಿ : ಯಾಕಲಾ ಲಡುದು? ನನ್ನ ಚಪ್ಪಲಿ ಬಟ್ಲಾಗ ಎದ್ದೆದ್ದಿ ದೊಡ್ಡ ದೊಡ್ಡ ಮಂದಿ ಸರೇ ಕುಡೀತಾರೂ. ಕುರಸಾಲ್ಯಾ ಬಂದ ಕೊಳತ ನಾರತತಿ ಅಂತಿ.

ಭೀಮ್ಯಾ : ಇದ ಒಳೆ ಹುದಲಾ ಬಿತ್ತಲೆ.

ಜೋಗತಿ : ಅದಕ್ಕ ಹಿರೇರ ಹೇಳತಾರ: ಕಿಸಗಣ್ಣಲೆ ಹೊಳಿ ಹಾರಬಾರದಂತ.

ಭೀಮ್ಯಾ : *(ಚಪ್ಪನೆ ನೆಲ ಬಡಿದು)*

ಹಾ ನನಗೀಗ ನೆನಪಾತ ನೋಡ. ನಾ ಮರಿವಿನಾವನ್ನೋದ.

ಜೋಗತಿ : ಏನಲಾ ಮರತಿದ್ದಿ?

ಭೀಮ್ಯಾ : ನಮ್ಮ ಸಾಹೇಬರು ಜಳಕಾ ಮಾಡೂದ ಬಿಟ್ಟ ಭಾಳ ದಿನಾ ಆತ.

ಜೋಗತಿ : ನಡುವ ಸಾಬಂದ್ಯಾಕ ನೆನಪಾತ?

ಭೀಮ್ಯಾ : ಅಡ, ಅದನೂ ಹೇಳಲಿಲ್ಲಾ ನಿನಗ? ಧೌಳಕ್ಕೆ, ಹೂ ಅಂದೇನಂದರ ಉಸರ ತಗೋಳಾಕ ಬಿಡುವೊಲ್ಲಿ. ಇನ್ನ ಸಾಬರ ಕತಿ ಏನ್ಹೇಳ್ಲಿ?

ಜೋಗತಿ : ಸಾಬರ ಕತೀ ಹೇಳಾಕ ಕರದಿ?

ಭೀಮ್ಯಾ : ಮತ್ತ ಕುದರಿ ಏರಿದಿ ಹೌಂದಲ್ಲ? ನೀ ಇಂದ ಹಸೀ ಖಾರಾಗೀರಾ ತಿಂದಬಂದೀ ಏನ? ಕೇಳಿಲ್ಲೆ. ಇಂದ ನಾ ಅಲ್ಲ. ನಮ್ಮ ಸಾಹೇಬರ ಪೂಜಿ ಮಾಡತಾರ.

ಜೋಗತಿ : ಅಯ್ಯ ಭಾಡಕೌ ಮೊದಲ ಯಾಕ್ಹೇಳಲಿಲ್ಲ? ಅವ ಬಂದಮ್ಯಾಲ ನಾರೂ ಎಣ್ಣಿ ಹಚ್ಚಕೋತಿದ್ನಿ.

ಭೀಮ್ಯಾ : ಎಂಟೆಂಟ ದಿನಾ ಹಾಂಗ ನಾರತತಿ ಅಂತಿ.

ಜೋಗತಿ : ಹಾಂಗತ ಅದಕೇನ ಎಳೆಹೊತ್ತಾ ಇಲ್ಲಾ?

ಭೀಮ್ಯಾ : ಬಾಳ ತುಟ್ಟಿದ ಕಾಣತತಿ.

ಜೋಗತಿ : ನಾತ ಬತ್ತು?

ಭೀಮ್ಯಾ : ಗೊಮ್ಮಂತ ಗೊಮಾಡಸಾಕ ಹತ್ತೇತಿ, ಒಂದಳತಿ
*(ಮುಂಗೈ ಒಡ್ಡಿ)*

ನಂಗಟ ಹಚ್ಚ ನೋಡೋಣ.

ಜೋಗತಿ : ರೊಕ್ಕ ಬಿದ್ದಾವ.

ಭೀಮ್ಯಾ : ನಮ್ಮ ಸಾಹೇಬರ ಸಂಸ್ಥಾನಕ ಬಡತಾನೇನ ತತಾರ.

ಜೋಗತಿ : *(ಸ್ವಲ್ಪವೇ ಮುಂಗೈಗೆ ಹಚ್ಚಿ)*

ಹೇಳ್ನಿಮ್ಮ ಸಾಬನ ಕತೀ ಏನ?

ಭೀಮ್ಯಾ : *(ಮೂಸಿ)*

ಇದಕ್ಕ ಕುರುವ ಸಾಯತಾವು?

ಜೋಗತಿ : ಹೆಂಗ ಹುರದ ಹುರದ ಬೀಳತಾವ.

ಭೀಮ್ಯಾ : ಇದೊಂದ ಪಾಡಾತ ಬಿಡತ್ತ. ನಮ್ಮ ಸಾಹೇಬರ ಹೊಕ್ಕಳ ಮ್ಯಾಲೊಂದ ಕುರುವಾಗೇತಿ. ಎಂಥಾ ಸಭಾದಾಗ ಕುಂತರೂ, ಪರಾ ಪರಾ ಪರಾ ಅದರಸುತ್ತ ತುರಿಸಿಕೊಂಡs ತುರಿಸಿಕೋತಾರ.

ಜೋಗತಿ : ಈ ಎಣ್ಣಿಗಿ ಹುಚ್ಚ ನಾಯಿ ಸಾಯ್ತಾವು, ಇನ್ನ ಕುರುವಿನ ಸುದ್ದಿ ಏನ್ಹೇಳ್ತೀಯೋ?

ಭೀಮ್ಯಾ : ಹುಚ್ಚ ನಾಯಿ?

ಜೋಗತಿ : ಹೂ ಹೂ, ಹುಚ್ಚನಾಯಿ. ಬೆಳಗಾಂವಿ ಸಾಬರ ನಾಯಿಗಿ ಹುಚ್ಚ ಹತ್ತಿ ಕೊಂಡ ಬಿಡರೀ ಆ ನಾಯಿ ಅಂದರ ಅದನ್ನ ತೆಕ್ಕಿಹಾದ ಅಳಾಕ ಸುರುಮಾಡತಿದ್ದರು. ಮೊದಲs ಹುಚ್ಚ ನಾಯಿ ಕೇಳೀತು? ಅವರ್ಹೇಂತೀನ ಕಡದು ಆಕಿ ನಾಯಿ ಹಾಂಗ ಒದರ್ಯಾಡಿದರೂ ಸಾಬರು ನಾಯಿ ಬಿಡುವೊಲ್ಲರೇನ ಮಾಡ್ತಿ? ಕಡೀಕಂದ್ರ ಅವರ ಕಳಬಳ್ಳಿ ನನ್ನ ಹಂತ್ಯಾಕ ಬಂದರು. ಎಣ್ಣೀ ಕೊಟ್ನಿ. ಹೀಂಗ ಹಚ್ಚೂದರಾಗ ಹಂಗ ಸತ್ತಹೋತ.

ಭೀಮ್ಯಾ : ಅಡಡಡಡಡ!

ಜೋಗತಿ : ಕರೀ ನಿನ್ನ ಕುರುವಿನ ಸಾಬನ, ಯಾ ಕಚೇರಿಯಾಗ ಬರಕೋತಾನ ಅವ?

ಭೀಮ್ಯಾ : ಕಚೇರ್ಯಾಗ ಬರಕೋಳಾಕ ಅವರಿಗೇನ ಕಡಿಮ್ಯಾಗೇತೆ? ಅವರ ಬಿಟ್ಟ ಬೂಟ ಮ್ಯಾರಿ, ಎಷ್ಟ ಮಂದಿ ದೊಡ್ಡ ದೊಡ್ಡ ಬಂಗಲೆ ಕಟ್ಟಿಸಿದಾರ. ಯಾರ ಮುಂದ ಹೇಳಬ್ಯಾಡ. ನೀ ನನಗಟ ಎಣ್ಣಿ ಹಚ್ಚೀದಿ ಅಂತ ಹೇಳತೇನು- ನಮ್ಮ ಸಾಹೇಬರ ಮನ್ಯಾಗ ಯೋಳಕೊಪ್ಪರಗಿ ಚಿನ್ನ ಐತಿ.

ಜೋಗತಿ : ಹಾ.

ಭೀಮ್ಯಾ : ಹಾಂಗ ಬಾಯ್ತೆಗೀಬ್ಯಾಡ, ನೊಣಾ ಭಾಳಿಲ್ಲಿ.

ಜೋಗತಿ : ಎಲ್ಲಿ ಸಿಕ್ಕಿತ, ಹೆಂಗ ಸಿಕ್ಕಿತ, ಯಾವಾಗ ಸಿಕ್ಕಿತ?

ಭೀಮ್ಯಾ : ಒಂದಿನ

ಜೋಗತಿ : ಹೂಂ.

ಭೀಮ್ಯಾ : ಆಯ್ತಾರಮಾಸಿ.

ಜೋಗತಿ : ಹೂಂ.

ಭೀಮ್ಯಾ : ಸೋಮಳಿ, ಭರ್‌ಸರ್‍ವತ್ತಿನ್ಯಾಗ ಯಾರೋ ಬಂದ ಬರತೇನ ಬರತೇನ ಅಂಧಂಗಾತ.

ಜೋಗತಿ : ಅವ್ವ ನನ್ನ ಶಿವನ!

ಭೀಮ್ಯಾ : ನನ್ನ ಧೋತರ ತೋಯ್ತು. ಎಷ್ಟಂದರೂ ನಮ್ಮ ಸಾಬರ ಧೈರ್ಯ- ಎದ್ದರು.

'ಯಾವಾಕೆ ಹುಚ್ಚ ಬೋಸಡೆ?' ಅಂದರು.

'ಹುಚ್ಚೆಲ್ಲಾ, ಭೋಸಡೆಲ್ಲಾ

ಭಾಗ್ಯ ಬಂದು ಬಾಗಿಲದಾಗ ನಿಂತೇವ

ಕದಾ ತಗಿಯೋ ಮಾವಾ,'

ಅಂತಂದೂ, ಗೆಜ್ಜಿ ಸಪ್ಪಳಾ ಮಾಡಾಕ ಹತ್ತಿದರು! ಸಾಹೇಬರ್‍ನ ಕೇಳಬೇಕ?

'ಹೆಸರಿಲ್ಲಾ ದಶಿಯಿಲ್ಲಾ

ಹಾದರಗಿತ್ತೇರಿಗೆಲ್ಲಾ ಕದಾ ತಗ್ಯಾಕ

ಇದೇನ ಧರಮಸಾಲೆಲ್ಲಾ, ಹೊಂಟ್ಹೋಗ್ರಿ' ಅಂದರು.

'ನೀ ಕರದ ಹೆಸರಿಗೆ ಓ ಅಂದ

ಹೇಳಿಧಾಂಗ ಕುಣೀತೇವ

ಕದಾ ತೆಗಿಯೋ ಕರಚೆಲುವಾ' ಅಂದರು.

ನಮ್ಮ ಸಾಹೇಬರ ಯೋಳಬಾರಿನ ಪಿಸ್ತೂಲ ತಗೊಂಡ್ರು, ನನಗ ನಡಕ ಹುಟ್ಟಿತು!

ಜೋಗತಿ : ಅಯ್ಯ ನಿಂದೇನ ಮಾಡ್ತಿ ಮುಂದ ಹೇಳ.

ಭೀಮ್ಯಾ : ಬಾಗಿಲಾ ತಗದರು!

ಜೋಗತಿ : ಹೂಂ.

## (೩)

ಭೀಮ್ಯಾ : ತಗ್ಯಾನ ತಗದರ ಜೋಗವ್ವಾ ನಿನ್ನ ಮುಂದ ಹೇಳತೇನು: ಒಂದು ಬಿಟ್ಟ ಯೋಳ ಮಂದಿ ಹೆಂಗಸರು, ಹೆಂತಾ ಚೆಲೀವೇರಂದರ ಹಂತಾ ಚಲವೇರು, ಥಳಾ ಥಳಾ ಬ್ಯಾಂಗಡಿ ಹಂಗ ಹೊಳೀತಿದ್ದರ ಹಂಗS. ಕಾಲಾಗ ಬಂಗಾರ ಗೆಜ್ಜೇನ, ಉಟ್ಟ ಪೀತಾಂಬರೇನ, ತೊಟ್ಟ ದಾಗೀನೇನು! ಎಲ್ಲಾರ ಕಣ್ಣಾಗ ಎಡ್ಡೆಡ್ಡ ಬಂಗಾರ ಕೊಡಾ. ಝಣ ಝಣ್ಣಂತ ಬಂದವರ ಸಾಬರ ಸುತ್ತ

ಕುಣ್ಯಾಕ ಹತ್ತಿದರು. ಧೈರ್ಯ ಮಾಡಿ, ಸಾಹೇಬರು ಒಬ್ಬೊಬ್ಬಾಕೀನ ಮುರದ ತೊಡ್ಯಾಗ ಹಿಡಕೊಂಡ ಕೊಡದ ಕಂಟದಾಗ ಹಣಕಿ ನೋಡಿದರ ನೆರಳ ಕಾಣವೊಲ್ಲು! ಘಾತಾ ಮಾಡಿದರಂದವರ, ಪಿಸ್ತೂಲ ಹಿಡಕೊಂಡ ಹೊರ ಬೀಳ್ತೀರೋ ಇಲ್ಲೋ? ಅಂದರು. ಹೊರಗ ಹಾಕಬ್ಯಾಡೋ ನಿನ್ನ ಕುರುವ ತುರಿಸಿಕೋತ ಇಲ್ಲೆ ಇರ್ತೇವಂದರು. ಸಾಹೇಬರ ಎಚ್ಚರಿದ್ದಾಗೆಲ್ಲಾ ಅವರ ಕೈ ಉಗರಾಗಿ, ಕುರುವಿನ ಮ್ಯಾಲ ಕೈಯಾಡಸ್ತಾರ. ಅವರು ಕೈಯಾಡಿಸುವಾಗಲೆಲ್ಲಾ ಇವರು ಎಚ್ಚರಿರತಾರ. ಇಲ್ಲೆ ಅದಾರ.

ಜೋಗತಿ : ಅವ್ ಅವ್ ಅವ್ ಇನ್ನೇನ ಮಾಡಲೆ?

ಭೀಮ್ಯಾ : ಹೂವಾ ಕಾಯೀ ತರಾಕ ಹೋಗ್ಯಾರ.

ಜೋಗತಿ : ಅವ ಹೆಂತಾವಿದ್ದಾನ ನಿನ್ನ ಸಾಬ?

ಭೀಮ್ಯಾ : ಬಟ್ಟಮುಖಾ, ಮುಗಳನಗಿ ಬ್ಯಾರಿ ಕಲತ್ತಾನು. ತಾಜಾ ಹರೆ ತುಂಬಿ ತುಂಬಿ ಯೋಳ ಹೊರಸಿನ ನುಲೀಗಿ ನೆಲಿ ಸಿಗಾಣಿಲ್ಲ.

ಜೋಗತಿ : ಅವ್ವ ಅವ ಹೆಂಗ ಸಿಕ್ಕಾನ?

ಭೀಮ್ಯಾ : ಎಲೀ ಇದರ ನಿಂದೂ ಘನ ಕೆಟ್ಟ ಸೇಲಿನ.

ಜೋಗತಿ : ಸೆಲೀ ಅಲ್ಲೊ ಮಗನ ಹುಕ್ಕೇರಿ ಕಾರಂಜಿ.

ಭೀಮ್ಯಾ : ಸಾಹೇಬರೂ ಮಗನ ಅಂತಾರು. ನೀನೂ ಅಂತಿ. ಎವ್ವ ನಿನ್ನ ಹೆಸರೇನಾ?

ಜೋಗತಿ : ಹಳೀ ಹೆಸರೇನ ಮಾಡ್ತಿ? ನೀನs ಒಂದು ಚೆಂದಾಂದ ಆರಿಸಿ ಇಡು.

ಭೀಮ್ಯಾ : ಸಾಹೇಬರ, ಸಾಹೇಬರ ಲಗುಬರ್ರೀ. ಎಲ್ಲಿ ಹ್ವಾದರೊ. ಸಾಹೇಬರ? ಅಂಥಾಂಗ ಎವ್ವ, ನಿನ್ನ ಮನೀ ಕೀಲಿಗಿ ಎಷ್ಟ ಕೈ ಅದಾವು?

ಜೋಗತಿ : ಎಷ್ಟಿದ್ದರೇನ? ಮಲೀಗಿ ಎದ್ದಮ್ಯಾಲ ಧೂಳ ಜಾಡಿಸಿದ ಜೋಗತಿ ಮುತ್ತೋದೇರಿಗಿಂತ ಹೆಚ್ಚಂತ ತಿಳಿ. ಅವ ಬಂದ ಆಡಬೇಕೆಂದರ ಅಂಗಳ ಹೆಂಗಿರಬೇಕ?

ಭೀಮ್ಯಾ : *(ಸಮೀಪಕ್ಕೆ ಸರಿದು)* ಯಾವ, ಅವ?

ಜೋಗತಿ : ಹೌಂದೌಂದ ಅವ.

ಭೀಮ್ಯಾ : ನಿನ್ನ ಮೈಯಾಗ ಅವ ಆಡಾತಾನ ಹೌಂದಲ್ಲ?

ಜೋಗತಿ : ಹೂ ಹೂ ಯಾಕ?

ಭೀಮ್ಯಾ : ಆಗಾಗ ಸಾಹೇಬರೂ ನನ್ನ ಮೈಯಾಗ ಆಡತಾರ.

ಜೋಗತಿ : ಅಯ್ಯ ಲಡದು, ನಿನ್ನ ಸಾಬ ಜೀವಂತ ಅದಾನಂತ ಹೇಳಿದೆಲ್ಲ.

ಭೀಮ್ಯಾ : ಅವನೂ ಸತ್ತಾನೇನ ಹಂಗಾರ?

ಜೋಗತಿ : *(ಧ್ವನಿ ನಡಗಿಸುತ್ತು)* ಅವ್ನೆಂಗೆ ಸಾಯತಾನ? ಹುಟ್ಟಿಲ್ಲ, ಸಾವಿಲ್ಲ ಇಲ್ಲೆದಾನ ಇಲ್ಲಿಲ್ಲ. ಸರವ ಲೋಕಕ್ಕೆಲ್ಲಾಗ ಇರಿವಂಭು ಇರಿವೀ ಹಿಡಕೊಂಡ ಆನೆಂಬೊ ಆನಿಗೆಲ್ಲಾ ಆಧಾರಾದಾವ. ಅವನಾಟ ಏನ್ಕೇಳ್ತೀ ಮಗನ?

ಭೀಮ್ಯಾ : ನೀ ಅವನ್ನ ನೋಡೀದೀ?

ಜೋಗತಿ : ಏನ ಮಾತೋ ತಿಳಿಗೇಡಿ, ಬಾಲಖಾ? ಬಂದ ಬಲಕ್ಕ ಕುಂತ ಮದಿವ್ಯಾಧವ. ಮೈಗೆ ಭಂಡಾರ ಹಚ್ಚಿ ಮುತ್ತ ಕಟ್ಟಿಧಾವ. ದಿನ ಬೆಳಗಾದರ ಈ ಸರೇರದಾಗ ಸರಚೆಂದ ಆಟ ಆಢಾವ. ಆ ಸ್ವಾದರ ಮಾವನ್ನ ನೋಡೀದೀ ಏನಂಥೀಯಲ್ಲೋ?

ಭೀಮ್ಯಾ : ಏನ ವಯಾ ಅವಂದ? ಹೆಂಗದಾನು?

ಜೋಗತಿ : ಖಾಯಂ ಪಂಚವೀಸ ವರಸದ ಹರೆ. ನಿನ್ನ ಸಾಬನ ತಾಜಾ ಹರೇದ ನೆಲಿಯೋಳ ಹೊರಿಸಿನಿ ನುಲೀಗಿ ಸಿಕ್ಕಿಲ್ಲಾದರ, ಅವನ ಹರೇದ ನೆಲಿ ಈ ಜಗತ ಕಟ್ಟಿದ್ದ ಉಪ್ಪಾರಗs ಸಿಕ್ಕಲ್ಲ. ಸರವ ಲೋಕೆಲ್ಲಾ ಬಂದ ಕೊಡ ತುಂಬಿ ತುಂಬಿಕೊಂಡ, ಮ್ಯಾಲ ನಳಾ ಹಚ್ಚಿ ಎಳದರೂ ಒಂದ ಹಿನಿ ಕಮ್ ಬಂದಿಲ್ಲ. ಇಷ್ಟಾದರೂ ಒಂದ ಯಾಕಂಥಾನೇನ? ಒಂದ ಏನಂಥಾನೇನ?

ಭೀಮ್ಯಾ : *(ಗಪ್ಪನೆ ಕಾಲು ಹಿಡಿದು)* ತಾಯೀ ಎಷ್ಟ ಕಾಡಿದಿ ಏನ ಓಡ್ಯಾಡ್ಸಿದಿ? ನಿನ್ನ ಹೆಸರಿನ್ಯಾಗ ಗುಡಿ ಅಂತಿಳದ ಗಟಾರದಾಗೆಲ್ಲಾ ಹೊಳ್ಯಾಡಿ ಹೇಸಿ ಹೇಸಿ ಎಬರೇಸಿ ಹುಡಿಕ್ಯಾಡತೇನು; ಕಂಡ ಕಾಣವೊಲ್ಲಿ. ನೀ ನಮ್ಮ ಸಾಹೇಬರಿಗಿ ಅವನ್ನ ತೋರಸಾಕಬೇಕ.

ಜೋಗತಿ : ಕರೀ ನಿನ್ನ ಸಾಬನ್ನ. ಜೀವಂತದಾನು?

ಭೀಮ್ಯಾ : ಏ ನಾ ಕರದರ ಓ ಅನ್ನಲಿಲ್ಲ. ನೀನs ಕರ್ಯಾಕ ಬೇಕ.

ಜೋಗತಿ : ನಾನಾದರೂ ಕರ್ಯಾಕ ಬೇಕ?

ಭೀಮ್ಯಾ : ಹೌಂದ ನೀನಾದರೂ ಕರ್ಯಾಕ ಬೇಕ.

ಜೋಗತಿ : ಹುಡಕ್ಯಾಡೋ ಹುಡುಗಾ. ನೀ ಹುಡುಕೋದ ಹಿಡಕೊಂಡ ಬಂದ, ಬಾಗಿಲಾಗ ನಿಂತೇನ. ತಗೊಂಡ ಹೋಗ. *(ಇಬ್ಬರೂ ಸ್ವಲ್ಪ ಸಮಯ ಕಾಯವರು. ಭೀಮ್ಯಾ ಎದ್ದು ನೆರಳುಗಳ ಕಡೆಗೆ ಹೋಗಿ ಹುಬ್ಬುಗೈ ಹಚ್ಚಿ ನೋಡಿ ಬಂದು ಕುಳಿತುಕೊಳ್ಳುತ್ತಾ)*

ಭೀಮ್ಯಾ : ಇನ್ನೂ ಅವರಿಗೆ ನಿನ್ನ ಗುರುತ ಹತ್ತಿಲ್ಲೇನವಾ. ಅವರು ಯಾವತ್ತೂ ಹಾಂಗ. ಒಮ್ಮೊಮ್ಮಿ ನನ್ನ ಗುರುತಾನs ಹಿಡ್ಯಾಣಿಲ್ಲಂದರ.

ಜೋಗತಿ : ಹಂತಾದೇನ ಆಗೇತೆವಗ?

ಭೀಮ್ಯಾ : ಏನ್ಹೇಳ್ಲಿ ಜೋಗವ್ವಾ? ಆ ಕೊಪ್ಪರಗಿ ಮುತ್ತೋದೇರ ಅಂತ ನಾ ಹೇಳ್ಲಿಲ್ಲ?

ಜೋಗತಿ : ಹೂಂ ಹೂಂ.

ಭೀಮ್ಯಾ : ಅವರ ಇಷ್ಟ ಧಡ್ಡರಧಾರಲಾ,- ನಮ್ಮ ಸಾಹೇಬರ ಒಂದಮಾತ ತಿಳ್ಯಾಣಿಲ್ಲವರಿಗಿ. ಅವರ ಮಾತ ಇವರಿಗಿ ತಿಳ್ಯಾಣಿಲ್ಲ. ತಿಳೀಲಾರಕ ಬೈದಾಡಾಕ ಸುರು, ನೀ ಹೊಲಸ ನೀ ಹೊಲಸ. ಕಡೇಕ ಬ್ಯಾಸತ್ತ ನಾನ, ಏ ಹುಚ್ಚಗೋಳ್ರಾ, ಕೂಡಿ ಇರೋದು ಹಿಂಗಲ್ಲಾ. ಹೂ ಹೂ ಅಂದರ ಕೂಡಿದಾಂಗ ಅಂತ ಹೇಳಿ ಬಂದ್ನಿ. ಈಗ ತಗೊಳ್ಳವಾ? ನೀನು ಹೂ, ನಾನು ಹೂ, ಹೂ ಹೂ ಹೂ. ತಲೀ ಚೆಟ್ಟ ಹಿಡದ ಮನೀಗಿ ಮನೀನ ನೆಳ್ಳಿಧಾಂಗ ಕೇಳತೈತಿ. ಏನ ಮಾಡತಿ?

ಜೋಗತಿ : ಹಿಂತಾ ಮಂದಿ ನನ್ನ ಹಂತ್ಯಾಕ ಸಾಲಗಟ್ಟಿ ಬರತಾರ. ನನಗ ತಿಳೀಧೇನೋ ತಿಳಿಗೇಡಿ ಬಾಲಖಾ?

ಭೀಮ್ಯಾ : ಕೆಲಸ ಕೆಟ್ಟಿತ.

ಜೋಗತಿ : ಹಂತಾದೇನಾತ?

ಭೀಮ್ಯಾ : ಸಾಹೇಬರ ಮನೀ ಚಾಕರೀ ಬಿಟ್ಟ ಬಿಡಬೇಕಂತ ವಾಟಾಗಟಿ ಹಾಕ್ಕ್ಯೊಂಡ ನಾ ಕುಂತೇನು. ಇವರ್ನ ಬಿಟ್ಟ ಇನ್ನೊಬ್ಬ ಇವನs ಗಂಟಬಿದ್ದರೇನ್ಮಾಡ್ಲಿ?

ಜೋಗತಿ : ಚಿಂತೀ ಮಾಡಬ್ಯಾಡ ನಿನಗ ಪೋಲೀಸ ಕೆಲಸ ಸಿಗತೈತಿ.

ಭೀಮ್ಯಾ : ಖರೆ?

ಜೋಗತಿ : ನನ್ನ ವಾಕ್ಯೆ ಹುಸೀ ಹೋಗಾಣಿಲ್ಲ. ನಾಲಿಗ್ಯಾಗ ಕರೀಮಚ್ಚಿ ಕೊಟ್ಟಿದಾನ ಅವ. (ನಾಲಿಗೆ ತೆಗೆದು ತೋರುತ್ತಾಳೆ)

ಭೀಮ್ಯಾ : ಅದ ನಾಲಗ್ಯಾಗ ಇದೊಂದ ಹೇಳ. ನಮ ಸಾಹೇಬರಿಗಿ ಅವ ಸಿಗತಾನ?

ಜೋಗತಿ : ಅವನ ಮುಂಗೈಯಾಗ ಹಿಂಗ್ಹಿಡದ, ನಿನ್ನ ಸಾಬನ ಅಂಗೈಯಾಗ ಇಟ್ಟರಾತಿಲ್ಲೊ?

ಭೀಮ್ಯಾ : *(ಗಪ್ಪನ ಕಾಲು ಹಿಡಿದು)* ಅಷ್ಟ ಮಾಡ ಹಡದವ್ವಾ. ನಿನ ಪಾದ ತೊಳದ ನೀರ ಕುಡೀತೇನು. ಏಳ ಒಳಗ ಹೋಗೋಣು.

ಜೋಗತಿ : ಯಾಕ?

ಭೀಮ್ಯಾ : ಸಾಹೇಬರ್ನ ಎಬ್ಬಿಸಿಕೊಂಡ ಬರಾಕ.

ಜೋಗತಿ : ಏಳವೊಲ್ಲರಂತೀ.

ಭೀಮ್ಯಾ : ನೆನಪಾತೇಳ ನೀ *(ಏಳುವರು. ನಿಧಾನವಾಗಿ ಮಾತನಾಡುತ್ತಲೇ ರಂಗದ ಪ್ರದಕ್ಷಿಣೆ ಹಾಕುತ್ತ)* ಸಾಹೇಬರ ಕುರುವಿನ ಮ್ಯಾಲ ಕೈಯಾಡಿಸಿದರ ಅವರಿಗೆ ಎಚ್ಚರಾಗತೈತಿ. ಮೆತ್ತಗ ತುರುಸಬೇಕು. ಯಾಕಂದರ ಆ ರಂಡೇರ ತುರಿಸಿ ತುರಿಸಿ ಕೀವಾ ರಕ್ತಾ ಬಸೀತೈತಿ.

ಜೋಗತಿ : ಎಲ್ಲಾ ಬಿಟ್ಟ ಅಲ್ಲೆ ಯಾಕಾಗೇತಿ?

ಭೀಮ್ಯಾ : ನಿನ್ನ ಮೈಯಾಗ ಬರ್ತಾನಲ್ಲಾ ಅವಾ ಇವ ಒಂದs.

ಜೋಗತಿ : ಒಂದs?

ಭೀಮ್ಯಾ : ನನಗೇನ ಅದರಾಗ ಸಂಶೇನಽ ಇಲ್ಲ.

ಜೋಗತಿ : *(ಕೈ ಮುಗಿದು ನಿಂತು)* ಅದೆಂಗಾದೀತ?

ಭೀಮ್ಯಾ : ಅದೆಂಗ ಅಂದರ ಸಣ್ಣಂದಿರತ ಇಬ್ಬರೂ ಒಂದಲ್ಲೇ ಹುಟ್ಟಿ ಒಂದಲ್ಲೇ ಬೆಳೆದು ಒಂದಽ ಸಾಲಿ ಬರದವರು. ಅವಗ ಖುಷೀ ಆದರ ಇವರು ನಗಬೇಕು. ಇವರಿಗಿ ನೋವಾದರ ಅವ ಅಳಬೇಕು. ಒಟ್ಟ ಇಬ್ಬರೂ ಒಂದ ಬಾಯಲೇ ಉಂಡ ಒಂದ ಮುಕಳೀಲೆ ಹೇತವರಂದರ ಇದರ- ಮ್ಯಾಲ ತಿಳೀಯಲ್ಲ. ಇಬ್ಬರದೂ ಹೊಕ್ಕಳ ಬಾಲ ಒಂದಽ. ಕತ್ತಿರಸಬೇಕಂತ ಇಂದ ನಾಳಿ ಇಂದನಾಳಿ ಮುಂದ ಹದಿಮೂರ ವರಸ ಹಾಂಗ ದಾಟಿತು. ಸಾಹೇಬರ ಮುಲ್ಕೀ ಪರೀಕ್ಷೇಕ ಹೋಗೂದ ಬರಾಣಾ ಕತ್ತರಿಸಿದರು. ಇಬ್ಬರೂ ಅತ್ತ, ಚೀರಿ, ಹೊಕ್ಕಳ ತುಂಬ ರಗತಾಗಿ, ಆ ಗಾಯ ಇನ್ನೂ ಮಾದಿಲ್ಲ. ಅಂದಿನಿಂದ ಅವನ ತಲಾಸದಾಗಽ ಅದಾರು, ಅವ ಸಿಕ್ಕೇ ಇಲ್ಲ.

ಜೋಗತಿ : ಹಂಗಾರ ನಮ್ಮಾವ ನನ್ನ ಮುಂದ್ಯಾಕ ಹೇಳಲಿಲ್ಲ?

ಭೀಮ್ಯಾ : ನೀ ಕೇಳಿಲ್ಲಾ ಅವ ಹೇಳಿಲ್ಲಾ
*(ಎನ್ನುತ್ತ ಭೀಮ್ಯಾ ಒಳಗೆ ಹೋಗುತ್ತಲೂ ಜೋಗತಿ ತಲೆ ಸೆರಗು ತೆಗೆದ ಹೊಕ್ಕ ಳಿಗೆ ಕುಂಕುಮ ಸವರಿಕೊಂಡು ಸೆರಗನ್ನು ಕಂಕುಳಲ್ಲಿ ಸಿ ಕ್ಕಿಸಿಕೊಳ್ಳುವಳು. ಬಂಡಾರ ಹಣೆಗೆ ಬಡಿದುಕೊಳ್ಳುವುಷ್ಟರಲ್ಲಿ ಭೀಮ್ಯಾ ವಾಪಾಸ್ಸು ಬರುವನು.)*

ಜೋಗತಿ : ಕರೀ ಅವನ್ನ.

ಭೀಮ್ಯಾ : ನೀ ಬರಾಕ ಬೇಕ.

ಜೋಗತಿ : ಕರತಾ ಇಲ್ಲಿ, ಅಂದರ.

ಭೀಮ್ಯಾ : ನಿನ್ಹೆಸರ ಏನ್ಹೇಳಲಿ?

ಜೋಗತಿ : ಅವಂದೇನ?

ಭೀಮ್ಯಾ : ನಾನೂ.

ಜೋಗತಿ : ನಂದೂ ನಾನೂ ಹೋಗ.
*(ಭೀಮ್ಯಾ ಒಳಗೆ ಹೋಗುತ್ತಲೂ ತುರುಬು ಬಿಚ್ಚಿ ಕೂದಲು ಮೈ ತುಂಬ ಪಸರಿಸಿಕೊಳ್ಳುತ್ತಾಳೆ. ರಂಗದ ಬೆಳಕು ಕಂದಿ ಹಳದಿಯ ಎಳೆಬೆ ಳಕು ಮಾತ್ರ ರಂಗದ ಮೇಲೆ ಬಿದ್ದು ಉಳಿದೆಡೆಯಲ್ಲ ಮೊದಲಿನಂತೆ ಕತ್ತಲೆ ಆವರಿಸಿದೆ. ಹೆಣ್ಣಿನ ಧ್ವನಿಗಳು ಅತ್ಯಂತ ಅಸ್ಪಷ್ಟವಾಗಿ ನರಳ ತೊಡಗಿ, ಒಂದರಲ್ಲಿ ಒಂದು ಸೇರಿ ಹೂ, ಹೂ, ಹೂ, ಹೂ, ಹೂ ಎಂದು ತಾಳಿಗನುಗುಣವಾಗಿ ಒಂದೇ ಸ್ತರದಲ್ಲಿ, ಬರಬರತ್ತ ಸ್ಪಷ್ಟವಾಗು ತ್ತ ಬರುತ್ತದೆ. ಭೀಮ್ಯಾ ನಾಣಿಯ ಕೈ ಹಿಡಿದು ರೋಗಿಯನ್ನು ತರುವಂತೆ ಕರೆತಂದು ಕುರ್ಚಿಯಲ್ಲಿ ಕೂರಿಸುತ್ತಲೂ ನಾಣಿ ಜೋಗತಿಯ ನ್ನು ಗಮನಿಸದೆ ನರಳುತ್ತ ತಲೆ ಹಿಂದಕ್ಕಾನಿಸಿ ಒರಗುತ್ತಾನೆ. ನರಳುವ ಧ್ವನಿ ಈಗ ಬಹಳ ಸ್ಪಷ್ಟವಾಗಿದೆ. ಜೋಗತಿ ತನ್ನ ಹೆಜ್ಜೆಯ ಗೆಜ್ಜೆ ಗಳನ್ನು ಸ್ಪಷ್ಟವಾಗಿ ಸಪ್ಪಳಿಸುತ್ತ ನಾಣಿಯ ಎದುರಿಗೆ ಹೋಗಿ ಹೊಕ್ಕು ಳ ತೆರೆದು ತೋರಿ ಠೀವಿಯಲ್ಲಿ ನಿಂತು)*

ಜೋಗತಿ : ಸಿಕ್ಕತೇನಪಾ ಗುರುತ?

ನಾಣಿ : *(ಗಮನಿಸಿ ಕೈ ಮುಗಿದು)*
ಶರಣಾ ತಾವು ಯಾರು?

ಭೀಮ್ಯಾ : ಸಾಹೇಬರ, ಈಕಿನಽ ಅವನ್ನ ಇಟ್ಟಗೊಂಡಾಕಿ. ಈಕೀ ಸರೇರದಾಗ ದಿನ್ನಾ ಬಂದ ಸರಚೆಂದ ಆಟಾ ಆಡಿ ಹೋಗತಾನಂತ್ರಿ. ನೀವ ಬೇಕಾದ್ದ ಕೇಳ್ರಿ, ಹೇಳತಾಳ. ಹೆಸರ ಹೇಳಿದರ ಸಾಕು. ಆ ಮನಿಶಾ ಯಾರಿಗಿ, ಎಂದ, ಯಾಕ ಹುಟ್ಟಿದಾ ಎಲ್ಲಾ ಹೇಳತಾಳ್ರಿ.

ಜೋಗತಿ : ತಿಳೀತೇನ?

ನಾಣಿ : ಶರಣ ತಾವು ಯಾರು?

ಭೀಮ್ಯಾ : ಭಾಳಂದ್ರ ಭಾಳ ಶಾಣ್ಯಾಳ್ರಿ ಮತ್ತ, ಬೇಕಾದಂಥಾ ಗಂಟ ಅಗ್ಗಂಟ ಕಗ್ಗಂಟೆಲ್ಲಾ ಈಕಿನ್ನೋಡೇ ಬಿಚ್ಚತಾವರಿ.

ಜೋಗತಿ : ಅರಿವಾತೇನ?

ಭೀಮ್ಯಾ : ಸಾಹೇಬರ ಈಕೀ ಪುಸ್ತೇಕದಾಗೂ ರಗಡ ಪಾನ ಅದಾವ್ರೀ. ನಾಕಮಂದಿ ಧಣೀ ನೆಗವತಾರ ನೋಡ್ರಿ. ಬೇಕಾದ ಬಾಯ ಲೆಕ್ಕಾ ಹೇಳ್ರಿ. ಹಾ ಅನ್ನೂದರಾಗ ಬಿಡಸ್ತಾಳ.

ಜೋಗತಿ : ಈಗರೆ ತಿಳಿತಿಲ್ಲೊ?

ನಾಣಿ : ತಾವು ಯಾರು? ಶರಣನಾ?

ಜೋಗತಿ : ಇನ್ನೂ ಯಾರೇನೋ?

*(ಆವೇಶದಿಂದ ಸೆರಗನ್ನು ಇನ್ನಷ್ಟು ಸರಿಯಾಗಿ ಸಿಕ್ಕಿಸಿಕೊಂಡು, ಕುಣಿಯಲು ಅವಕಾಶವಾಗುವಂತೆ ಕಚ್ಚೆ ಹಾಕಿಕೊಳ್ಳುತ್ತಾಳೆ. ನರಳುವ ಧ್ವನಿಗಳು ಇನ್ನೂ ಸ್ಪಷ್ಟವಾಗುತ್ತವೆ. ಜೋಗತಿ ರಭಸದಿಂದ ಕುಣಿಯಲಾರಂಭಿಸಿ ರಂಗವನ್ನು ಮೂರು ಪ್ರದಕ್ಷಿಣೆ ಹಾಕಿ, ಕುಣಿಯುತ್ತಲೇ ಬಳಿಗೆ ಬಂದು ತಲೆಗೂದಲನ್ನು ಮುಖದ ಮೇಲೆ ಬಿಟ್ಟುಕೊಂಡು ನಾಣಿಯ ಹೊಕ್ಕಳಿನ ಮೇಲೆ ಕುಡುಗೋಲು ಮಸೆದಂತೆ ಕೂದಲನ್ನು ಆ ಕಡೆ ಈ ಕಡೆ ಆಡಿಸಿತೊಡಗುತ್ತಾಳೆ. ಕೆಲ ಹೊತ್ತು ಹೀಗೆ ಮಾಡಿದ ಮೇಲೆ ನಾಣಿ ಸುಮ್ಮನೆ ಅವಕ್ಕಾಗಿ ಕೂತಿರುವಾಗ ಜೋರಿನಿಂದ ಅವನ ಹೊಕ್ಕುಳಿಗೆ ಕೂದಲಿನಿಂದ ಕಟಿಯುತ್ತಾಳೆ. ಮತ್ತೆ ಮಸೆದು, ಅಪ್ಪಳಿಸಿ ಹೀಗೆ ಮೂರು ಸಲ ಮಾಡಿ ರೀವಿಯಲ್ಲಿ ನಿಂತು)*

ಜೋಗತಿ : ಸಿಕ್ಕಿತ ಗುರುತ?

ನಾಣಿ : ಶರಣಾ ತಾವು ಯಾರು?

*(ನರಳುವ ನೆರಳುಗಳೆಲ್ಲ ಈಗ ಸ್ಪಷ್ಟವಾಗಿ ಕೇಕೆ ಹಾಕಿ ನಗುತ್ತ, ರಂಗದ ಮೂಲೆ ಮೂಲೆಯಲ್ಲೆಲ್ಲ ಸ್ತ್ರೀಯರಿಗಾಗಿ ಗೋಚರಿಸುತ್ತಾರೆ. ಅವರಲ್ಲಿ ಗೀತಾ ಒಬ್ಬಳಿದ್ದಾಳೆ, ಜೋಗತಿ ಚೀರಿ ದೇವರು ತುಂಬಿ ನಡುಗಲಾರಂಭಿಸುತ್ತಾಳೆ. ಉಳಿದ ಸ್ತ್ರೀಯರೆಲ್ಲ ಮಾತಿನ ಮಧ್ಯೆ ಮಧ್ಯೆ ಗಹಗಹಿಸಿ ನಕ್ಕು ಓಡಾಡುತ್ತಿದ್ದರೂ ಈ ಮೂವರಿಗೆ ಅವರಕಡೆ ಗಮನವಿಲ್ಲ.)*

ಜೋಗತಿ : *(ಚೀರುತ್ತ)*

ಒಂಧಲ್ಲೆ ಹುಟ್ಟಿ ಒಂದಲ್ಲೆ ಬೆಳದ ಮತ್ತ ಮರತೇನಂತೀಯಲ್ಲೊ- ಏನ್ಹೇಳ್ಲಿ?

ನಾಣಿ : ಶರಣಾ ಸಿಕ್ಕಿತು ಗುರುತ!

ಜೋಗತಿ : ಹೇಳ ನಾ ಯಾರು?

ನಾಣಿ : ಅರಗೊಡ್ಡಿ.
*(ಹೆಂಗಸರು ಗಹಗಹಿಸಿ ನಗುತ್ತಾರೆ)*

ಜೋಗತಿ : ಯಾರಾ?

ನಾಣಿ : ಬಯಲಾಟದ ಅರಗೊಡ್ಡಿ, ವಿದೂಷಕ.

ಜೋಗತಿ : ಏನಂದಿ?

ನಾಣಿ : ದೇವರ ಹತ್ತಿರ ಹೋಗಿ ದೇವರ್ಹಾಂಗ ನಟನಾ ಮಾಡಾಕ ಕಲತ ಬಂದಿ? ನಿನ್ನ ಬಿಟ್ಟ ಇನ್ನೊಂದರ್ಹಾಂಗ ಆಡಿದರ ಅದೆಲ್ಲಾ ನಟನಾ ಅಲ್ಲೇನ? ನಾಟಕ ಮಾಡಿದರ ನಗೀ ಬರದ ಇನ್ನೇನಾಗತೈತಿ? ಒಂದು ಸಲ ಆದರೂ ಕನ್ನಡೀ ಮುಂದ ಯಾರಿಲ್ಲದಾಗಾದರೂ ಬತ್ತಲಾಗಬಾರದ? ನೋಡಿಕೋಬಾರದ? ಉಟ್ಟ ಉಡುಪ ಯಾರದು? ಅರಗೊಡ್ಡಿ ಅಂದರ ಸಿಟ್ಟಿಗಿ ಬರತಿ. ಹೋಗ್ಹೋಗ ನಿನಗ ನೋಡೋದಕ್ಕ ನಮ್ಮಲ್ಲೇನಿಲ್ಲ. ಹೊರಬೀಳು.

ಜೋಗತಿ : *(ಚೀರಿ)*

ತಿಳಿದ ಮಾತಾಡಲೇ ಮಗನ.
*(ನಾಣಿ ಎದ್ದು ನಿಂತು ಪ್ಯಾಂಟಿನ ಜೇಬಿನಿಂದ ಪಿಸ್ತೂಲ ತೆಗೆದು ಅವಳಿಗೆ ಗುರಿ ಹಿಡಿದು)*

ನಾಣಿ : ಹೊರಬೀಳ.

ಜೋಗತಿ : *(ಧ್ವನಿ ಏರಿಸಿ)*

ಹುಟ್ಟ ಹೊಂದಿಲ್ಲದವನನ್ನ ಕೊಂದೇನಂಬು ಹುಡಗಾ, ನೀ ಏನ, ನಿನ್ನ ಪಿಸ್ತೂಲೇನ? ಹಾರಸು ತಾಕತ್ತಿದ್ದರ,
*(ರಭಸದಿಂದ ಕುಣಿಯ ತೊಡಗುತ್ತಲೂ ಮೂಲೆಯ ಸ್ತ್ರೀಯರೆಲ್ಲ ಕೇಕೆ ಹಾಕುತ್ತ ಕುಣಿದಾಡುತ್ತಾರೆ)*

ನಾಣಿ : ಭೀಮ್ಯಾ.

ಭೀಮ್ಯಾ : ಸಾಹೇಬರ.

ನಾಣಿ : ಹೊರಗಹಾಕ.

ಭೀಮ್ಯಾ : ಶರಣರ ಹೊರಬೀಳ್ರೀ.

ನಾಣಿ : ಹೊರಗ್ಹಾಕ.

ಭೀಮ್ಯಾ : ಶರಣರ ಹೊರಬೀಳ್ರಿ. ಸಾಹೇಬರ ಚೇರಾಪಟ್ಟೆ ಯಾಕೊ ಬ್ಯಾರೆ ಕಾಣತೈತಿ ಹೊರಬೀಳ್ರಿ.

ನಾಣಿ : ಹೊರಗ್ಹಾಕು.

ಭೀಮ್ಯಾ : ಶರಣರಽ

*(ಎಂದು ಹೇಳುತ್ತಿರುವಂತೆ ಗುಂಡು ಹಾರಿ, ಕುಣಿಯುತ್ತಿದ್ದ ಜೋಗತಿ ಸತ್ತು ಬೀಳುತ್ತಾಳೆ. ಸ್ತ್ರೀಯರೆಲ್ಲ ಕಿರುಚುತ್ತ ರಂಗದ ಸುತ್ತ ಚೆಲ್ಲಾಪಿಲ್ಲಿಯಾಗಿ ಓಡ್ಯಾಡಿ ಒಬ್ಬೊಬ್ಬರೇ ಓಡಿ ಹೋಗಿ ರಂಗ ಒಮ್ಮೆಲೆ ಶಾಂತವಾಗುತ್ತದೆ. ಗುಂಡು ಹಾರಿಸಿದ ಭಂಗಿಯಲ್ಲೇ ನಾಣಿ ದಿಗ್ಭ್ರಮೆಯಿಂದ ನಿಂತಿದ್ದಾನೆ. ಭೀಮ್ಯಾ ಬಾಯಿ ತೆರೆದವನು ತೆರೆದುಕೊಂಡೇ ನಿಂತಿದ್ದಾನೆ. ಅಷ್ಟರಲ್ಲಿ ಪೋಲೀಸರ ಸೀಟಿ ಧ್ವನಿ– ಮೊದಲು ಒಂದು, ಆ ಮೇಲೆ ಅನೇಕ ಕೇಳಿ ಫೋಜದಾರನೊಬ್ಬ ನಾಲ್ಕೈದು ಪೋಲೀಸರನ್ನು ಕೂಡಿಕೊಂಡು ಪಿಸ್ತೂಲು ಹಿಡಿದುಕೊಂಡೇ ಬರುತ್ತಾನೆ. ಭೀಮ್ಯಾ ಹೆದರಿ ನಾಣಿಯನ್ನು ಅಲುಗುತ್ತಲೂ ಎಚ್ಚರವಾಗಿ ಗಡಬಡಿಸಿ ಗಪ್ಪನೆ ಫೋಜದಾರನ ಕಾಲು ಹಿಡಿದುಕೊಳ್ಳುತ್ತಾನೆ.)*

ನಾಣಿ : ಸಾಹೇಬರ, ಸಾಹೇಬರ ನಾನಲ್ರೀ, ಒಳಗೆ ಓಡಿಹೋದ. ಇಲ್ಲೆ ಮನ್ಯಾಗ ಅಡಗಿರಬೇಕ್ರಿ. ಅಲ್ಲೇನೋಽ?

ಭೀಮ್ಯಾ : ಹೌಂದ್ಹೌಂದ್ರಿ ಕೈಯಾಗ ಪಿಸ್ತೂಲೈತ್ರಿ.

*(ನಾಣಿ ಗಡಬಡಿಸಿ ಪಿಸ್ತೂಲಿಸೆಯುವನು)*

ಗುರಿ ಹಿಂಗೆಂದೂ ಹಿಡಿದಾವಲ್ರಿ.

ನಾಣಿ : ಹೊಡೆದ ಹಾಂಗಽ ನಿಂತಿದ್ರಿ. ನಿಮ್ಮ ಸೀಟಿ ಕೇಳಿ ಓಡಿ ಹ್ವಾದ್ರಿ.

ಭೀಮ್ಯಾ : ಹೌಂದ್ಹೌಂದ್ರಿ. ಹೊಕ್ಕಳಮ್ಯಾಲ ರಗತ ಇನ್ನೂ ಹತ್ತಿರ ಬೇಕ್ರಿ.

ಫೋಜದಾರ : ಹೆಂಗದಾನವ?

ಭೀಮ್ಯಾ : ಎರಡ ಕಾಲಾ, ಎರಡ ಕೈಯಾ, ಒಂದ ಮೋತೊ. ಚೆಲುವಂತ ನಮ್ಮ ಸಾಹೇಬರ ಹೇಳತಿದ್ದರ್ರೀ?

ನಾಣಿ : ನಿಮ್ಮ ಹೆಂಡರನ್ನೆಲ್ಲಾ ಅವ ಓಡಿಸಿಕೊಂಡ ಬಂದಿದ್ದರಿ. ಅಲ್ಲೇನೋ?

ಭೀಮ್ಯಾ : ಹೌಂದಹೌಂದ್ರಿ. ಇಕ್ಕ, ಈಗ ಅವರೆಲ್ಲಾ ಓಡಿಹ್ವಾದರ್ರಿ.

ಫೋಜದಾರ : ಇಲ್ಲಿ ಯಾಕ ಬಂದಿದ್ದವ?

ಭೀಮ್ಯಾ : ಸಾಹೇಬರ ಯಾಕ ಬಂದಿದ್ದರೀ?

ನಾಣಿ : ಅವರ ಮನೀಗೂ ನಮ್ಮ ಮನಿಗೂ ನಡುವ ಒಂದಽ ಗ್ವಾಡಿರಿ.

ಫೋಜದಾರ : ಈ ಜೋಗತಿ ಯಾಕೆ ಬಂದಿದ್ಳು?

ಭೀಮ್ಯಾ : ಭೇಟಿ ಆಗಾಕರಿ.

ಫೋಜದಾರ : ಆತೇನ?

ಭೀಮ್ಯಾ : ಅಷ್ಟರಾಗ ಧಡಂದುಡಿಕಿ ಆತಲ್ರಿ.

ಫೋಜದಾರ : ಏನವನ ಹೆಸರ?

ಭೀಮ್ಯಾ : ಸಾಹೇಬರ ಏನ್ರಿ?

ನಾಣಿ : ಈ ಈ ಈ, ಈಈ ಮುದುಕರು ಅವಗ ದೇವರೂ ಅಂತ ಕರೀತಿದ್ದರ ನೋಡ್ರಿ.
*(ಕೂಡಲೇ ಪೋಜದಾರ ಬೇರೆ ಪೋಲೀಸರಿಗೆ ಒಂದೊಂದು ದಿಕ್ಕಿನಲ್ಲಿ ಸಂಶೋಧಿಸುವಂತೆ ಸೂಚಿಸಿ ತಾನೊಂದು ದಿಕ್ಕಿನಲ್ಲಿ ಮಾಯವಾಗುತ್ತಾನೆ. ಭೀಮ್ಯಾ ಸಹ ಅವರೊಂದಿಗೆ ಹೋದಾಗ ನಾಣಿ ಬಹಳ ಕುತೂಹಲದಿಂದ ಕಾಯುತ್ತಿರುತ್ತಾನೆ. ಕೆಲ ಸಮಯವಾದ ಮೇಲೆ ಪೋಜದಾರ ಎರಡು ಮೂರಡಿ ಎತ್ತರದ ಗೊಂಬೆಯೊಂದನ್ನೆತ್ತಿಕೊಂಡು ತರುತ್ತಾನೆ. ಅದರ ಹೊಕ್ಕುಳಲ್ಲಿ ಹಸೀ ನೆತ್ತರಿದೆ. ನೋಡಿದೊಡನೆ ನಾಣಿ ಆನಂದಭರಿತನಾಗಿ ಕಸಿದುಕೊಂಡು ತಬ್ಬಿಕೊಳ್ಳುತ್ತಾನೆ. ಕಣ್ಣೀರು ಸುರಿಸುತ್ತ.)*

ನಾಣಿ : ನಾನೂ! ನಾನು! ಇಷ್ಟು ದಿನ ಎಲ್ಲಿದ್ದೆ! ಎಷ್ಟು ಹುಡಿಕಿದೆ! ಬೀದಿ ಮನೀ ಮಠ ದೇಶ ಅಲೆದಾಡಿದೆ! ಸುದ್ದಿಲ್ಲ, ಪತ್ರ ಇಲ್ಲ. ಹುಡುಕಿದೆ! ಚಿಂತಿ ಮಾಡಬ್ಯಾಡ. ಒಳ್ಳೊಳ್ಳೆ ಡಾಕ್ಟರದಾರ. ನಾನೂ ನೋಡಿದ್ಕೂಡಲೆ ಎಲ್ಲಾರ ಪತ್ತಾ ನೆನಪಾಗತಾವ. ಆ ಪೋಲೀಸರಿಗಿ ಹೇಳಬಿಡ. ನಾ ಕೊಂದಿಲ್ಲ ಅಂತ ಹೇಳ.
*(ಗೊಂಬೆ ಮಕ್ಕಳ ಧ್ವನಿಯಲ್ಲಿ ವಾವಾ? ಎಂದು ಹೇಳುತ್ತದೆ)*

ಏನಂದಿ? ವಾವಾ! ವಾವಾ! ನೆನಪ ಆಗವಲ್ದಲ್ಲ. ಡಿಕ್ಸನರಿ, ಡಿಕ್ಸನರಿ.
*(ಗೊಂಬೆಯನ್ನು ಕುರ್ಚಿಯ ಮೇಲೆ ಕೂಡ್ರಿಸಿ, ಒಳಗೋಡಿ, ಡಿಕ್ಸನರಿ ತರುತ್ತಾನೆ. ವಾ! ವಾ! ವಾ! ವಾ! ಎಂದು ಹೇಳುತ್ತಾ ಹುಡುಕುತ್ತಾನೆ ಮತ್ತೆ ಓಡಿಹೋಗಿ ಇನ್ನೊಂದು ತರುತ್ತಾನೆ. ಇನ್ನೊಂದು, ಮತ್ತೊಂದು ಹೀಗೆ ರಾಶಿ ರಾಶಿ ಡಿಕ್ಸನರಿ ತಂದು ಭಾವುಕನಾಗಿ ಹುಡುಕುತ್ತಿರುವಂತೆ ಪೋಜದಾರ ಆ ಗೊಂಬಿಯ ಅಂಗಾಂಗಳನ್ನು ಕಿತ್ತು ರಂಗದ ಮೂಲೆ ಮೂಲೆಗೆ ಪ್ರೇಕ್ಷಕರಲ್ಲಿ ಎಸೆಯುತ್ತಾನೆ. ಬರೀ ದಡ ಉಳಿದ ಮೇಲೆ ಜೋಗತಿಯ ಶವದ ಮೇಲೆ ಇಟ್ಟು, ಬೇಡಿ ತೆಗೆದು ನಾಣಿ ಚೀರುತ್ತಿದ್ದರೂ, 'ಯಾಕರಿ ನಾನಲ್ಲರೀ' ಎನ್ನುತ್ತಿದ್ದರೂ ಅವನನ್ನು ಬಂಧಿಸಿ ಹೆಣದ ಎದುರಿಗೆ ಕುರ್ಚಿಯಲ್ಲಿ ಕೂರಿಸಿದಾಗ, ಕರುಣೆ ಬರುವ ಹಾಗೆ ಅಳುತ್ತಾನೆ. ಅಷ್ಟರಲ್ಲಿ ಭೀಮ್ಯಾ ಗಂಟು ಕಟ್ಟಿ ಹೊರಬರುತ್ತಾನೆ.)*

ಪೋಜದಾರ : ನಡೀಲೇ ನಿನಗ ಪೋಲೀಸ ಕೆಲಸ ಕೊಡತೀನಿ.
*(ಎಂದು ಹೇಳಿ ಎಲ್ಲರೂ ಹೊರಟಾಗ, ನಾಣಿ ಅಳುತ್ತ ಬೆನ್ನು ಹತ್ತಬೇಕೆನ್ನುತ್ತಾನೆ. ಅಷ್ಟರಲ್ಲಿ ಪೋಜುದಾರ ಉಳಿದ ಪೋಲೀಸರಿಗೆ ಕಣ್ಣಸನ್ನೆ ಮಾಡುತ್ತಲೂ ಅವರು ನಾಣಿಯನ್ನು ಮೊದಲಿನ ಭಂಗಿಯಲ್ಲಿ ಕೂರಿಸಿ ಹಗ್ಗದಿಂದ ಕುರ್ಚಿಗೆ ಬಂಧಿಸುತ್ತಾರೆ. ಅವನು ಒದ್ದಾಡಿ, ಹೆಣ ನೋಡಲಾರದೆ ಕಿರುಚುತ್ತಿದ್ದರೆ ಉಳಿದವರೆಲ್ಲ ಹೋಗುತ್ತಾರೆ. ನಾಣಿ ಒದ್ದಾಡಿ ಅಳುತ್ತ ಚೀರುತ್ತಿರುವಂತೆ ಬೆಳಕು ಕಂದಿ, ಕಂದಿ ತೆರೆ ಬೀಳುತ್ತದೆ).*